ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 27 ಬುಧವಾರ 2022

ಸಂಪುಟ: 43 | ಸಂಚಿಕೆ: 102 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮುಖ್ಯಮಂತ್ರಿ ಬೊಮ್ಮಾಯಿ ಸರ್ಕಾರಕ್ಕೆ ಒಂದು ವರ್ಷ

ನಾಳೆ ಹಲವು ಜನಪರ ಯೋಜನೆಗಳ ಘೋಷಣೆ



- ●ಮತದಾರರ ಸೆಳೆಯಲು ಮಹಾಪ್ಲಾನ್ ●ಅಕ್ರಮ–ಸಕ್ರಮವೂ ಸೇರಿದಂತೆ ಎಂಟು ಹೊಸ ಯೋಜನೆ ಪ್ರಕಟಿಸುವ ಉದ್ದೇಶ ●ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ನಡೆಯುವ ಸಾಧನಾ ಸಮಾವೇಶದಲ್ಲಿ ಮಹಾ ಘೋಷಣೆಗೆ ಸಿಎಂ ನಿರ್ಧಾರ

ಬೆಂಗಳೂರು, ಜು.26(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣಾ ದೃಷ್ಟಿಯನ್ನಿಟ್ಟುಕೊಂಡು ಮತದಾರರನ್ನು ಸೆಳೆಯಲು ಬಹು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕೆಲವು ಜನಪರ ಯೋಜನೆಗಳಿಗೆ ಜುಲೈ 28 ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮುಕ್ತಿ ನೀಡಲಿದ್ದಾರೆ.

ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಅಕ್ರಮವಾಗಿ ನಿರ್ಮಿಸಿರುವ ಮನೆಗಳ ಸಕ್ರಮದ ಆದೇಶ ಸೇರಿದಂತೆ ಎಂಟು ಹೊಸ ಯೋಜನೆ ಪ್ರಕಟ ಮಾಡುವುದಲ್ಲದೆ, ಆದೇಶವನ್ನು ಅಂದೇ ಹೊರಡಿಸಲಿದ್ದಾರೆ.



ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಅಂದು ಬೆಳಗ್ಗೆ ನಡೆಯುವ ತಮ್ಮ ಒಂದು ವರ್ಷದ ಸಾಧನಾ ಸಮಾವೇಶದಲ್ಲಿ ನಗರಾಭಿವೃದ್ಧಿ, ಕಂದಾಯ, ಜಲ ಸಂಪನ್ಮೂಲ, ಶಿಕ್ಷಣ ಆರೋಗ್ಯ ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಹಾಗೂ ಪಶುಸಂಗೋಪನಾ ಇಲಾಖೆಯ ವ್ಯಾಪ್ತಿಯಲ್ಲಿ ಬಡವರು ಮತ್ತು ಜನರಿಗೆ ಸ್ಪಂದಿಸುವ ಕಾರ್ಯಕ್ರಮಗಳನ್ನು ಪ್ರಕಟಿಸಲಿದ್ದಾರೆ. ಯೋಜನೆಗೆ ಸಾವಿರಾರು ಕೋಟಿ ರೂ. ತಗಲುತ್ತಿದ್ದು, ಈ ಹಣವನ್ನು ಆಯಾ ಇಲಾಖೆಯಲ್ಲೇ ವೆಚ್ಚವಾಗದೇ ಉಳಿದಿರುವ ಸಂಪನ್ಮೂಲದಲ್ಲೇ ಭರಿಸುತ್ತಿದ್ದಾರೆ. ನರೇಂದ್ರ ಮೋದಿ ಪ್ರಧಾನಿಯಾಗಿ ಎಂಟು ವರ್ಷಗಳು ಪೂರೈಸಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ಅದೇ ಪ್ರಮಾಣದ ಯೋಜನೆಗಳನ್ನು ಪ್ರಕಟ ಮಾಡುತ್ತಿದ್ದಾರೆ. ಸರ್ಕಾರಿ ಕಾರ್ಯಕ್ರಮಕ್ಕೆ ಸಚಿವರು, ಶಾಸಕರು ಅಲ್ಲದೆ ಎಲ್ಲ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಹಿರಿಯ ಅಧಿಕಾರಿಗಳು, ಆಯ್ದ ಮಂದಿಗೆ ಅಷ್ಟೇ ಪ್ರವೇಶ.

ಕಳೆದ ಮಾರ್ಚ್ ತಿಂಗಳಲ್ಲಿ ಚೊಚ್ಚಲು ಬಜೆಟ್ ಮಂಡನೆ ಸಂದರ್ಭದಲ್ಲೂ ಮುಖ್ಯಮಂತ್ರಿಯವರು ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡೇ ಯಾರಿಗೂ ಹೊರೆಯಾಗದಂತೆ ಕೆಲವು ಯೋಜನೆಗಳನ್ನು ಪ್ರಕಟಿಸಿದ್ದರು.

ಇದೀಗ ವರಿಷ್ಠರ ಸಲಹೆಯಂತೆ ಮತದಾರರನ್ನು ಗಮನದಲ್ಲಿಟ್ಟುಕೊಂಡೇ ಎಂಟು ಯೋಜನೆಗಳನ್ನು 28 ರಂದು ಪ್ರಕಟಿಸಲು ಮುಂದಾಗಿದ್ದಾರೆ. ಮುಂದಿನ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಸರ್ಕಾರ 2023–24ರ ರಾಜ್ಯ ಬಜೆಟ್ ಮಂಡಿಸುವುದು ಸಹ ಸಂಪ್ರದಾಯವಾದರೂ ವಿಧಾನಸಭಾ ಚುನಾವಣೆಗಳು ಹತ್ತಿರ ಬಂದ ಸಂದರ್ಭದಲ್ಲಿ ಸರ್ಕಾರ ಮಾಡುವ ಹೊಸ ಘೋಷಣೆಗಳ ಬಗ್ಗೆ ಜನ ಮುಂಚಿತವಾಗಿಯೇ ನಿರೀಕ್ಷೆ ಇಟ್ಟುಕೊಂಡಿರುತ್ತಾರೆ. ಆದರೆ ಜನ ನಿರೀಕ್ಷೆ ಮಾಡುವ ಮುನ್ನವೇ ▶ 8ನೇ ಪುಟಕ್ಕೆ

ಮೈಸೂರಲ್ಲಿ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಮುಹೂರ್ತ ಫಿಕ್ಸ್

- ●ಜು.29ರಂದು ಮಧ್ಯಾಹ್ನ 12ಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಗುದ್ದಲಿ ಪೂಜೆ ●ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿಯ ಎನ್‌ಸಿಸಿ ಮೈದಾನದಲ್ಲಿ ತಲೆ ಎತ್ತಲಿದೆ ಸ್ಮಾರಕ ●ಭಾರತೀಯ ಸೈನ್ಯದ ಶೌರ್ಯದ ಪ್ರತೀಕವಾಗಲಿದೆ ಈ ಮಹತ್ವ ಸಂಕೇತ ಸ್ಮಾರಕ

●ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಜು.26– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಯುದ್ಧ ಸ್ಮಾರಕ ನಿರ್ಮಾಣ ಸನ್ನಿಹಿತವಾಗಿದೆ. ಇದರೊಂದಿಗೆ 22 ವರ್ಷಗಳ ಬೇಡಿಕೆ ಈಡೇರಲಿದೆ. ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿಯ ಎನ್‌ಸಿಸಿ ಪರೇಡ್ ಮೈದಾನದಲ್ಲಿ ನಿರ್ಮಿಸಲು ಉದ್ದೇಶಿಸಿರುವ 'ಯುದ್ಧ ಸ್ಮಾರಕ' ನಿರ್ಮಾಣ ಕಾಮಗಾರಿಗೆ ಜು.29ರಂದು ಮಧ್ಯಾಹ್ನ 12ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಲಿದ್ದಾರೆ.

ಮುಂದಿನ ಗಣರಾಜ್ಯೋತ್ಸವದ ವೇಳೆಗೆ ಸ್ಮಾರಕ ತಲೆ ಎತ್ತಲಿದೆ. ಈಗಾಗಲೇ ಸ್ಮಾರಕ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದ್ದು, ಹೆರಿಟೇಜ್ ಕಮಿಟಿಯಿಂದ ಅನುಮೋದನೆ ಪಡೆಯಲಾಗಿದೆ. ಸ್ಮಾರಕದ ವಿನ್ಯಾಸಕ್ಕೂ ಅನುಮತಿ ದೊರೆತಿದ್ದು, ಈಗಾಗಲೇ ವರ್ಕ್ ಆರ್ಡರ್ ನೀಡಲಾಗಿದೆ. ಮೈಸೂರಿನ ಶಿಲ್ಪಿಯೊಬ್ಬರಿಗೆ ಸ್ಮಾರಕದ ಕಲ್ಲಿನ ಪಾಲಿಶ್ ಸೇರಿದಂತೆ ಅಂತಿಮ ರೂಪ ನೀಡುವ ಜವಾಬ್ದಾರಿ ವಹಿಸಲಾಗಿದ್ದು, ಶೀಘ್ರವೇ ಕಾಮಗಾರಿ ಆರಂಭವಾಗಲಿದೆ. 2000ರಲ್ಲಿ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಒತ್ತಾಯಿಸಿ ವೀಕೇರ್ ನಿವೃತ್ತ ಸೈನಿಕರ ಟ್ರಸ್ಟ್‌ನ ಎಂ.ಎನ್.ಸುಬ್ರಹ್ಮಣಿ ರಾಜ್ಯ ಸರ್ಕಾರ ಹಾಗೂ ಮೈಸೂರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರು. ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ 2010ರಲ್ಲಿ ಮತ್ತೊಮ್ಮೆ ಮನವಿ ಸಲ್ಲಿಸಿದರು. ಆಗ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಸ್ಥಳ ಹುಡುಕುವ ಪ್ರಕ್ರಿಯೆ ಆರಂಭವಾಗಿತ್ತು. ನಂತರ ಅದು ನೆನೆಗುದಿಗೆ ಬಿದ್ದಿತ್ತು. 2012ರಲ್ಲಿ ಮತ್ತೆ ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಕ್ರಿಯೆ ಆರಂಭವಾಯಿತು. 2016ರಲ್ಲಿ ನಿವೃತ್ತ ಯೋಧರೂ ಆದ ಮೈಸೂರು ಉಪ ವಿಭಾಗಾಧಿಕಾರಿ ಸಿ.ಎಲ್.ಆನಂದ್(ಹಾಲಿ ಬಿಡಿಎ ಕಾರ್ಯದರ್ಶಿ) ಅವರು ಯುದ್ಧ ಸ್ಮಾರಕ ನಿರ್ಮಾಣಕ್ಕೆ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರು. ಈಗ ಸ್ಮಾರಕ ನಿರ್ಮಾಣ ಅಂತಿಮ ಘಟ್ಟ ತಲುಪಿದೆ. ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯ ಎಡ ಭಾಗದಲ್ಲಿರುವ ಸುಮಾರು ಐದು ಎಕರೆ ವಿಸ್ತೀರ್ಣದ ಎನ್‌ಸಿಸಿ ಪರೇಡ್ ಜಾಗದಲ್ಲಿ 4 ಚದರ ಅಡಿ ವಿಸ್ತೀರ್ಣದಲ್ಲಿ ಯುದ್ಧ ಸ್ಮಾರಕ ನಿರ್ಮಿಸಲು ನಿರ್ಧರಿಸಲಾಗಿದೆ. ಅಲ್ಲದೆ ಹಿಂದಿನ ಜಿಲ್ಲಾಧಿಕಾರಿ ಡಿ.ರಂದೀಪ್ ಆ ಜಾಗವನ್ನು ಮಂಜೂರು ಮಾಡಿದ್ದರು. ಈ ಹಿಂದೆ ಮೇಜರ್ ಜನರಲ್ ಸಿ.ಕೆ.ಕರುಂಬಯ್ಯ ನೇತೃತ್ವದಲ್ಲಿ ರಚಿಸಲಾಗಿದ್ದ ಯುದ್ಧಸ್ಮಾರಕ ನಿರ್ಮಾಣ ಸಮಿತಿಯು ▶ 8ನೇ ಪುಟಕ್ಕೆ




ಸ್ಮಾರಕದ ನೀಲನಕ್ಷೆ



ಸ್ಮಾರಕ ನಿರ್ಮಿಸಲುದ್ದೇಶಿಸಿರುವ ಸ್ಥಳದಲ್ಲಿ ತಂದಿಟ್ಟಿರುವ ಬೃಹತ್ ಕಲ್ಲು ಚಪ್ಪಡಿಗಳು.

ಮೇಕೆದಾಟು: ವಿಚಾರಣೆ ಆ.10ಕ್ಕೆ ಮುಂದೂಡಿದ ಸುಪ್ರೀಂಕೋರ್ಟ್

ನವದೆಹಲಿ: ಮೇಕೆದಾಟು ನಿರ್ಮಾಣ ಯೋಜನೆ ವಿವಾದಕ್ಕೆ ಸಂಬಂಧಿಸಿದಂತೆ ಅರ್ಜಿ ವಿಚಾರಣೆಯನ್ನು ಸುಪ್ರೀಂಕೋರ್ಟ್ ಆಗಸ್ಟ್ 10ಕ್ಕೆ ಮುಂದೂಡಿದೆ.



ಮೇಕೆದಾಟು ಯೋಜನೆಗೆ ಆಕ್ಷೇಪ ವ್ಯಕ್ತಪಡಿಸಿರುವ ತಮಿಳುನಾಡು ಸರ್ಕಾರ ಇಂದಿನ ವಿಚಾರಣೆ ವೇಳೆ ಹೆಚ್ಚುವರಿ ಲಿಖಿತ ದಾಖಲೆಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿತು. ಈ ಹಿನ್ನೆಲೆಯಲ್ಲಿ ಇದಕ್ಕೆ ಉತ್ತರಿಸಲು ಸಮಯ ಬೇಕು ಎಂದು ಕರ್ನಾಟಕ ಪರ ವಕೀಲ ಶಾಮ್ ದಿವಾನ್ ವಾದ ಮಂಡಿಸಿದರು. ಅಲ್ಲದೆ ಅರ್ಜಿಯ ಅಂತಿಮ ವಿಚಾರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಈ ವೇಳೆ ಆಕ್ಷೇಪಣೆಗಳಿದ್ದರೆ ಸಲ್ಲಿಸುವಂತೆ ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳಿಗೆ ಸೂಚನೆ ನೀಡಿ ವಿಚಾರಣೆಯನ್ನು ಸುಪ್ರೀಂಕೋರ್ಟ್ ಆಗಸ್ಟ್ 10ಕ್ಕೆ ಮುಂದೂಡಿದೆ.

ಸುಳ್ಯದಲ್ಲಿ ಬಿಜೆಪಿ ಮುಖಂಡನ ಬರ್ಬರ ಹತ್ಯೆ

ದಕ್ಷಿಣ ಕನ್ನಡ: ಬಿಜೆಪಿ ಯುವ ಮೋರ್ಚಾ ಮುಖಂಡನನ್ನು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ ನಡೆದಿದೆ. ದಕ್ಷಿಣ ಕನ್ನಡ ಜಿಲ್ಲಾ ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು(32) ಕೊಲೆಯಾದ ದುರ್ದೈವಿ. ಪ್ರವೀಣ್ ನೆಟ್ಟಾರು ಬೆಳ್ಳಾರೆಯಲ್ಲಿ ಕೋಳಿ ಅಂಗಡಿ ನಡೆಸುತ್ತಿದ್ದರು. ಬೆಳ್ಳಾರೆ ಪೇಟೆಯಲ್ಲಿ ತನ್ನ ಅಂಗಡಿ ಮುಚ್ಚುತ್ತಿದ್ದಾಗ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ದಾಳಿ ಮಾಡಿದ್ದಾರೆ. ದಾಳಿಯಿಂದ ಗಂಭೀರ ಗಾಯಗೊಂಡಿದ್ದ ಪ್ರವೀಣ್ ನೆಟ್ಟಾರು ಅವರನ್ನು ಪುತ್ತೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಪ್ರವೀಣ್ ನೆಟ್ಟಾರು ಸಾವನ್ನಪ್ಪಿದ್ದಾರೆ.



ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಆಪರೇಷನ್...!

ರೆಸಾರ್ಟ್ ರಾಜಕಾರಣಕ್ಕೆ ಅಮಾಯಕ ಗ್ರಾಪಂ ಸದಸ್ಯ ಬಲಿ

- ●ಮೈಸೂರು ಹೊರವಲಯದ ರೆಸಾರ್ಟ್‌ವೊಂದರಲ್ಲಿ ಅನುಮಾನಾಸ್ಪದ ಸಾವು ●ಸಹಜ ಸಾವಲ್ಲ, ಇದೊಂದು ಕೊಲೆ: ಪತ್ನಿ ಶಂಕೆ

ಮೈಸೂರು, ಜು.26– ರೆಸಾರ್ಟ್ ರಾಜಕೀಯ ಭೂತಕ್ಕೆ ಜನ ಪ್ರತಿನಿಧಿಯೊಬ್ಬರು ಜೀವ ಬಲಿಯಾಗಿದ್ದಾರೆ.

ಕೆ.ಆರ್.ನಗರ ತಾಲೂಕು ಚುಂಚನಕಟ್ಟೆ ಹೋಬಳಿ ಜವರೇಗೌಡನಕೊಪ್ಪಲು ನಿವಾಸಿ, ಹಳಿಯೂರು ಗ್ರಾಪಂ ಸದಸ್ಯ ಜೆ.ಎಂ.ಸತೀಶ್(34) ರೆಸಾರ್ಟ್ ರಾಜಕಾರಣಕ್ಕೆ ಬಲಿಯಾಗಿದ್ದಾರೆ. ಕೇವಲ ಗ್ರಾಮ ಪಂಚಾಯ್ತಿ ಅಧ್ಯಕ್ಷ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ಹೊರವಲಯದ ರೆಸಾರ್ಟ್‌ನಲ್ಲಿ ಹಲವು ಸದಸ್ಯರೊಂದಿಗೆ ತಂಗಿದ್ದ ಇವರು, ಚುನಾವಣೆ ಹಿಂದಿನ ದಿನವೇ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದಾರೆ.



ಜೆ.ಎಂ.ಸತೀಶ್

ವಿವರ: ಹಳಿಯೂರು ಗ್ರಾಮ ಪಂಚಾಯ್ತಿ ಒಟ್ಟು 19 ಸದಸ್ಯರನ್ನು ಒಳಗೊಂಡಿದ್ದು, ಅಧ್ಯಕ್ಷರಾಗಿದ್ದ ಹಳಿಯೂರು ಮಹೇಶ್ ರಾಜೀನಾಮೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ನಾಳೆ(ಜು.27) ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷಗಾದಿಗೆ ಭಾರೀ ಪೈಪೋಟಿ ಇದ್ದ ಕಾರಣ ಪ್ರಬಲ ಆಕಾಂಕ್ಷಿಯೊಬ್ಬರು ಕಾಂಗ್ರೆಸ್ ಬೆಂಬಲಿತ ಸತೀಶ್ ಸೇರಿದಂತೆ 11 ಮಂದಿ ಸದಸ್ಯರನ್ನು 20 ದಿನಗಳ ಪ್ರವಾಸಕ್ಕೆ ಕರೆದೊಯ್ದಿದ್ದರು. ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ ಸೇರಿದಂತೆ ಹಲವು ಧಾರ್ಮಿಕ ಕ್ಷೇತ್ರ ಹಾಗೂ ಪ್ರವಾಸಿ ತಾಣಗಳ ಪ್ರವಾಸದ ಬಳಿಕ ಸೋಮವಾರ ರಾತ್ರಿ ಮೈಸೂರಿನ ಆರ್.ಟಿ.ನಗರದ ಸುಭಿಕ್ಷಾ ಗಾರ್ಡನ್ ರೆಸಾರ್ಟ್‌ನಲ್ಲಿ ತಂಗಿದ್ದರು.

ರಾತ್ರಿ ಎಲ್ಲರೊಂದಿಗೆ ಊಟ ಮಾಡಿದ ಸತೀಶ್ ತಮ್ಮ ಕೊಠಡಿಗೆ ತೆರಳಿ ಮಲಗಿದ್ದರು. ಆದರೆ ಬೆಳಗಾಗುವಷ್ಟರಲ್ಲಿ ಅವರು ಸಾವನ್ನಪ್ಪಿದ್ದಾರೆ. ಘಟನೆ ಬೆಳಕಿಗೆ ಬಂದ ತಕ್ಷಣ ಇತರ ಸದಸ್ಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಜಯಪುರ ಠಾಣೆ ಪೊಲೀಸರು, ಪರಿಶೀಲನೆ ನಡೆಸಿದರು. ಬಳಿಕ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶವಾಗಾರದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿ, ದೇಹವನ್ನು ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಅನುಮಾನಾಸ್ಪದ ಸಾವು (ಯುಡಿಆರ್) ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ನನ್ನ ಪತಿಯನ್ನು ಕೊಲೆ ಮಾಡಲಾಗಿದೆ ಎಂದು ಸತೀಶ್ ಪತ್ನಿ ಗಂಭೀರ ಆರೋಪ ಮಾಡಿರುವುದಾಗಿ ಖಾಸಗಿ ಚಾನೆಲ್‌ನಲ್ಲಿ ವರದಿಯಾಗಿದೆ. ಅಧ್ಯಕ್ಷಗಾದಿ ಆಕಾಂಕ್ಷಿಯೊಬ್ಬರು 11 ಮಂದಿ ಸದಸ್ಯರನ್ನು ಪ್ರವಾಸಕ್ಕೆ ಕರೆದೊಯ್ದಿದ್ದರು ಎಂದು ಮೂಲಗಳು ತಿಳಿಸಿವೆ. ರೆಸಾರ್ಟ್‌ನಲ್ಲಿ ಎಲ್ಲರೂ ಪ್ರತ್ಯೇಕ ಕೊಠಡಿಗಳಲ್ಲಿದ್ದ ಕಾರಣ ಸತೀಶ್ ಸಾವು ನಿಗೂಢವಾಗಿ ಉಳಿದಿದೆ. ಮೃತದೇಹವಿದ್ದ ಸ್ಥಿತಿಯನ್ನು ನೋಡಿದರೆ ಸತೀಶ್‌ಗೆ ಹೃದಯಾಘಾತವಾಗಿ ನೋವಿನಿಂದ ಒದ್ದಾಡಿ ಕೊನೆಯುಸಿರೆಳೆದಿದ್ದಾರೆ ಎಂಬುದು ಒಂದು ಮೂಲದಿಂದ ವ್ಯಕ್ತವಾದ ಅಭಿಪ್ರಾಯ. ಆದರೂ ಸತೀಶ್ ಸಾವು, ಆಮಿಷಗಳಿಗೆ ಒಳಗಾಗುವ ಜನಪ್ರತಿನಿಧಿಗಳಲ್ಲಿ ಆತಂಕ ಹುಟ್ಟಿಸಿದೆ.

ತಲೆ ತಗ್ಗಿಸುವ ಸಂಗತಿ: ಸರ್ಕಾರ ಉಳಿಸುವುದಕ್ಕೋ ಅಥವಾ ಉರುಳಿಸುವುದಕ್ಕೋ ರೆಸಾರ್ಟ್ ರಾಜಕಾರಣ ಗ್ರಾಮ ಪಂಚಾಯ್ತಿವರೆಗೂ ವ್ಯಾಪಿಸಿರುವುದು ಅತ್ಯಂತ ▶ 8ನೇ ಪುಟಕ್ಕೆ

1ನೇ ತರಗತಿ ಸೇರಲು ಮಕ್ಕಳಿಗೆ 6 ವರ್ಷ ಆಗಿರಲೇಬೇಕು

ಸರ್ಕಾರದಿಂದ ಆದೇಶ



ಬೆಂಗಳೂರು: ಇನ್ನು ಮುಂದೆ ಮಕ್ಕಳನ್ನು 1ನೇ ತರಗತಿಗೆ ಸೇರಿಸಲು ಅವರಿಗೆ 6 ವರ್ಷ ತುಂಬಲೇಬೇಕು ಎಂದು ರಾಜ್ಯ ಸರ್ಕಾರ ಹೊಸ ಹಾಗೂ ಮಹತ್ವದ ಆದೇಶ ಹೊರಡಿಸಿದೆ.

ರಾಜ್ಯ ಸರ್ಕಾರ ನೂತನ ವಯೋಮಿತಿ ನಿಗದಿಪಡಿಸಿ, 1ನೇ ತರಗತಿಗೆ ಸೇರುವ ಮಕ್ಕಳಿಗೆ ಜೂನ್ 1ನೇ ತಾರೀಖಿಗೆ ಕಡ್ಡಾಯವಾಗಿ 6 ವರ್ಷ ತುಂಬಬೇಕು ಎಂದು ಸರ್ಕಾರ ತಿಳಿಸಿದೆ. ಈ ಹಿಂದೆ ಮಕ್ಕಳನ್ನು 1ನೇ ತರಗತಿಗೆ ಸೇರಿಸಲು 5 ವರ್ಷ, 5 ತಿಂಗಳು ಹಾಗೂ 5 ವರ್ಷ 10 ತಿಂಗಳು ಆಗಿರಬೇಕು ಎಂಬ ನಿಯಮವಿತ್ತು. ಇದೀಗ ಆರ್‌ಟಿಇ ಶಿಕ್ಷಣ ಕಾಯ್ದೆ, ಕಡ್ಡಾಯ ಶಿಕ್ಷಣ ನಿಯಮ 2012 ಅನ್ವಯ ಸರ್ಕಾರ ಹೊಸ ವಯೋಮಿತಿಯನ್ನು ನಿಗದಿ ಮಾಡಿದೆ.


ಸರ್ಕಾರಿ ಶಾಲೆ, ಪ.ಪೂ. ಕಾಲೇಜುಗಳ ದತ್ತು ಪಡೆಯಲು ಅಧಿಕಾರಿಗಳಿಗೆ ಸೂಚನೆ

ಬೆಂಗಳೂರು: ತಾಲೂಕು ಹಾಗೂ ರಾಜ್ಯ ಮಟ್ಟದ ಶಿಕ್ಷಣ ಇಲಾಖೆಯ ಪ್ರತಿಯೊಬ್ಬ ಅಧಿಕಾರಿಯೂ ರಾಜ್ಯದಲ್ಲಿ ಒಂದು ಪದವಿ ಪೂರ್ವ ಕಾಲೇಜು ಹಾಗೂ ಶಾಲೆಯನ್ನು ದತ್ತು ಪಡೆಯಲು ಸೂಚಿಸಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್ ಸೆಲ್ವಕುಮಾರ್ ಆದೇಶಿಸಿದ್ದಾರೆ.

ಇದು ಕೇವಲ ಶಿಕ್ಷಣ ಇಲಾಖೆ ಮಾತ್ರವಲ್ಲದೇ ತಾಲೂಕು ಮತ್ತು ರಾಜ್ಯ ಮಟ್ಟದ ಅಧಿಕಾರಿಗಳಿಗೂ ಅನ್ವಯವಾಗಲಿದೆ.

ದತ್ತು ಸ್ವೀಕರಿಸುವ ಸಂಸ್ಥೆಯ ಶೈಕ್ಷಣಿಕ ಅಭಿವೃದ್ಧಿ ಹಾಗೂ ಶಿಕ್ಷಣ ಗುಣಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಶ್ರಮಿಸಬೇಕೆಂದು ಆದೇಶದಲ್ಲಿ ಪ್ರಧಾನ ಕಾರ್ಯದರ್ಶಿಗಳು ತಿಳಿಸಿದ್ದಾರೆ. ರಾಜ್ಯದಲ್ಲಿ 47,000 ಸರ್ಕಾರಿ ಶಾಲೆಗಳು ಹಾಗೂ 1,200 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ. ದತ್ತು ಪಡೆದ ಸಂಸ್ಥೆಗೆ ಅಧಿಕಾರಿಗಳು ತಿಂಗಳಿಗೆ ಒಮ್ಮೆ 2 ಬಾರಿ ಭೇಟಿ ನೀಡುವಂತೆ ಸೂಚಿಸಲಾಗಿದೆ.

KRS ಸುತ್ತಮುತ್ತ 'ಟ್ರಯಲ್ ಬ್ಲಾಸ್ಟ್' ವಿರುದ್ಧ ಪ್ರತಿಭಟನೆ



ಅಣೆಕಟ್ಟೆ ಸುತ್ತಮುತ್ತ ಗಣಿಗಾರಿಕೆ ಶಾಶ್ವತ ನಿಷೇಧಕ್ಕೂ ರೈತ ಸಂಘಟನೆ ಒತ್ತಾಯ

ಮೈಸೂರು, ಜು.26(ಪಿಎಂ)– ಕೃಷ್ಣರಾಜಸಾಗರ ಅಣೆಕಟ್ಟೆ ಸುತ್ತಮುತ್ತ ಗಣಿಗಾರಿಕೆಯ ಸಾಧಕ–ಬಾಧಕಗಳ ಕುರಿತು ಪರಾಮರ್ಶಿಸಲು ನಡೆಸಲು ಉದ್ದೇಶಿಸಿರುವ ಪ್ರಯೋಗಾರ್ಥ ಸ್ಫೋಟ (ಟ್ರಯಲ್ ಬ್ಲಾಸ್ಟ್) ಕೈಬಿಡಬೇಕು ಹಾಗೂ ಅಣೆಕಟ್ಟೆ ಸುತ್ತಮುತ್ತಲ ಪ್ರದೇಶದಲ್ಲಿ ಶಾಶ್ವತವಾಗಿ ಗಣಿಗಾರಿಕೆ ನಿಷೇಧಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಜಂಟಿ ಆಶ್ರಯದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಟ್ರಯಲ್ ಬ್ಲಾಸ್ಟ್ ತಂಡಕ್ಕೆ ಧಿಕ್ಕಾರ..., ಕೆಆರ್‌ಎಸ್ ಉಳಿಸಿ ಗಣಿಗಾರಿಕೆ ನಿಲ್ಲಿಸಿ..., ಗಣಿಧಣಿಗಳ ಕುತಂತ್ರಕ್ಕೆ ಮಣಿದ ಮಂಡ್ಯ ಜಿಲ್ಲಾಧಿಕಾರಿಗೆ ಧಿಕ್ಕಾರ..., ಅಣೆಕಟ್ಟೆ ಸುತ್ತಮುತ್ತ ಗಣಿಗಾರಿಕೆ ನಿಷೇಧಿಸಬೇಕು... ಎಂಬಿತ್ಯಾದಿ ಘೋಷವಾಕ್ಯಗಳ ಫಲಕಗಳನ್ನಿಡಿದು ಮಂಡ್ಯ ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸುಮಾರು 8 ಕೋಟಿ ಜನತೆಯ ಜೀವನಾಡಿಯಾದ ಕೆಆರ್‌ಎಸ್ ಅಣೆಕಟ್ಟೆಯ ಸುತ್ತಮುತ್ತ ಗಣಿಗಾರಿಕೆ ನಡೆಸುತ್ತಿರುವ ಕಾರಣ ಅಣೆಕಟ್ಟೆಗೆ ಅಪಾಯ ಇದೆ ಎಂದು 2018ರಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಮಂಡಳಿ ವರದಿ ನೀಡಿದೆ. ಅಲ್ಲದೆ, ಹಲವಾರು ತಜ್ಞರು ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಾಗಾಗಿ ಅಣೆಕಟ್ಟೆ ಸುತ್ತಮುತ್ತ ಗಣಿಗಾರಿಕೆಯನ್ನು ಶಾಶ್ವತವಾಗಿ ನಿಷೇಧಿಸಬೇಕು ಎಂದು ಒತ್ತಾಯಿಸಿದರು. ಗಣಿಗಾರಿಕೆ ನಿಷೇಧಿಸುವಂತೆ ಆಗ್ರಹಿಸಿ ರೈತ–ದಲಿತ–ಪ್ರಗತಿಪರ ಸಂಘಟನೆಗಳು ನಡೆಸಿದ ಹೋರಾಟದ ಫಲವಾಗಿ ಸದ್ಯ ಗಣಿಗಾರಿಕೆಗೆ ತಾತ್ಕಾಲಿಕ ತಡೆಯೊಡ್ಡಲಾಗಿದೆ. ▶ 8ನೇ ಪುಟಕ್ಕೆ

ಸಾರ್ವಜನಿಕ ಅಭಿಪ್ರಾಯ ಪಡೆಯದೇ ಟ್ರಯಲ್ ಬ್ಲಾಸ್ಟ್ ಸರಿಯಲ್ಲ

ಮೈಸೂರು,ಜು.26(ಪಿಎಂ)–ಯಾವುದೇ ಸಾರ್ವಜನಿಕ ಅಭಿಪ್ರಾಯ ಪಡೆಯದೇ ಏಕಾಏಕಿ ಕೆಆರ್‌ಎಸ್ ಸುತ್ತಮುತ್ತ 5 ಸ್ಥಳಗಳಲ್ಲಿ ಟ್ರಯಲ್ ಬ್ಲಾಸ್ಟ್ ನಡೆಸಲು ಮುಂದಾಗಿರುವುದು ಸರಿಯಾದ ಕ್ರಮವಲ್ಲ ಎಂದು ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು ಅಸಮಾಧಾನ ವ್ಯಕ್ತಪಡಿಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮಂಡ್ಯ ಜಿಲ್ಲಾಧಿಕಾರಿಗಳು ಟ್ರಯಲ್ ಬ್ಲಾಸ್ಟ್‌ಗೆ ಅನುಮತಿ ನೀಡಿದ್ದಾರೆ. ಈ ಪ್ರಕ್ರಿಯೆ ಮೂಲಕ ಗಣಿಗಾರಿಕೆಯಿಂದ ಅಣೆಕಟ್ಟೆಗೆ ಅಪಾಯ ಇದೆಯೇ? ಅಥವಾ ಇಲ್ಲವೇ? ಎಂದು ಪರೀಕ್ಷೆ ಮಾಡುತ್ತೇವೆ. ಅನುವು ಮಾಡಿಕೊಡಿ ಎಂದು ಮಂಡ್ಯ ಜಿಲ್ಲಾಧಿಕಾರಿಗಳು ನಿನ್ನೆ ಸಭೆಯಲ್ಲಿ ಹೋರಾಟಗಾರರಿಗೆ ಹೇಳಿದರು. ಆದರೆ ಯಾವುದೇ ಸಾರ್ವಜನಿಕ ಅಭಿಪ್ರಾಯ ಪಡೆಯದೇ ಏಕಾಏಕಿ ಟ್ರಯಲ್ ಬ್ಲಾಸ್ಟ್‌ಗೆ ಮುಂದಾಗಿರುವುದು ಸರಿಯಲ್ಲ. ನಿನ್ನೆ ಮಂಡ್ಯ ಮತ್ತು ಮೈಸೂರಿನ ರೈತರು ಹೋರಾಟ ನಡೆಸಿ, ಬ್ಲಾಸ್ಟ್ ನಡೆಸಲು ಬಂದಿದ್ದ ತಂಡವನ್ನು ವಾಪಸ್ಸು ಕಳುಹಿಸಿದ್ದೇವೆ ಎಂದು ತಿಳಿಸಿದರು. ರಾತ್ರಿ 12 ಗಂಟೆಯವರೆಗೆ ಮಂಡ್ಯ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ, ಕನಿಷ್ಠ ವಾರ ಕಾಲ ಈ ಬ್ಲಾಸ್ಟ್ ಪ್ರಕ್ರಿಯೆ ಕೈಬಿಟ್ಟು, ಈ ಸಂಬಂಧ ಸಭೆ ನಡೆಸಿ, ನಮ್ಮೊಂದಿಗೆ ಚರ್ಚೆ ನಡೆಸಬೇಕೆಂದು ಒತ್ತಾಯಿಸಿದ್ದೇವೆ. ಆದರೂ ಜಿಲ್ಲಾಡಳಿತ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇಂದು ಕೆಆರ್‌ಎಸ್ ಅಣೆಕಟ್ಟೆ ಬಳಿಯೂ ನಮ್ಮ ಮುಖಂಡರು, ಕಾರ್ಯಕರ್ತರು ಹೋರಾಟ ನಡೆಸುತ್ತಿದ್ದಾರೆ ಎಂದು ಹೇಳಿದರು.

ಪಾಂಡವಪುರ ತಾಲೂಕಿನ ಬೇಬಿ ಬೆಟ್ಟದ ಸುತ್ತಲಿನ

1,623 ಎಕರೆ ಪ್ರದೇಶ ನಮ್ಮ ಆಸ್ತಿ

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪ್ರತಿಪಾದನೆ





ಮೈಸೂರು,ಜು.26(ಆರ್‌ಕೆ)– 'ಟ್ರಯಲ್ ಬ್ಲಾಸ್ಟ್' ಮಾಡಬೇಕೆಂದು ಹೇಳುತ್ತಿರುವ ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕಿನ ಬೇಬಿ ಬೆಟ್ಟದ ಸುತ್ತಲಿನ 1,623 ಎಕರೆ ಪ್ರದೇಶವು ನಮ್ಮ ಖಾಸಗಿ ಆಸ್ತಿ ಎಂದು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪ್ರತಿಪಾದಿಸಿದ್ದಾರೆ.

ಬೇಬಿ ಬೆಟ್ಟದಲ್ಲಿ ಟ್ರಯಲ್ ಬ್ಲಾಸ್ಟ್ ನಡೆಸುವ ಕುರಿತಂತೆ ಉಂಟಾಗಿರುವ ಪರ–ವಿರೋಧದ ಹಿನ್ನೆಲೆಯಲ್ಲಿ ಇಂದು ಸುದ್ದಿಗಾರರೊಂದಿಗೆ ಪ್ರತಿಕ್ರಿಯಿಸಿರುವ ಅವರು, ನಮ್ಮ ಜಾಗದಲ್ಲಿ ಟ್ರಯಲ್ ಬ್ಲಾಸ್ಟ್ ಮಾಡಬೇಕೆಂದಾಗ ಸರ್ಕಾರದವರು ನಮ್ಮ ಅನುಮತಿ ಪಡೆಯಬೇಕಿತ್ತು ಎಂದರು.

ಈ ಬಗ್ಗೆ ಸೋಮವಾರವೇ ವಕೀಲರ ಮೂಲಕ ಮಂಡ್ಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಟ್ರಯಲ್ ಬ್ಲಾಸ್ಟ್‌ಗೆ ಆಕ್ಷೇಪ ವ್ಯಕ್ತಪಡಿಸಿದ್ದೇವೆ. ಬೇಬಿ ಬೆಟ್ಟದಲ್ಲೇ ಟ್ರಯಲ್ ಬ್ಲಾಸ್ಟ್ ಮಾಡಬೇಕೆಂದೇನಿಲ್ಲ, ಇನ್ನೂ ದೂರದಲ್ಲಿ ಪ್ರಯೋಗ ನಡೆಸಬಹುದು. ವಿಜ್ಞಾನಿಗಳಾದ ಅವರಿಗೆ ಆ ತಿಳಿವಳಿಕೆ ಇದ್ದೇ ಇರುತ್ತದೆ ಎಂದು ತಿಳಿಸಿದರು.

ನಮ್ಮ ಕುಟುಂಬಕ್ಕೆ ಸರ್ಕಾರ ಏಕೆ ಹೀಗೆ ಹಿಂಸೆ ಕೊಡುತ್ತಿದೆಯೋ ಗೊತ್ತಿಲ್ಲ. ಈ ಹಿಂದೆ 1950ರಲ್ಲಿ ಭಾರತ ಸರ್ಕಾರ ಮತ್ತು ರಾಜ ಮನೆತನದವರ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ▶ 8ನೇ ಪುಟಕ್ಕೆ

ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ಬೈಕ್ ರ್‍ಯಾಲಿ

350 ಬೈಕ್‌ಗಳಲ್ಲಿ ಪಾಲ್ಗೊಂಡ ಮಾಜಿ ಸೈನಿಕರು, ಎನ್‌ಸಿಸಿ ಕೆಡೆಟ್‌ಗಳು, ರೋಟರಿ ಸದಸ್ಯರು



ಬೈಕ್ ರ್‍ಯಾಲಿಯಲ್ಲಿ ಭಾಗವಹಿಸಿರುವ ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಶಾಸಕ ಎಲ್.ನಾಗೇಂದ್ರ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜು.26 (ಆರ್‌ಕೆಬಿ)– ಪಾಕಿಸ್ತಾನದ ವಿರುದ್ಧದ 1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಭಾರತೀಯ ಯೋಧರ ತ್ಯಾಗವನ್ನು ಸ್ಮರಿಸಿ, ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಮಂಗಳವಾರ ಮೈಸೂರಿನಲ್ಲಿ ಬೈಕ್ ರ್‍ಯಾಲಿ ನಡೆಸಲಾಯಿತು.

ಕಾರ್ಗಿಲ್ ವಿಜಯ ದಿನದ ಅಂಗವಾಗಿ ಯುವ ಪೀಳಿಗೆಗೆ ದೇಶಪ್ರೇಮದ ಅರಿವು ಮೂಡಿಸುವ ನಿಟ್ಟಿನಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಜಿಲ್ಲಾ ಘಟಕ, ರೋಟರಿ ಹೆರಿಟೇಜ್ ಸಹಯೋಗದಲ್ಲಿ ಬೈಕ್ ರ್‍ಯಾಲಿ ಆಯೋಜಿಸಲಾಗಿತ್ತು. ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತ(ಮೆಟ್ರೋಪೋಲ್ ವೃತ್ತ)ದಲ್ಲಿ ಬೈಕ್ ರ್‍ಯಾಲಿಗೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು. ಮಾಜಿ ಸೈನಿಕರು, ಎನ್‌ಸಿಸಿ ಕೆಡೆಟ್‌ಗಳು, ರೋಟರಿ ಸಂಸ್ಥೆಯ ಸದಸ್ಯರು ಬೈಕ್ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು.

ಭಾರತ ಧ್ವಜದಿಂದ ಅಲಂಕರಿಸಿದ್ದ 350ಕ್ಕೂ ಹೆಚ್ಚು ಬೈಕ್‌ಗಳು ರ್‍ಯಾಲಿ ಮೂಲಕ ರೈಲ್ವೆ ನಿಲ್ದಾಣದ ಬಳಿಯ ಡಾ.ಬಾಬು ಜಗಜೀವನರಾಂ ವೃತ್ತ, ಇರ್ವಿನ್ ರಸ್ತೆ, ಆಯುರ್ವೇದ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಗಾಂಧಿ ಸ್ಕ್ವೇರ್, ದೊಡ್ಡ ಗಡಿಯಾರ, ಚಾಮರಾಜ ಒಡೆಯರ್ ವೃತ್ತ, ಬೆಂಗಳೂರು–ನೀಲಗಿರಿ ರಸ್ತೆ ಗನ್ ಹೌಸ್ ವೃತ್ತ ರಾಮಸ್ವಾಮಿ ವೃತ್ತ, ಅಗ್ನಿಶಾಮಕ ದಳ, ಸರಸ್ವತಿಪುರಂ ರೋಟರಿ ಪಶ್ಚಿಮ ಸಭಾಂಗಣ ತಲುಪಿದವು. ರ್‍ಯಾಲಿಯಲ್ಲಿ ಎಂಎಲ್‌ಸಿ ಮಂಜೇಗೌಡ, ಶಾಸಕ ಎಲ್.ನಾಗೇಂದ್ರ, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ದಿವಾಕರ್, ರೋಟರಿ ಜಿಲ್ಲಾ ಗವರ್ನರ್ ಹೆಚ್.ಆರ್.ಕೇಶವ್, ರೋಟರಿ ಹೆರಿಟೇಜ್ ಅಧ್ಯಕ್ಷ ಆರ್.ಸುರೇಶ್ ಉಪಸ್ಥಿತರಿದ್ದರು.

ಸೈನಿಕರ ಹಕ್ಕುಗಳಿಗಾಗಿ ನನ್ನ ಹೋರಾಟ

ಕಾರ್ಗಿಲ್ ವಿಜಯ ದಿವಸ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಂತರ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಘೋಷಣೆ



ಸರಸ್ವತಿಪುರಂ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಕಾರ್ಗಿಲ್ ವಿಜಯ ದಿನದಂಗವಾಗಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ದೇಶಭಕ್ತರ ವೇಷ ತೊಟ್ಟು ಆಕರ್ಷಿಸಿದ ಮಕ್ಕಳು.

ಮೈಸೂರು, ಜು.26 (ಆರ್‌ಕೆಬಿ)– ತಾವು ಸೇನೆಯಲ್ಲಿ ಕಾರ್ಯನಿರ್ವಹಿಸಿದ್ದರಿಂದ ಸೈನಿಕರಲ್ಲಿ ನೋವು, ನಲಿವುಗಳ ಪರಿಚಯ ತಮಗಿದ್ದು, ಹಾಗಾಗಿ ಮಾಜಿ ಸೈನಿಕರ ಹಕ್ಕುಗಳಿಗಾಗಿ ಹೋರಾಡುತ್ತಿದ್ದೇನೆ. ಅವರ ಮೂಲ ಸೌಕರ್ಯ ಮತ್ತು ಅಗತ್ಯಗಳನ್ನು ಪೂರೈಸಲು ನೆರವಾಗುವುದಾಗಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ಮೈಸೂರಿನ ಸರಸ್ವತಿಪುರಂ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಮಂಗಳವಾರ ಕಾರ್ಗಿಲ್ ವಿಜಯ ದಿನದ ಅಂಗವಾಗಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕ, ರೋಟರಿ ಹೆರಿಟೇಜ್ ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

1993ರ ಮೇ 3ರಂದು ಕಾರ್ಗಿಲ್ ಯುದ್ಧ ಪ್ರಾರಂಭವಾದಾಗ ಶೂನ್ಯ ಡಿಗ್ರಿ ತಾಪಮಾನವಿರುವ ಭಾರತದ ಗಡಿಯಲ್ಲಿ ಸೈನಿಕರು ಕೊರೆಯುವ ಚಳಿಯಲ್ಲಿ ದೇಶವನ್ನು ಕಾವಲು ಕಾಯುತ್ತಿದ್ದರು. ಪಾಕ್ ಆಕ್ರಮಿತ ಭಾರತದ ಗಡಿಯಲ್ಲಿ ಸೆರೆ ಸಿಕ್ಕಿದ್ದ ಐವರು ಭಾರತೀಯ ಸೈನಿಕರನ್ನು ಅಮಾನುಷವಾಗಿ ಚಿತ್ರಹಿಂಸೆ ನೀಡಿ ಕೊಲ್ಲಲಾಯಿತು. ಮೂರು ತಿಂಗಳ ಘರ್ಷಣೆಯಲ್ಲಿ 490 ಅಧಿಕಾರಿಗಳು, ಸೈನಿಕರು, ಜವಾನರು ಮತ್ತು ಸಾರ್ವಜನಿಕರು ಸೇರಿದಂತೆ ಸುಮಾರು 527 ಮಂದಿ ಪ್ರಾಣ ಕಳೆದುಕೊಂಡರು.

ವಿಧಾನಪರಿಷತ್ ಸದಸ್ಯನಾಗುವ ಮುನ್ನ ಸೇನೆ, ಪೊಲೀಸ್ ಇಲಾಖೆಯಲ್ಲಿ ಸೇವೆ ಹಾಗೂ ಶ್ರೀರಾಂಪುರ ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿ ಜನಪರ ಕಾರ್ಯ ಕೈಗೊಂಡಿದ್ದನ್ನು ತಿಳಿಸಿದ ಅವರು, ನಾನಿಂದು ವಿಧಾನಪರಿಷತ್ ಸದಸ್ಯನಾಗಿ ಮಾಜಿ ಸೈನಿಕರ ಹಕ್ಕುಗಳಿಗಾಗಿ ಹೋರಾಡುತ್ತಿದ್ದೇನೆ. ಅವರು ಮೂಲ ಸೌಕರ್ಯ ಮತ್ತು ಅಗತ್ಯಗಳನ್ನು ಪಡೆಯಲು ನೆರವಾಗುವುದಾಗಿ ತಿಳಿಸಿದರು.

ಭಾರತೀಯ ಸೈನಿಕರು ಗಡಿಯಲ್ಲಿ ತಮ್ಮ ಪ್ರಾಣ ಮತ್ತು ಸಂತೋಷವನ್ನು ತ್ಯಾಗ ಮಾಡುತ್ತಿರುವುದರಿಂದಲೇ ನಾವೆಲ್ಲರೂ ದೇಶದೊಳಗೆ ನೆಮ್ಮದಿಯಿಂದ ಇದ್ದೇವೆ. ಅವರು ದೇಶಕ್ಕೆ ನೀಡಿದ ಕೊಡುಗೆಯನ್ನು ನಾವಿಂದು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ಅವರು ನಿವೃತ್ತರಾದರೂ ಅವರನ್ನು ಗೌರವಿಸುವುದು ನಮ್ಮ ಕರ್ತವ್ಯವೂ ಆಗಿದೆ ಎಂದು ಹೇಳಿದರು.

ಮೊದಲಿಗೆ ಹುತಾತ್ಮ ಯೋಧರಿಗೆ ಒಂದು ನಿಮಿಷ ಮೌನ ಆಚರಿಸುವ ಮೂಲಕ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು, ಸುಭಾಷ್‌ಚಂದ್ರ ಬೋಸ್, ಭಗತ್‌ಸಿಂಗ್, ಒನಕೆ ಓಬವ್ವ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮ ಇನ್ನಿತರೆ ದೇಶಭಕ್ತರ ವೇಷ ಧರಿಸಿದ್ದ ಮಕ್ಕಳು ಹಾಜರಿದ್ದ ಸಭಿಕರನ್ನು ಆಕರ್ಷಿಸಿದರು. ಅನುಶ್ರೀ ಅವರು ಹಾಡಿದ 'ಏ ಮೇರೆ ವತನ್‌ಕಿ ಲೋಗೋ...' ಗೀತೆ ಎಲ್ಲರಲ್ಲೂ ದೇಶಭಕ್ತಿಯ ಕಿಚ್ಚು ಹತ್ತಿಸುವಂತಿತ್ತು. ಈ ಸಂದರ್ಭದಲ್ಲಿ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಮಾತನಾಡಿದರು. ರೋಟರಿ ಜಿಲ್ಲಾ 3181 ಗವರ್ನರ್ (2023–24) ಹೆಚ್.ಆರ್.ಕೇಶವ್, ಸಹಾಯಕ ಗವರ್ನರ್ ಕೆ.ಮಂಜುನಾಥ್, ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ನಂಜುಂಡಸ್ವಾಮಿ, ರೋಟರಿ ವಲಯ–8ರ ಸೇನಾನಿ ರಾಜಶೇಖರ ಕದಂಬ, ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ದಿವಾಕರ್, ರೋಟರಿ ಹೆರಿಟೇಜ್ ಕ್ಲಬ್ ಮೈಸೂರು ಅಧ್ಯಕ್ಷ ಆರ್.ಸುರೇಶ್, ರೋಟರಿ ಪಶ್ಚಿಮ ಅಧ್ಯಕ್ಷ ರವಿಶಂಕರ್, ಚುನಾಯಿತ ಅಧ್ಯಕ್ಷ ಜಗದೀಶ್, ಕಾರ್ಯದರ್ಶಿ ಎಂ.ಪಿ.ಪ್ರಭಾಕರ್ ಇನ್ನಿತರರು ಉಪಸ್ಥಿತರಿದ್ದರು.

ಇಂದು ಹೆಚ್.ಸಿ.ದಾಸಪ್ಪ ಸಂಸ್ಮರಣೆ, ದತ್ತಿ ಉಪನ್ಯಾಸ

ಮೈಸೂರು,ಜು.26(ಪಿಎಂ)– ಬೆಂಗಳೂರಿನ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಮೈಸೂರಿನ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಶೇಷಾದ್ರಿಪುರಂ ಪದವಿ ಕಾಲೇಜು ಸಂಯುಕ್ತಾಶ್ರಯದಲ್ಲಿ ಜು.27ರಂದು ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಹೆಚ್.ಸಿ.ದಾಸಪ್ಪ ಸಂಸ್ಮರಣೆ ಮತ್ತು ದತ್ತಿ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜು ಸಭಾಂಗಣದಲ್ಲಿ ಬೆಳಗ್ಗೆ 11ಕ್ಕೆ ಮಾಜಿ ಶಾಸಕರೂ ಆದ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯ ಅಧ್ಯಕ್ಷ ವಾಸು ಕಾರ್ಯಕ್ರಮ ಉದ್ಘಾಟಿಸುವರು. 'ಗಾಂಧೀಜಿ ಹಿಂದೆಂದಿಗಿಂತಲೂ ಇಂದು ಪ್ರಸ್ತುತ' ವಿಷಯ ಕುರಿತು ಧಾರವಾಡದ ಫಸ್ಟ್ ಪ್ರತಿಷ್ಠಾನ ಸ್ಥಾಪಕ ಡಾ.ಪ್ರಕಾಶ್ ಭಟ್ ದತ್ತಿ ಉಪನ್ಯಾಸ ನೀಡುವರು. ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸುವರು. ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಖಜಾಂಚಿ ಪಿ.ವಿಶ್ವನಾಥ್, ಕಾರ್ಯಕಾರಿ ಸದಸ್ಯ ಗುಂಡಪ್ಪಗೌಡ, ಬೆಂಗಳೂರಿನ ವಿಶ್ವನೀಡಂ ಟ್ರಸ್ಟ್ ಅಧ್ಯಕ್ಷ ಎಂ.ಸಿ.ನರೇಂದ್ರ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಪ್ರೊ. ಜಿ.ಬಿ.ಶಿವರಾಜು ಪ್ರಾಸ್ತಾವಿಕ ಭಾಷಣ ಮಾಡುವರು.



ಕಾರ್ಗಿಲ್ ವಿಜಯ್ ದಿವಸ ಅಂಗವಾಗಿ ಮೈಸೂರಿನ ಕಾರ್ಯಪ್ಪ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮುಖಾಂತರ ಎಸ್‌ಬಿಎಂ ಮಂಜು ಸ್ನೇಹ ಬಳಗದ ವತಿಯಿಂದ ಗೌರವ ಸೂಚಿಸಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ಮಹದೇವ್, ವಿನಯ್, ನವೀನ್, ಹನುಮಂತು, ರಘು, ಶಿವು, ಪಾಲಾಕ್ಷ, ಗಣೇಶ್ ಇನ್ನಿತರರಿದ್ದರು.

ಉದ್ಯಾನಗಳಲ್ಲಿ ಕಟ್ಟಡ ನಿರ್ಮಾಣ ತಡೆಗೆ ವಾರದ ಗಡುವು

ತಪ್ಪಿದಲ್ಲಿ ನ್ಯಾಯಾಂಗ ನಿಂದನೆ ಪ್ರಕರಣ ಹೂಡುವ ಎಚ್ಚರಿಕೆ

ಮೈಸೂರು, ಜು.26(ಎಂಟಿವೈ)– ಮೈಸೂರಿನ ಹಲವು ಉದ್ಯಾನಗಳಲ್ಲಿ ನಿಯಮ ಬಾಹಿರವಾಗಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದು, ಉದ್ಯಾನಗಳ ಸಂರಕ್ಷಣೆಗೆ ಒಂದು ವಾರದೊಳಗೆ ಕ್ರಮ ಕೈಗೊಳ್ಳದಿದ್ದರೆ ನಗರ ಪಾಲಿಕೆ ಹಾಗೂ ಮುಡಾ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವುದಾಗಿ ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷ ಭಾನುಮೋಹನ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಯಾನವನಗಳಲ್ಲಿ ಯಾವುದೇ ಕಟ್ಟಡ ನಿರ್ಮಿಸದಂತೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಮುಡಾ ಹಾಗೂ ಪಾಲಿಕೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ನಿಯಮ ಗಾಳಿಗೆ ತೂರಿ ಕಟ್ಟಿರುವ ಕಟ್ಟಡಗಳನ್ನು ತೆರವು ಮಾಡಲು ಒಂದು ವಾರ ಗಡುವು ನೀಡಲಾಗಿದೆ. ಈ ವೇಳೆ ಯಾವುದೇ ಕ್ರಮ ಕೈಗೊಳ್ಳದಿದ್ದಲ್ಲಿ ಎಲ್ಲ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ನಿರ್ಧರಿಸಿರುವುದಾಗಿ ತಿಳಿಸಿದರು. ಉದ್ಯಾನವನ ಕಾಯ್ದೆ ಪ್ರಕಾರ ಐದು ಎಕರೆಗಿಂತ ಹೆಚ್ಚಿನ ವಿಸ್ತೀರ್ಣವಿದ್ದರೆ ಶೇ.5ರಷ್ಟನ್ನು ಮಾತ್ರ ನಿರ್ವಹಣೆ ಉಪಕರಣ ಬಳಸಲು ಕಟ್ಟಡ ನಿರ್ಮಿಸಬಹುದಾಗಿದೆ. ಆದರೆ ಈ ನಿಯಮವನ್ನು ಪಾಲಿಕೆ ಹಾಗೂ ಮುಡಾ ಅಧಿಕಾರಿಗಳು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಉದ್ಯಾನಗಳಲ್ಲಿ ಯೋಗ ಮಂದಿರ ಸೇರಿದಂತೆ ಇನ್ನಿತರ ಉದ್ದೇಶಕ್ಕೆ ಕಟ್ಟಡ ನಿರ್ಮಿಸಲಾಗುತ್ತಿದೆ. ಅಧಿಕಾರಿಗಳು, ಜನಪ್ರತಿನಿಧಿಗಳ ಮಾತು ಕೇಳಿ ಈ ರೀತಿ ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಹೋರಾಟದ ಮೂಲಕ ಉದ್ಯಾನವನಗಳ ಸಂರಕ್ಷಣೆಗೆ ಮುಂದಾಗುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹೋರಾಟಗಾರ ಡಿ.ಪಿ.ಕೆ.ಪರಮೇಶ್, ಯದುಪತಿ ಕುಟ್ಟಿ ಇದ್ದರು.

ಆದಿಚುಂಚನಗಿರಿ ರಸ್ತೆಯಲ್ಲಿ ಅರ್ಧಕ್ಕೆ ನಿಂತ ಚರಂಡಿ ಕಾಮಗಾರಿ

ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು, ರೋಗಿಗಳ ಪರದಾಟ


ಮೈಸೂರು,ಜು.26(ಎಸ್‌ಪಿಎನ್)–ನಗರದ ಆದಿಚುಂಚನಗಿರಿ ರಸ್ತೆಯಲ್ಲಿ ಮೂರು ತಿಂಗಳ ಹಿಂದೆ ಆರಂಭವಾದ ಚರಂಡಿ ದುರಸ್ತಿ ಕಾಮಗಾರಿ ಅರ್ಧಕ್ಕೇ ನಿಂತಿದ್ದು, ಸಾರ್ವಜನಿಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಮತ್ತು ಆಸ್ಪತ್ರೆಗೆ ಹೋಗುವ ರೋಗಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮೈಸೂರು ನ್ಯೂ ಕಾಂತರಾಜ ಅರಸ್ ರಸ್ತೆಯ (ಕೆ.ಜಿ.ಕೊಪ್ಪಲು)ಲ್ಲಿರುವ ಆದಿಚುಂಚನಗಿರಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ವೃತ್ತದ ಮೂಲಕ ಕುವೆಂಪುನಗರಕ್ಕೆ ತೆರಳುವ ತಿರುವಿನಲ್ಲಿ ಮೂರು ತಿಂಗಳ ಹಿಂದೆ ಚರಂಡಿ ತುಂಬಿ ದುರಸ್ತಿಗೆ ಬಂದಿತ್ತು.

ಇದರಿಂದ ಸರಸ್ವತಿಪುರಂ, ಕುವೆಂಪುನಗರ, ವಿವೇಕಾನಂದನಗರ ಬಡಾವಣೆಗೆ ಕುಡಿಯುವ ನೀರು ಪೂರೈಕೆ ಪೈಪ್ ಒಡೆದು ಯುಜಿಡಿ ಮಿಶ್ರಿತ ನೀರು ಈ ಭಾಗದ ಮನೆಗಳಿಗೆ ಪೂರೈಕೆಯಾಗುತ್ತಿತ್ತು. ಈ ಸಂಬಂಧ ನಿವಾಸಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದ್ದರು. ಅಂದು ಈ ಸಮಸ್ಯೆಯನ್ನು ಸರಿಪಡಿಸಲು ಅರ್ಧ ರಸ್ತೆಯನ್ನು ಅಗೆದು ಹೋಗಿರುವ ಗುತ್ತಿಗೆದಾರರು ಇಲ್ಲಿಯವರೆಗೂ ಸರಿಪಡಿಸಲು ಮುಂದಾಗುತ್ತಿಲ್ಲ.



ಇದರಿಂದ ಇಡೀ ಸಂಚಾರ ಬಂದ್ ಆಗಿದೆ. ಈ ಮಾರ್ಗದಲ್ಲಿರುವ ಆದಿಚುಂಚನಗಿರಿ ವಿದ್ಯಾಸಂಸ್ಥೆ, ಕಾವೇರಿ ವಿದ್ಯಾಸಂಸ್ಥೆ, ನೂತನ ಜಿಲ್ಲಾ ನ್ಯಾಯಾಲಯ, ಅಶೋಕಪುರಂ ಪೊಲೀಸ್ ಠಾಣೆ, ಕೆ.ಜಿ.ಕೊಪ್ಪಲು ಸ್ಮಶಾನಕ್ಕೆ, ಕುವೆಂಪುನಗರ ಬಸ್ ನಿಲ್ದಾಣ, ಪ್ರಗತಿ ವಿದ್ಯಾಸಂಸ್ಥೆ, ಶಿವನ ದೇವಾಲಯ, ಕಾಗಿನೆಲೆ ಬಿ.ಇಡಿ ಕಾಲೇಜು ಮತ್ತು ಆಸ್ಪತ್ರೆಗಳಿಗೆ ಹೋಗುವವರು ಹರಸಾಹಸಪಟ್ಟು, ಬಳಸಿಕೊಂಡು ಓಡಾಡಬೇಕಾಗಿದೆ. ಈ ಸಂಬಂಧ ಈ ಮಾರ್ಗದಲ್ಲಿರುವ ಆಸ್ಪತ್ರೆ ತುರ್ತು ಚಿಕಿತ್ಸೆಗಾಗಿ ಆಂಬುಲೆನ್ಸ್‌ನಲ್ಲಿ ಬರುವವರು 5 ನಿಮಿಷ ಈ ತಿರುವಿನಲ್ಲಿ ನಿಲ್ಲಿಸಿ ಟ್ರಾಫಿಕ್ ಕ್ಲಿಯರ್ ಆದ ಬಳಿಕ ಆಂಬುಲೆನ್ಸ್ ತೆರಳಬೇಕಾಗಿದೆ ಅಧಿಕಾರಿಗಳ ಬೇಜವಾಬ್ದಾರಿ, ನಿರ್ಲಕ್ಷ್ಯವೇ ಇದಕ್ಕೆ ಕಾರಣ ಎಂದು ಕುವೆಂಪುನಗರದ ನಿವಾಸಿ ರಾಜು ಎಂಬುವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನೂತನ ಜಿಲ್ಲಾ ನ್ಯಾಯಾಲಯಕ್ಕೆ ತೆರಳಲು ಆದಿಚುಂಚನಗಿರಿ ರಸ್ತೆ ಮಾರ್ಗವನ್ನು ಬಳಸುತ್ತಿದ್ದೆವು. ಅಲ್ಲದೆ ಈ ಬಡಾವಣೆಯಲ್ಲಿ ವಾಸಿಸುತ್ತಿರುವ ಸರ್ಕಾರಿ ನೌಕರರು, ಅಧಿಕಾರಿಗಳು ಕಚೇರಿ ಸಮಯಕ್ಕೆ ಹೋಗುವ ಹಾಗೂ ಬರುವ ವೇಳೆಗೆ ಈ ತಿರುವಿ(ಶ್ರೀ ಬಾಲಗಂಗಾಧರ ಸ್ವಾಮೀಜಿ ವೃತ್ತ)ನಲ್ಲಿ ಸಾಕಷ್ಟು ಟ್ರಾಫಿಕ್ ಜಾಮ್ ಉಂಟಾಗಿ, ದಿನನಿತ್ಯ ಕಿರಿಕಿರಿ ಅನುಭವಿಸುತ್ತಿದ್ದಾರೆ. ಈ ಅವ್ಯವಸ್ಥೆ ಆದಷ್ಟು ಬೇಗನೆ ಸರಿಪಡಿಸಬೇಕು ಎಂದು ಹಿರಿಯ ವಕೀಲ ಉಮೇಶ್ 'ಮೈಸೂರು ಮಿತ್ರ'ನ ಮೂಲಕ ಅಧಿಕಾರಿಗಳನ್ನು ಒತ್ತಾಯಿಸಿದರು.

'ಮಿತ್ರ'ನ ಸುದ್ದಿ ಚಿತ್ರಗಳು...



ಮೈಸೂರು ಪೈಂಟ್ಸ್ ಅಂಡ್ ವಾರ್ನಿಷ್ ನಿಯಮಿತದ ನೂತನ ಅಧ್ಯಕ್ಷರಾಗಿ ನೇಮಕಗೊಂಡ ಆರ್.ರಘು, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಭೇಟಿಯಾಗಿ ಕೃತಜ್ಞತೆ ಸಲ್ಲಿಸಿ, ಆಶೀರ್ವಾದ ಪಡೆದರು.



ಮೃಗಾಲಯದ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಮಂಗಳವಾರ ಅಧಿಕಾರ ಸ್ವೀಕರಿಸಿದ ಎಂ.ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಬಿ.ಎಂ.ರಘು, ಜಿ.ಎಂ.ಮಹೇಶ್, ಬಿಜೆಪಿ ಹಿಂದುಳಿದ ವರ್ಗಗಳ ನಗರ ಅಧ್ಯಕ್ಷ ಜೋಗಿ ಮಂಜು, ಪಾಲಿಕೆ ಸದಸ್ಯ ಕೆ.ಜೆ.ರಮೇಶ್, ಮುಖಂಡರಾದ ರವಿಕುಮಾರ್, ಶಿವಕುಮಾರ್, ಈರಪ್ಪ, ಮಣಿರತ್ನ, ಸೀಗಳ್ಳಿ ರವಿ, ಮಧು, ಗೋಪಾಲ್, ಗಗನ್ ದೀಪ್ ಉಪಸ್ಥಿತರಿದ್ದಾರೆ.



ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ನೂತನ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಅವರನ್ನು ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿಕಟಪೂರ್ವ ಅಧ್ಯಕ್ಷ ಜಿ.ಮಂಜುಗೌಡ ಅಭಿನಂದಿಸಿದರು. ಈ ವೇಳೆ ಸಂಪತ್, ಅಜಾಮ್, ಸಾಗರ್, ನಸ್ರು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ(ಜನತಾ ಬಜಾರ್)ದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ದೇವರಾಜ ಮೊಹಲ್ಲಾದ ಸಿ.ಕುಮಾರಸ್ವಾಮಿ ಅವರನ್ನು ಅಭಿನಂದಿಸಲಾಯಿತು. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಹೆಚ್.ಹರೀಶ್‌ಕುಮಾರ್, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕ ಎಸ್.ಕೃಷ್ಣಕುಮಾರ್, ಆಟೋ ಸಿದ್ದರಾಮು, ಗುರುದತ್ತ ಇದ್ದರು.

ಜು.29ರಿಂದ ಶ್ರಾವಣಮಾಸ ಪೂಜಾನುಷ್ಠಾನ, ಪ್ರವಚನ

ಮೈಸೂರು,ಜು.26–ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಶಾಖಾ ಮಠದಲ್ಲಿ ಶ್ರಾವಣಮಾಸದ ಅಂಗವಾಗಿ ಜು.29ರಿಂದ ಆಗಸ್ಟ್ 28ರವರೆಗೆ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ. ಪ್ರತಿನಿತ್ಯ ಸಂಜೆ 6.ರಿಂದ 6.30 ರವರೆಗೆ ಸಾಮೂಹಿಕ ಪ್ರಾರ್ಥನೆ, 6.30ರಿಂದ 7.30ರವರೆಗೆ ಸಂಸ್ಕೃತಿ ದರ್ಶನ ಶೀರ್ಷಿಕೆಯಡಿಯಲ್ಲಿ ಡಾ.ಕೆ.ಅನಂತರಾಮು, ಡಾ.ಬಿ.ವಿ.ವಸಂತಕುಮಾರ್ ಮತ್ತು ಪ್ರೊ. ಮೊರಬದ ಮಲ್ಲಿಕಾರ್ಜುನ ಕ್ರಮವಾಗಿ ಭಾರತೀಯ ಸಂಸ್ಕೃತಿ, ಕರ್ನಾಟಕ ಸಂಸ್ಕೃತಿ, ಶರಣ ಸಂಸ್ಕೃತಿ ವಿಷಯ ಕುರಿತು ಪ್ರವಚನ ನೀಡಲಿದ್ದಾರೆ. ಜು.29 ಶುಕ್ರವಾರ ಸಂಜೆ 6ಕ್ಕೆ ಶ್ರೀ ಸಾಲೂರು ಬೃಹನ್ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.07.2022 ಬುಧವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ಚತುರ್ದಶಿ, ನಕ್ಷತ್ರ : ಪುನರ್ವಸು, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ ಅವರಿಂದ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವಗಳು, ಸಂಜೆ ಮಾಸ ಶಿವರಾತ್ರಿ, ಸಹಸ್ರಲಿಂಗಾರ್ಚನೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ, ನಂಜನಗೂಡು ರಸ್ತೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಶರ್, ಸುಜೋಕ್, ಆಕ್ಯೂ ಡಿಜಿಟಲ್ ಫಿಜಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಭೈರವೇಶ್ವರ ಮತ್ತು ಶ್ರೀ ಮಹಾಗಣಪತಿ ದೇವಸ್ಥಾನ, ಕುವೆಂಪುನಗರ, ಬೆಳಗ್ಗೆ 10 ರಿಂದ.

■ **ಟಿಟಿಎಲ್ ಟ್ರಸ್ಟ್, ಟಿಟಿಎಲ್ ವಾಣಿಜ್ಯ ವ್ಯವಹಾರ ನಿರ್ವಹಣಾ ಕಾಲೇಜು:** ಗುಂಪು ರಕ್ತ ತಪಾಸಣೆ, ರಕ್ತದಾನ ಶಿಬಿರ, ಅಧ್ಯಕ್ಷತೆ: ಸಿಇಓ ಚೇತನಾ ರಾಮದಾಸ್, ಟಿಟಿಎಲ್ ಟ್ರಸ್ಟ್ ಉಪಾಧ್ಯಕ್ಷ ಪ್ರಕಾಶ್ ತೋಲಿಗೌಡ, ಪ್ರಾಸ್ತಾವಿಕ ನುಡಿ: ಟ್ರಸ್ಟ್ ನಿಯೋಜನಾ ಅಧಿಕಾರಿ ಡಾ.ಬಿ.ವಿ.ಪ್ರಶಾಂತ್, ಮುಖ್ಯ ಅತಿಥಿಗಳು: ಎಸ್.ಇ. ಗಿರೀಶ್, ಪಿ.ಎಸ್.ಸುಧೀರ್, ಪೂರ್ಣಿಮಾ ಪೂಂಜ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಮಹಾಜನ ಪದವಿಪೂರ್ವ ಕಾಲೇಜು:** ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ: ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಮುಖ್ಯ ಅತಿಥಿಗಳು: ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ.ಕೆ.ಶ್ರೀನಿವಾಸಮೂರ್ತಿ, ಹಿರಿಯ ರಂಗಕರ್ಮಿ ಹೆಚ್. ಜನಾರ್ಧನ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ,** ಜೆಎಸ್‌ಎಸ್ ಪ.ಪೂ ಕಾಲೇಜು: ಸಾಂಸ್ಕೃತಿಕ ವೇದಿಕೆ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ, ಅಧ್ಯಕ್ಷತೆ: ಮಾಜಿ ಎಂಎಲ್‌ಸಿ ಪ್ರೊ.ಮಲ್ಲಿಕಾರ್ಜುನಪ್ಪ, ಉದ್ಘಾಟನೆ: ಡಾ.ಪ್ರಸನ್ನ ಕೆ. ಸಂತೇ ಕಡೂರು, ಸ್ಥಳ: ಕಾಲೇಜು ಆವರಣ, ಜೆಪಿನಗರ, ಬೆಳಗ್ಗೆ 11ಕ್ಕೆ

■ **ಕಡಾಂಬಿ ಪದ್ಮ ಮೆಮೋರಿಯಲ್ ಟ್ರಸ್ಟ್ :** ಡಿವಿಜಿಯವರ 'ಮಂಕುತಿಮ್ಮನ ಕಗ್ಗ' ಪ್ರವಚನ, ಸಂಜೆ 6 ರಿಂದ ಬೇಂದ್ರೆ ಅವರ ಗೀತೆಗಳು, ಸಂಜೆ 6.30ರಿಂದ ಶ್ರೀಹರ್ಷ ಅವರಿಂದ ಪ್ರವಚನ, ಸ್ಥಳ: ಗಣಪತಿ ದೇವಸ್ಥಾನ 'ಐ' ಬ್ಲಾಕ್, ರಾಮಕೃಷ್ಣನಗರ.

■ **ಭಾವಸಾರ ಕ್ಷತ್ರಿಯ ಸಂಘ:** ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಸಂಜೆ 5ರಿಂದ ಮಹಾಮಂಗಳಾರತಿ, ಸ್ಥಳ: ಎಲ್‌ಐಜಿ 88, ಹುಡ್ಕೋ, ಬನ್ನಿಮಂಟಪ ಬಡಾವಣೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕೋ.ಚೆನ್ನಬಸಪ್ಪನವರ ಜನ್ಮ ಶತಮಾನೋತ್ಸವ ಸಮಿತಿ:** ಕರ್ನಾಟಕ ಏಕೀಕರಣ ಹೋರಾಟಗಾರ ಕೋ. ಚೆನ್ನಬಸಪ್ಪನವರ ಜನ್ಮ ಶತಮಾನೋತ್ಸವ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಪ್ರೊ. ಮಲೆಯೂರು ಗುರುಸ್ವಾಮಿ, ಅಧ್ಯಕ್ಷತೆ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ದೇವರಾಜ ಭೂತೆ, ಆಶಯ ಭಾಷಣ: ಸಮಿತಿ ಅಧ್ಯಕ್ಷ ನಾಡೋಜ ಗೊ.ರು. ಚನ್ನಬಸಪ್ಪ, ಉಪಸ್ಥಿತರು: ಡಾ.ಕೆ.ಸಿ.ಗುರುದೇವ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಂಟಿ ನಿರ್ದೇಶಕ ಕೆ.ಐ. ಗುದಗಿ, ವಿಷಯ ಮಂಡನೆ: ಆಕಾಶವಾಣಿ ನಿರ್ದೇಶಕ ಬಸವರಾಜ ಸಾದರ, ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಎನ್.ಎಂ.ತಳವಾರ, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಸಂಸ್ಥಾಪನಾ ದಿನಾಚರಣೆ, ಅಧ್ಯಕ್ಷತೆ: ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ, ಮುಖ್ಯ ಅತಿಥಿಗಳು : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಸ್ಥಳ: ಕ್ರಾಫರ್ಡ್ ಭವನ, ಮೈಸೂರು ವಿವಿ, ಬೆಳಗ್ಗೆ 11ಕ್ಕೆ.

■ **ಹೆಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ಶೇಷಾದ್ರಿಪುರಂ ಪದವಿ ಕಾಲೇಜು :** ಹೆಚ್.ಸಿ. ದಾಸಪ್ಪ ಸಂಸ್ಮರಣೆ ಮತ್ತು ದತ್ತಿ ಉಪನ್ಯಾಸ, ಉದ್ಘಾಟನೆ : ಮಾಜಿ ಶಾಸಕ ವಾಸು, ಗಾಂಧೀಜಿ ಹಿಂದೆಂದಿಗಿಂತಲೂ ಇಂದು ಪ್ರಸ್ತುತ ಕುರಿತು ಡಾ. ಪ್ರಕಾಶ್ ಭಟ್ ಅವರಿಂದ ದತ್ತಿ ಉಪನ್ಯಾಸ, ಅಧ್ಯಕ್ಷತೆ : ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಪ್ರಾಸ್ತಾವಿಕ ನುಡಿ : ಹೆಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಉಪಾಧ್ಯಕ್ಷ ಪ್ರೊ. ಜಿ.ಬಿ. ಶಿವರಾಜು, ಸ್ಥಳ: ಶೇಷಾದ್ರಿಪುರಂ ಪದವಿ ಕಾಲೇಜು, ಬೆಳಗ್ಗೆ 11ಕ್ಕೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್:** ಮೈಸೂರು ಏರ್‌ಪೋರ್ಟ್‌ನ ಭವಿಷ್ಯದ ಸನ್ನಿವೇಶ ಕುರಿತು ಮೈಸೂರು ಏರ್‌ಪೋರ್ಟ್ ಅಥಾರಿಟಿ ನಿರ್ದೇಶಕ ಆರ್.ಮಂಜುನಾಥ್ ಅವರಿಂದ ಉಪನ್ಯಾಸ, ಗೌರವ ಅತಿಥಿಗಳು: ಫೈರ್ ಸೇಫ್ಟಿ ರೀಸರ್ಚ್ ಫೌಂಡೇಷನ್ ನಿರ್ದೇಶಕ ಡಾ.ಎನ್.ಸುರೇಶ್, ಅಧ್ಯಕ್ಷತೆ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ:ಎಸ್.ಪಿ.ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ನಖ ಶಿಖಾಂತ –ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರೈಸಿದ ಕಾರ್ಯಕ್ರಮ ಸರಣಿ, ಗಾಯನ– ನಿತಿನ್ ರಾಜಾರಾಂ ಶಾಸ್ತ್ರಿ ಮತ್ತು ಟಿ.ಎಸ್. ಸ್ನೇಹಾ, ವ್ಯಾಖ್ಯಾನ– ಡಾ.ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ –ಬಾನುಲಿ ಸರಣಿ, 10.00 ಹಿಂದೂಸ್ತಾನಿ ಸಂಗೀತ–ರವೀಂದ್ರ ಸೊರಗಾವಿ–ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ವಿದ್ಯಾಭೂಷಣ ಮತ್ತು ಕೆ.ಎಸ್.ಸುರೇಖ, 12.45 ಲಾಕ್‌ಡೌನ್ ಕಥಾ ನಾಟಕ–ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ "ಬದುಕು", ಮೂಲಕಥೆ– ದಿವಾಕರ ಹೆಗಡೆ, ನಾಟಕ ರೂಪ–ವಸುಮತಿ ಉಡುಪ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಡಾ.ಎ.ಡಿ.ಶ್ರೀನಿವಾಸನ್, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ, ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಪತ್ರಕರ್ತೆ ಪ್ರೀತಿ ನಾಗರಾಜ್ ಅವರೊಂದಿಗೆ ಸಂವಾದದ ನೇರ ಪ್ರಸಾರ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 4.45 ಹಿಂದಿ ಪಾಠ–ಎಸ್.ಈಶ್ವರ್ ಭಟ್, 6.50 ಕೃಷಿರಂಗ–ಕಿಸಾನ್‌ವಾಣಿ, ಹವಾಮಾನ ಆಧಾರಿತ ಕೃಷಿ ತಾಂತ್ರಿಕತೆಗಳೂ ಕುರಿತು ಡಾ.ಜಿ.ಹೆಚ್.ಯೋಗೇಶ್ ಅವರೊಡನೆ ಸಂದರ್ಶನ, 9.05 ಕ್ಷಿತಿಜ–Literacy ಗುರು–ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00 ಹಳ್ಳಿ ಹಾಡು–ತಂಬೂರಿ ಜವರಯ್ಯ ಮತ್ತು ಮಡಡಿ ಬೋರಮ್ಮ, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ

ರೈಲ್ವೆ ಸಚಿವರಿಗೆ ಸಂಸದ ಪ್ರತಾಪ್ ಸಿಂಹರಿಂದ ಹಲವು ಬೇಡಿಕೆ ಸಲ್ಲಿಕೆ

ಮೈಸೂರು–ತಾಳಗುಪ್ಪ ರೈಲಿಗೆ ಕುವೆಂಪು ಹೆಸರಿಡಲು ಮನವಿ

ರೈಲ್ವೆ ಕೋಟಾದಡಿ ಕರ್ನಾಟಕದ ಮಹಿಳಾ ಹಾಕಿ ಆಟಗಾರರ ಪರಿಗಣಿಸಲು ಕೋರಿಕೆ



ಮೈಸೂರು, ಜು.26 (ಆರ್‌ಕೆಬಿ)– ಹಲವು ರೈಲ್ವೆ ಸಂಪರ್ಕಗಳಿಗೆ ಸಂಬಂಧಿಸಿದಂತೆ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಮಂಗಳವಾರ ಕೇಂದ್ರ ರೈಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ದೆಹಲಿಯಲ್ಲಿ ರೈಲ್ವೆ ಸಚಿವರನ್ನು ಭೇಟಿ ಮಾಡಿದ ಅವರು, ಮೈಸೂರಿನ ಅಭಿವೃದ್ಧಿ ದೃಷ್ಟಿಯಿಂದ ಹಾಲಿ ಬೆಂಗಳೂರು–ಮುಂಬಯಿ ಉದ್ಯಾನ್ ಎಕ್ಸ್‌ಪ್ರೆಸ್ ರೈಲನ್ನು ಮೈಸೂರಿಗೆ ವಿಸ್ತರಿಸುವಂತೆ ಮನವಿ ಮಾಡಿದರು. ತಾಳಗುಪ್ಪ–ಮೈಸೂರು ಎಕ್ಸ್‌ಪ್ರೆಸ್ ರೈಲಿಗೆ ಕುವೆಂಪು ಎಕ್ಸ್‌ಪ್ರೆಸ್ ಎಂದು ನಾಮಕರಣ ಮಾಡುವಂತೆ ಅವರು ಮನವಿ ಮಾಡಿದ್ದಾರೆ. ಕೋವಿಡ್–19 ಕಾರಣದಿಂದ ರದ್ದುಪಡಿಸಲಾಗಿದ್ದ ರೈಲಿಗೆ ರಾಷ್ಟ್ರಕವಿ ಕುವೆಂಪು ಹೆಸರು ನಾಮಕರಣ ಮಾಡುವುದರಿಂದ ಅವರಿಗೆ ಗೌರವ ನೀಡಿದಂತಾಗುತ್ತದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಾರ್ಗವಾಗಿ ಬೆಂಗಳೂರು ಸಿಟಿ–ಮಂಗಳೂರು ಸೆಂಟ್ರಲ್–ಬೆಂಗಳೂರು ಸಿಟಿ ಜಂಕ್ಷನ್ ರೈಲು ವಾರದಲ್ಲಿ ಮೂರು ದಿನ ಸಂಚರಿಸುತ್ತಿದ್ದು, ಅದನ್ನು ಪ್ರತಿದಿನ ಬೆಂಗಳೂರು–ಹಾಸನ ಮಧ್ಯೆ ಕುಣಿಗಲ್ ಮೂಲಕ ಪರ್ಯಾಯ ಮಾರ್ಗ ವನ್ನು ವಿಸ್ತರಿಸುವಂತೆ ಮನವಿ ಮಾಡಿದ್ದಾರೆ. ಮೈಸೂರು–ಬೆಂಗಳೂರು ನಡುವಿನ ಹನಕೆರೆ ಮತ್ತು ಮಂಡ್ಯ ನಿಲ್ದಾಣಗಳ ನಡುವೆ ಲೆವೆಲ್ ಕ್ರಾಸಿಂಗ್ ಬದಲಾಗಿ ಮೇಲ್ಸೇತುವೆ ಅಥವಾ ಕೆಳ ಸೇತುವೆ ಅಥವಾ ಸೀಮಿತ ಎತ್ತರದ ಸಬ್‌ವೇ ನಿರ್ಮಿಸಲು ಅನುವು ಮಾಡಿಕೊಡುವಂತೆಯೂ ಅವರು ಮನವಿ ಮಾಡಿದ್ದಾರೆ.

ನೈರುತ್ಯ ರೈಲ್ವೆಯ ನೇಮಕಾತಿ ಸಂದರ್ಭದಲ್ಲಿ ಕ್ರೀಡಾ ಕೋಟಾದಡಿ ಕರ್ನಾಟಕದ ಮಹಿಳಾ ಹಾಕಿ ತಂಡವನ್ನು ಪ್ರತಿನಿಧಿಸುವ ಮಹಿಳಾ ಕ್ರೀಡಾಪಟುಗಳನ್ನು ಪರಿಗಣಿಸುವಂತೆ ರೈಲ್ವೆ ಸಚಿವರಲ್ಲಿ ಮನವಿ ಮಾಡಿದ್ದಾರೆ. ತಮ್ಮ ಬೇಡಿಕೆಗಳಿಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದ್ದಾರೆ.

ಅಮರನಾಥ ಯಾತ್ರೆ ರದ್ದು

ಶ್ರೀನಗರ: ಹವಾಮಾನ ವೈಪರೀತ್ಯದಿಂದಾಗಿ ಪಂಚತಾರಿಣಿ ಹಾಗೂ ಪವಿತ್ರ ಗುಹಾಲಯ ನಡುವಣದ ಅಮರನಾಥ ಯಾತ್ರೆಯನ್ನು ರದ್ದುಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಮರನಾಥ ಗುಹಾಲಯದ ಪರ್ವತ ಶ್ರೇಣಿ ಹಾಗೂ ಇತರ ಪರ್ವತ ಶ್ರೇಣಿಗಳಲ್ಲಿ ಮಂಗಳವಾರ ಮಧ್ಯಾಹ್ನದಿಂದ ವಿಪರೀತ ಮಳೆಯಾಗುತ್ತಿದ್ದು, ಹತ್ತಿರದ ಹೊಳೆಯಲ್ಲಿ ನೀರಿನ ಮಟ್ಟವೂ ಅಧಿಕವಾಗುತ್ತಿದೆ. ಭಕ್ತರು ಪಂಚತಾರಿಣಿ ಶಿಬಿರಕ್ಕೆ ಮರಳುತ್ತಿದ್ದಾರೆ. ಮಳೆಯಿಂದಾಗಿ ಯಾವುದೇ ಪ್ರಾಣಹಾನಿ, ಗಾಯಾಳುಗಳು ಅಥವಾ ಆಸ್ತಿ ನಾಶದಂತಹ ಪ್ರಕರಣಗಳು ವರದಿಯಾಗಿಲ್ಲ ಎಂದೂ ಅವರು ಮಾಹಿತಿ ನೀಡಿದರು.

ಆಜಾದಿ ಕಾ ಅಮೃತ್: ಭಾಷಣ, ದೇಶಭಕ್ತಿ ಗೀತೆ ಸ್ಪರ್ಧೆ

ಮೈಸೂರು, ಜು.26(ಎಂಟಿವೈ)– ಅಖಿಲ ಭಾರತೀಯ ಶೈಕ್ಷಿಕ್ ಮಹಾಸಭಾ ವತಿಯಿಂದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಆ.1ರಂದು ಶಾಲಾ–ಕಾಲೇಜುಗಳಲ್ಲಿ 'ಆಜಾದಿ ಕಾ ಅಮೃತ್ ಮಹೋತ್ಸವ್' ವಿಷಯ ಕುರಿತು ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ, ಉಪನ್ಯಾಸ, ದೇಶ ಭಕ್ತಿಗೀತೆ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧನಕೇರ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವೇಳೆ ಪ್ರತಿ ವಿದ್ಯಾಲಯಕ್ಕೆ ಸಂಘಟನೆ ವತಿಯಿಂದ ಭಾರತ ಮಾತೆಯ ಭಾವಚಿತ್ರವಿರುವ ಲ್ಯಾಮಿನೇಟೆಡ್ ಫೋಟೋ ನೀಡಲಾಗುವುದು. ವಿದ್ಯಾರ್ಥಿಗಳ ಮಹಾ ಪುರುಷರ ವೇಷಭೂಷಣ ಮೆರವಣಿಗೆ, ಸೈಕಲ್ ಜಾಥಾ, ಬೈಕ್ ರ್‍ಯಾಲಿ ಆಯೋಜಿಸಲಾಗುತ್ತಿದೆ. ಈ ಕುರಿತು ಈಗಾಗಲೇ ಶಾಲಾ ಕಾಲೇಜುಗಳಿಗೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತೀಯ ಶೈಕ್ಷಿಕ್ ಮಹಾಸಭಾ ಪದಾಧಿಕಾರಿಗಳಾದ ನಂದೀಶ್, ಜಿ.ಎನ್. ನಂಜುಂಡಸ್ವಾಮಿ, ಎಸ್.ಚಿದಂಬರಂ, ಉದಯರವಿ ಪ್ರಕಾಶ್ ಇದ್ದರು.



ಮೈಸೂರು ತಾಲೂಕಿನ ಉದ್ಬೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಕೃಷ್ಣನಾಯಕ್ ಮಂಗಳವಾರ ಸಾಲುಂಡಿಯಲ್ಲಿರುವ ನವಚೇತನ ವಿಶೇಷ ಮಕ್ಕಳ ಶಾಲೆಯಲ್ಲಿ ತಮ್ಮ ಅಭಿಮಾನಿಗಳೊಂದಿಗೆ ಕೇಕ್ ಕತ್ತರಿಸಿ, ಸಿಹಿ ಹಂಚುವ ಮೂಲಕ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಮಹಾದೇವ್, ಧನಗಳ್ಳಿ ಬಸವರಾಜು, ಶಾಲೆ ಅಧ್ಯಕ್ಷ ಮಾಕಿ ಮರೀಗೌಡ, ಬಸವನಾಯಕ್, ನಾಗರಾಜ್ ನಾಯಕ್, ಕೃಷ್ಣ, ರಾಕೇಶ್, ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಜೆ.ಪಿ.ನಗರ ಬ್ರಾಹ್ಮಣ ಸಂಘದಿಂದ ಕಾರ್ಯಕ್ರಮ

ಮೈಸೂರು,ಜು.26–ಮೈಸೂರಿನ ಜೆ.ಪಿ.ನಗರ ಬ್ರಾಹ್ಮಣ ಸಂಘದಿಂದ ಸಂಘದ ಸಮುದಾಯ ಭವನದಲ್ಲಿ ಆ.2ರಂದು ಬೆಳಗ್ಗೆ 7 ಗಂಟೆಗೆ ಋಗುಪಾಕರ್ಮ, ಆ.11ರಂದು ಬೆಳಗ್ಗೆ 6 ಗಂಟೆಗೆ ಯಜುರುಪಾಕರ್ಮ ಮತ್ತು 12ರಂದು ಬೆಳಗ್ಗೆ 9ಕ್ಕೆ ಗಾಯತ್ರಿ ಪ್ರತಿ ಪತ್ ಕಾರ್ಯಕ್ರಮ ನಡೆಯಲಿದೆ. ಸಮುದಾಯ ಬಾಂಧವರು ಭಾಗಿಯಾಗಿ ವೇದ ಮಾತೆ ಗಾಯತ್ರಿ ಮಾತೆಯ ಕೃಪೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ.

ಮೈಸೂರಿನ ಕೆಲವೆಡೆ 3 ದಿನ ನೀರು ಸರಬರಾಜಿನಲ್ಲಿ ವ್ಯತ್ಯಯ

ಮೈಸೂರು,ಜು.26(ಪಿಎಂ)–ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕಬಿನಿ ನೀರು ಸರಬರಾಜು ಘಟಕದ ಮೂಲಸ್ಥಾವರದಲ್ಲಿ ತಾಂತ್ರಿಕ ದೋಷ ಉಂಟಾಗಿದ್ದು, ಈ ಕಾರಣ ಜು.27ರಿಂದ 29ರವರೆಗೆ ವಾರ್ಡ್ 45ರಿಂದ 51ರವರೆಗೆ (ಶಾರದಾದೇವಿನಗರ, ದಟ್ಟಗಳ್ಳಿ 3ನೇ ಹಂತ, ಕುವೆಂಪುನಗರ, ಜಯನಗರ, ಲಕ್ಷ್ಮೀಪುರಂ, ಸುಣ್ಣದಕೇರಿ, ಅಗ್ರಹಾರ), ವಾರ್ಡ್ 54ರಿಂದ 65ರವರೆಗೆ (ಗುಂಡೂರಾವ್ ನಗರ, ಚಾಮುಂಡಿಪುರಂ, ಕೃಷ್ಣಮೂರ್ತಿಪುರಂ, ಕುವೆಂಪುನಗರ ಸಿಐಟಿಬಿ, ರಾಮಕೃಷ್ಣನಗರ, ಕುವೆಂಪುನಗರ 'ಎಂ' ಬ್ಲಾಕ್, ಅಶೋಕಪುರಂ, ವಿದ್ಯಾರಣ್ಯಪುರಂ ಭಾಗಶಃ ಪ್ರದೇಶ, ವಿಶ್ವೇಶ್ವರನಗರ, ಜೆಪಿ ನಗರ, ಅರವಿಂದನಗರ, ಶ್ರೀರಾಂಪುರ) ಸೇರಿದಂತೆ ಇತ್ಯಾದಿ ಪ್ರದೇಶದಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಚಿರಂತ್ ಉನ್ನತ ದರ್ಜೆಯಲ್ಲಿ ತೇರ್ಗಡೆ

ಮೈಸೂರು, ಜು. 26–



ಮೈಸೂರಿನ ಕೆಎನ್‌ಸಿ ಇನ್ನೋವೇಟಿವ್ ಗ್ಲೋಬಲ್ ಸ್ಕೂಲ್ ವಿದ್ಯಾರ್ಥಿ ಎನ್.ವಿ.ಚಿರಂತ್ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾನೆ.

ಇಂಗ್ಲಿಷ್‌ನಲ್ಲಿ 91, ಕನ್ನಡದಲ್ಲಿ 95, ಗಣಿತ ಶಾಸ್ತ್ರ 86, ವಿಜ್ಞಾನ 95 ಹಾಗೂ ಸಮಾಜ ವಿಜ್ಞಾನದಲ್ಲಿ 94 ಸೇರಿದಂತೆ ಒಟ್ಟು ಶೇ.92.2 ಅಂಕ ಗಳಿಸಿದ್ದಾನೆ. ಈತ ಬಿ.ಎಂ.ಶ್ರೀನಗರದ ಎನ್.ಆರ್.ವಿಜಯ್‌ಕುಮಾರ್ ಹಾಗೂ ಜಯಮ್ಮ ದಂಪತಿ ಪುತ್ರ

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ನಾಳೆ

ಮೈಸೂರು,ಜು.26–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜು.28ರಂದು ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ.0821–4259259 ಸಂಪರ್ಕಿಸಬಹುದು.

ಮೈಸೂರಲ್ಲಿ ಹಡಪದ ಅಪ್ಪಣ್ಣ ಜಯಂತಿ ಆಚರಣೆ

ಬಸವಣ್ಣನವರು ಹಡಪದ ಅಪ್ಪಣ್ಣರನ್ನು ನಿಜಸುಖಿ ಎಂದು ಕರೆದಿದ್ದರು: ಜಿಟಿಡಿ



ಮೈಸೂರಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡ ಹಡಪದ ಅಪ್ಪಣ್ಣನವರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಚಿತ್ರದಲ್ಲಿ ಶಾಸಕ ಎಲ್.ನಾಗೇಂದ್ರ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಕೊಂಚೂರು ಸವಿತಾ ಪೀಠದ ಶ್ರೀ ಸವಿತಾ ನಂದನಾಥ ಸ್ವಾಮೀಜಿ, ಪರಿಷತ್ ಮಾಜಿ ಸದಸ್ಯ ಪುಟ್ಟಸಿದ್ದಶೆಟ್ಟಿ, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್. ನಾಗೇಶ್ ಇನ್ನಿತರಿದ್ದಾರೆ.

ಮೈಸೂರು, ಜು.26(ಆರ್‌ಕೆಬಿ)– ಹಡಪದ ಅಪ್ಪಣ್ಣ ಅವರ ವಿಚಾರಧಾರೆಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಡಪದ ಅಪ್ಪಣ್ಣ ಜಯಂತಿ ಆಚರಣಾ ಸಮಿತಿ ಜಂಟಿಯಾಗಿ ಮಂಗಳವಾರ ಆಯೋಜಿಸಿದ್ದ ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.

ಅಪ್ಪಣ್ಣ ಅವರ ವಚನಗಳು ಬಸವಣ್ಣನವರ ಮೇಲಿನ ಗೌರವ ಭಕ್ತಿಯನ್ನು ವ್ಯಕ್ತಪಡಿಸುತ್ತವೆ. 12ನೇ ಶತಮಾನದಲ್ಲಿಯೇ ಬಸವಣ್ಣನವರು ಅಪ್ಪಣ್ಣನವರನ್ನು ನಿಜಸುಖಿ ಎಂದು ಕರೆಯುತ್ತಿದ್ದರು ಎಂದರು.

ಹಡಪದ ಅಪ್ಪಣ್ಣನವರು ಲಿಂಗವನ್ನು ಕೈಯಲ್ಲಿ ಇಟ್ಟುಕೊಂಡು ಅದನ್ನು ನೋಡಿ ತಲ್ಲೀನರಾಗುತ್ತಿದ್ದರು. 12ನೇ ಶತಮಾನದಲ್ಲಿಯೇ ಹಾಸ್ಯ ವಚನಕಾರರಾಗಿ ಪ್ರಮುಖವಾದ ವಚನಗಳ ಮುಖಾಂತರ ಬದಲಾವಣೆಗೆ ಮುನ್ನುಡಿ ಬರೆದ ಮಹಾವೀರರು ಎಂದು ಹೇಳಿದರು.

ಮೈಸೂರಿನ ಶರಣು ವಿಶ್ವ ವಚನ ಫೌಂಡೇಶನ್‌ನ ಡಾ.ವಚನ ಕುಮಾರ ಸ್ವಾಮಿ ಅವರು ಮಾತನಾಡಿ, ಅಪ್ಪಣ್ಣ ಅವರ ಮೂಲ ಹೆಸರು ಜೀವಣ್ಣ. ಇವರ ಜನ್ಮಸ್ಥಳ ವಾಸಬಿನಾಳ. ಇವರು ಅವರ ಜಮೀನಿನಲ್ಲಿಯೇ ಇದ್ದ ಒಂದು ಜಂಬೆ ಮರದ ಕೆಳಗೆ ಶಿವ ಭಕ್ತಿಯಲ್ಲಿ ತಲ್ಲೀನರಾಗಿರುತ್ತಿದ್ದರು. ಇದರಿಂದ ಭಯಗೊಂಡ ಅವರ ತಂದೆ ಅವರಿಗೆ ವಿವಾಹ ಮಾಡಿದರು. ಬಾಲ್ಯದಲ್ಲಿಯೇ ಹಡಪದ ಅಪ್ಪಣ್ಣ ಅವರಿಗೆ ವಿವಾಹವಾಗಿ ಗಂಡ–ಹೆಂಡತಿ ಇಬ್ಬರಿಗೂ ಕೂಡ ಶಿವದೀಕ್ಷೆ ಆಗುತ್ತದೆ ಎಂದು ತಿಳಿಸಿದರು.

ತಮ್ಮ ತನು–ಮನ ಎಲ್ಲವನ್ನೂ ಬಸವಣ್ಣನವರಿಗೆ ಅರ್ಪಣೆ ಮಾಡಿದ್ದ ಹಡಪದ ಅಪ್ಪಣ್ಣ ಅವರನ್ನು ಬಸವಣ್ಣನವರು ಆಪ್ತ ಕಾರ್ಯದರ್ಶಿಯಾಗಿ ಮಾಡಿಕೊಳ್ಳುತ್ತಾರೆ. ಹಡಪದ ಅಪ್ಪಣ್ಣನವರ 354 ವಚನಗಳು ದೊರೆತಿವೆ. ಹಡಪದ ಅಪ್ಪಣ್ಣ ಬೇರೆಯಲ್ಲ ಸಂಗಮೇಶ್ವರ ಅಪ್ಪಣ್ಣ ಬೇರೆಯಲ್ಲ ಇಬ್ಬರೂ ಒಂದೇ ಎಂದು ಸ್ಪಷ್ಟಪಡಿಸಿದರು.

ಶಾಸಕ ಎಲ್.ನಾಗೇಂದ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೊಂಚೂರು ಶ್ರೀ ಸವಿತಾ ಪೀಠ ಮಹಾಸಂಸ್ಥಾನದ ಶ್ರೀ ಸವಿತಾ ನಂದನಾಥ ಮಹಾಸ್ವಾಮೀಜಿ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಪರಿಷತ್ ಮಾಜಿ ಸದಸ್ಯ ಪುಟ್ಟಸಿದ್ದಶೆಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ಸದಸ್ಯ ಹರೀಶ್ ರೆಡ್ಡಿ ಇನ್ನಿತರರು ಉಪಸ್ಥಿತರಿದ್ದರು.

ನಕಲಿ ಖಾತೆಗಳ ಮೂಲಕ ಶಾಂತಿ ಕದಡುವ ನೀಚ ಕೃತ್ಯ

ಬಿಜೆಪಿ ವಿರುದ್ಧ ಕಾಂಗ್ರೆಸ್ ಗಂಭೀರ ಆರೋಪ

ಮೈಸೂರು ಜು.26(ಎಂಟಿವೈ)–ಬಿಜೆಪಿಯ ಕೆಲ ಕಾರ್ಯಕರ್ತರು ಮುಖಂಡರ ಕುಮ್ಮಕ್ಕಿನಿಂದ ಮುಸ್ಲಿಮರ ಹೆಸರಿನಲ್ಲಿ ನಕಲಿ ಖಾತೆಗಳನ್ನು ತೆರೆದು ಸಮಾಜದ ಶಾಂತಿ ಕದಡುವ ನೀಚ ಕೆಲಸಕ್ಕೂ ಕೈ ಹಾಕಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಗಂಭೀರವಾಗಿ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾಜಿಕ ಜಾಲತಾಣಗಳಲ್ಲಿ ಮುಸ್ಲಿಂರ ಹೆಸರಲ್ಲಿ ನಕಲಿ ಖಾತೆ ತೆರೆದು ಅನ್ಯಕೋಮಿನ ಹೆಣ್ಣು ಮಕ್ಕಳ ಬಗ್ಗೆ ಅವಾಚ್ಯ ಪದಗಳಿಂದ ನಿಂದಿಸಿ ಪೋಸ್ಟ್ ಮಾಡಲಾಗಿದೆ. ನಕಲಿ ಖಾತೆ ತೆರೆದಿದ್ದ ಆರೋಪ ಎದುರಿಸುತ್ತಿರುವ ದಿವಿನ್ ಪೂವಯ್ಯ ಬಿಜೆಪಿ ಸಂಸದರು, ಶಾಸಕರ ಆಪ್ತರಾಗಿದ್ದಾರೆ. ಮೊಹಮ್ಮದ್ ಅಸ್ಮತ್ ಹೆಸರಲ್ಲಿ ನಕಲಿ ಖಾತೆ ತೆರೆದಿದ್ದ ಆರೋಪಿ ದಿವಿನ್ ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಅವರಿಗೆ ಆತ್ಮೀಯ. ಸಂಸದ ಪ್ರತಾಪ್ ಸಿಂಹ ಅವರಿಗೂ ಆಪ್ತ ಆತನ ತಂದೆ ಪೊನ್ನಪ್ಪ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರು. ಜತೆಗೆ ಶಾಸಕ ಬೋಪಯ್ಯ ಅವರ ಆಪ್ತರಾಗಿದ್ದಾರೆ. ನಕಲಿ ಖಾತೆ ತೆರೆದು ಸಮಾಜದ ಶಾಂತಿ ಹದಗೆಡಿಸಿದ ದಿವಿನ್ ಪೂವಯ್ಯ ವಿರುದ್ಧ ಇದುವರೆಗೂ ಎಫ್‌ಐಆರ್ ಏತಕ್ಕೆ ಹಾಕಿಲ್ಲ. ಈತ ಸ್ವಯಂಪ್ರೇರಿತನಾಗಿ ಮಾಡಿಲ್ಲ. ಇದರ ಹಿಂದೆ ಬಿಜೆಪಿ ನಾಯಕರಿದ್ದಾರೆ. ಅಭಿವೃದ್ಧಿ ಹೆಸರಿನಲ್ಲಿ ಮತಯಾಚಿಸಲಿ. ಅದು ಬಿಟ್ಟು ಕೋಮು ಭಾವನೆ ಪ್ರಚೋದಿಸಿ ಶಾಂತಿ ಕದಡಿ ಮತ ಪಡೆಯುವುದು ಸರಿಯಲ್ಲ. ದೇಶಾದ್ಯಂತ ಬಿಜೆಪಿ ಈ ಕೆಲಸವನ್ನೇ ಮಾಡುತ್ತಿದೆ ಎಂದು ಕಿಡಿಕಾರಿದರು.

ಸುಳ್ಳಿನ ಸರದಾರ: ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲೇ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣ ಮಾಡಲು ತೀರ್ಮಾನ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಈ ಬಗ್ಗೆ ಸಿವಿಲ್ ಏವಿಯೇಷನ್ ಮಿನಿಸ್ಟ್ರಿ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಒಂದು ಬಾರಿ ಶಿಫಾರಸು ಮಾಡಿದ ನಂತರ ಮತ್ತೊಂದು ಬಾರಿ ಶಿಫಾರಸು ಮಾಡುವ ಅವಶ್ಯಕತೆ ಏನಿದೆ? ಎಂದು ಪ್ರಶ್ನಿಸಿದರು. ಗೋಷ್ಠಿಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ವಕ್ತಾರ ಕೆ.ಮಹೇಶ್, ಮುಖಂಡ ಬಸವಣ್ಣ ಉಪಸ್ಥಿತರಿದ್ದರು.

ಕೆಆರ್‌ಎಸ್ ಡ್ಯಾಂಗೆ ಹಾನಿಯಾದರೆ ಬಿಜೆಪಿ ಸರ್ಕಾರವೇ ಹೊಣೆ

ಮೈಸೂರು: ಕೆಆರ್‌ಎಸ್ ಬಳಿಯಲ್ಲಿ ಟ್ರಯಲ್ ಬ್ಲಾಸ್ಟ್ ಮಾಡಲು ಮುಂದಾಗಿರುವುದು ಖಂಡನೀಯ. ಕೆಆರ್‌ಎಸ್ ಸುತ್ತಮುತ್ತ ನಡೆಯುತ್ತಿರುವ ಗಣಿಗಾರಿಕೆಯಿಂದ ಈಗಾಗಲೇ ಕೆಆರ್‌ಎಸ್ ಡ್ಯಾಂಗೆ ಅಪಾಯವಿದೆ. ಡ್ಯಾಂ ಸಂಪೂರ್ಣ ಭರ್ತಿಯಾಗಿದ್ದು, ಭಾರೀ ಒತ್ತಡ ಇದೆ. ಟ್ರಯಲ್ ಬ್ಲಾಸ್ಟ್‌ನಿಂದ ಕೂದಲೆಳೆಯಷ್ಟು ಬಿರುಕು ಬಿಟ್ಟರೆ 24 ಗಂಟೆಯಲ್ಲಿ ಅದು 1 ಅಡಿಯಷ್ಟು ಬಿರುಕು ಬಿಡುತ್ತದೆ. ಬಂಡೆ ಮೇಲೆ ಈ ಅಣೆಕಟ್ಟು ನಿರ್ಮಾಣವಾಗಿದೆ. ಸುತ್ತಮುತ್ತ ಎಲ್ಲೇ ಬ್ಲಾಸ್ಟ್ ಮಾಡಿದರೂ ವೈಬ್ರೇಷನ್ ಆಗುತ್ತದೆ. ಹಣ ಸಂಪಾದನೆ ಒಂದೇ ಸರ್ಕಾರದ ಗುರಿಯಾ? ಎಂದು ಲಕ್ಷ್ಮಣ್ ಪ್ರಶ್ನೆ ಮಾಡಿದರು.

ಡ್ಯಾಂ ಸುರಕ್ಷತೆ ನೋಡುವುದು ಬೇಡವೇ? ಡ್ಯಾಂ ಒಡೆದು ಹಾಕುವ ಗುರಿಯನ್ನು ಬಿಜೆಪಿ ಹೊಂದಿದೆ. ಡ್ಯಾಂನಿಂದ 15–20 ಕಿ.ಮಿ ಸುತ್ತಮುತ್ತ ಸ್ಫೋಟ ಮಾಡಬಾರದು ಎಂದು ರಾಜ್ಯ ವಿಕೋಪ ನಿರ್ವಹಣಾ ಪ್ರಾಧಿಕಾರ ಆದೇಶ ಹೊರಡಿಸಿದೆ. ಹಾಗಿದ್ದರೂ ಸ್ಫೋಟಕ್ಕೆ ಸರ್ಕಾರ ಆಸ್ಪದ ಮಾಡಿಕೊಟ್ಟಿದೆ. ಏನಾದರೂ ಡ್ಯಾಂಗೆ ಹಾನಿಯಾದರೆ ಅದಕ್ಕೆ ಸರ್ಕಾರವೇ ಹೊಣೆ. ದೇಶದಲ್ಲಿ ಒಂದೇ ಒಂದು ಜಲಾಶಯ ನಿರ್ಮಾಣ ಮಾಡಲು ಬಿಜೆಪಿಯಿಂದ ಸಾಧ್ಯವಾಗಿಲ್ಲ. ಡ್ಯಾಂ ಉಳಿಸಲು ಕಾಂಗ್ರೆಸ್ ಹೋರಾಟ ನಡೆಸಲಿದೆ ಎಂದರು.

ಇಡಿ ಈಗ ಹೇಡಿ!: ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಯಾವುದೇ ಅಕ್ರಮವಾಗಿಲ್ಲ. ಹಣ ದುರುಪಯೋಗ ಆಗಿಲ್ಲ ಎಂದು ಇಡಿಯು 2015ರಲ್ಲಿ ವರದಿ ನೀಡಿದೆ. ಅದು ಇಡಿಯಲ್ಲ ಈಗ ಹೇಡಿಯಂತಾಗಿದೆ. ಯಾವುದೇ ಅಕ್ರಮವಾಗಿಲ್ಲ ಎಂದು ಇಡಿ ವರದಿ ನೀಡಿದರೂ ಪುನಃ ಪ್ರಕರಣವನ್ನು ರೀ ಓಪನ್ ಮಾಡಿರುವುದು ಸರಿಯಲ್ಲ ಎಂದರು.

ಯೂಸ್ ಅಂಡ್ ಥ್ರೋ!: ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಬಿಜೆಪಿಯವರು ಯೂಸ್ ಅಂಡ್ ಥ್ರೋ ಆಗಿ ಬಳಸಿದ್ದಾರೆ. ನಿಮ್ಮ ಮಗನಿಗೆ ಟಿಕೆಟ್ ದೊರೆಯುವುದಿಲ್ಲ. ಬಾಯಿ ಬಿಟ್ಟರೆ ಇಡಿ, ಐಟಿ ದಾಳಿ ನಿಶ್ಚಿತ. ಲಿಂಗಾಯತ ಸಮುದಾಯ ಇನ್ನಾದರೂ ಅರ್ಥ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಜು. 26– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತ ಘಟಕದ ಪ್ರಧಾನ ಕಾರ್ಯದರ್ಶಿಯನ್ನಾಗಿ ಸಜ್ಜದ್ ಅಹಮದ್ ಶರೀಫ್ ಅವರನ್ನು ನೇಮಕ ಮಾಡಲಾಗಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಮಂಗಳವಾರ	124.70 ಅಡಿ
ಒಳಹರಿವು	13055 ಕ್ಯೂಸೆಕ್
ಹೊರಹರಿವು	11586 ಕ್ಯೂಸೆಕ್

ಕಬಿನಿ ನೀರಿನ ಮಟ್ಟ




ಗರಿಷ್ಠ ಮಟ್ಟ	2284.00 ಅಡಿ
ಮಂಗಳವಾರ	2282.02 ಅಡಿ
ಒಳ ಹರಿವು	8867 ಕ್ಯೂಸೆಕ್
ಹೊರ ಹರಿವು	8063 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಮಂಗಳವಾರ	2856.33 ಅಡಿ
ಒಳ ಹರಿವು	2648 ಕ್ಯೂಸೆಕ್
ಹೊರ ಹರಿವು	2800 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಮಂಗಳವಾರ	2922 ಅಡಿ
ಒಳ ಹರಿವು	2280 ಕ್ಯೂಸೆಕ್
ಹೊರ ಹರಿವು	2225 ಕ್ಯೂಸೆಕ್

ನಕ್ಕರೆ ಅದೇ ಸ್ವರ್ಗ

ಅಪ್ಪ : ಮಗನೇ, ಯಾರಿಗೂ ಹೆದರಬೇಡ, ನೀನು ಸಿಂಹದ ಮರಿ ಕಣೋ...
ಮಗ : "ಹೌದಪ್ಪ, ಟೀಚರ್ ಕೂಡ ಹೇಳ್ತಿರ್ತಾರೆ,
'ನೀನು ಮನುಷ್ಯ ವಂಶದವನಲ್ಲ ಎಂದು..!"

ಮೈಸೂರು ಮಿತ್ರ
ಬುಧವಾರ, 27 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಮನುಷ್ಯ ಎಷ್ಟರ ಮಟ್ಟಿಗೆ ಇತರರ ಒಳ್ಳೆಯದಕ್ಕೆ ದುಡಿಯುತ್ತಾನೋ ಅಷ್ಟರ ಮಟ್ಟಿಗೆ ಅವನು ದೊಡ್ಡವನಾಗುತ್ತಾನೆ.

–ಮಹಾತ್ಮ ಗಾಂಧೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತಟಸ್ಥನಾದವನಿಗೆ ತಂಟೆ ಏನು?

ನಿಮ್ಮ ಪತ್ರಗಳು

ಮರೆಯಲಾಗದ ಕಾರ್ಗಿಲ್ ಯುದ್ಧ

ಮಾನ್ಯರೆ,

ಜುಲೈ 26 ಭಾರತೀಯರೆಲ್ಲರೂ ಹೆಮ್ಮೆ ಪಡುವ ದಿನ. 23 ವರ್ಷಗಳ ಹಿಂದೆ, ಅಂದರೆ 1999ರಲ್ಲಿ ಪಾಕಿಸ್ತಾನದ ಸೇನೆ ಕುತಂತ್ರದಿಂದ ಲೇಹ್ ಹೆದ್ದಾರಿಯವರೆಗೆ ಆಕ್ರಮಿಸಿಕೊಂಡಿದ್ದ ಕಾರ್ಗಿಲ್‌ನ ಪ್ರದೇಶಗಳನ್ನು ಭಾರತೀಯ ಯೋಧರು ಶೌರ್ಯ, ಪರಾಕ್ರಮ, ತ್ಯಾಗ–ಬಲಿದಾನದಿಂದ ಮರಳಿ ವಶಕ್ಕೆ ಪಡೆದರು. ಪಾಕ್ ಸೇನೆಯನ್ನು ಬಗ್ಗುಬಡಿದು ಹಿಮ್ಮೆಟ್ಟಿಸುವಲ್ಲಿ ಭಾರತೀಯ ಸೇನೆ ಯಶಸ್ವಿಯಾಯಿತು. ಈ ಕಾರ್ಗಿಲ್ ಯುದ್ಧದಲ್ಲಿ ಸೇನೆಯ ಅಧಿಕಾರಿಗಳು ಸೇರಿದಂತೆ 527 ಮಂದಿ ಭಾರತೀಯ ಯೋಧರು ಹುತಾತ್ಮರಾದರು. ಈ ಕಾರ್ಯಾಚರಣೆಗೆ 'ಆಪರೇಷನ್ ವಿಜಯ್' ಎಂದು ಹೆಸರಿಡಲಾಗಿತ್ತು. ಹುತಾತ್ಮರಾಗಿರುವ ಯೋಧರು ಇಂದು ನಮಗೆ ಪ್ರೇರಣೆಯಾಗಿದ್ದಾರೆ. ಯೋಧರ ತ್ಯಾಗ ಮತ್ತು ಶೌರ್ಯವನ್ನು ದೇಶವು ಸ್ಮರಿಸುತ್ತದೆ. ಸಮರ್ಪಣಾ ಭಾವದಿಂದ ಮತ್ತು ಪರಾಕ್ರಮದಿಂದ ನಮ್ಮ ದೇಶವನ್ನು ರಕ್ಷಿಸುವ ಸಂದರ್ಭದಲ್ಲಿ ಹುತಾತ್ಮರಾದ ಯೋಧರನ್ನು ಭಾರತೀಯರು ಎಂದೆಂದಿಗೂ ಮರೆಯುವುದಿಲ್ಲ. ನಮ್ಮ ತ್ರಿವರ್ಣ ಧ್ವಜದ ಗೌರವ ಮತ್ತು ಘನತೆಯನ್ನು ಎತ್ತಿ ಹಿಡಿಯಲು ತಮ್ಮ ಜೀವವನ್ನೇ ಪಣಕ್ಕಿಟ್ಟು ತ್ಯಾಗ ಮಾಡಿದ ಪ್ರತಿಯೊಬ್ಬ ಯೋಧರಿಗೆ ದೇಶದ ಭದ್ರತೆಗಾಗಿ ಯೋಧರ ಮತ್ತು ಅವರ ಕುಟುಂಬದ ತ್ಯಾಗವನ್ನು ನಾವು ಸದಾ ಸ್ಮರಿಸಿಕೊಳ್ಳಬೇಕು. ಭಾರತದ ಇತಿಹಾಸ ಪುಟದಲ್ಲಿ ಎಂದೂ ಮರೆಯಲಾಗದ ಘಟನೆ ಕಾರ್ಗಿಲ್ ಯುದ್ಧ, ಭಾರತೀಯ ಯೋಧರು ವಿಜಯ ಪತಾಕೆಯನ್ನು ಹಾರಿಸಿದ ಜುಲೈ 26ರನ್ನು ಪ್ರತಿ ವರ್ಷ ತ್ಯಾಗ ಬಲಿದಾನ ಮಾಡಿದ ಯೋಧರನ್ನು ಸ್ಮರಿಸಿಕೊಂಡು 23 ವರ್ಷಗಳಿಂದ ಬರುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

–ಪರಶಿವಮೂರ್ತಿ ಎನ್.ಪಿ, ಶಿಕ್ಷಕರು, ನಂಜೀಪುರ, ಸರಗೂರು ತಾ.

ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಸೂಕ್ತ ಸೌಲಭ್ಯ ಕಲ್ಪಿಸಿ!

ಮಾನ್ಯರೆ,

ರಾಜ್ಯದ ಬಹುತೇಕ ಕಡೆ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ರೋಗಿಗಳಿಗೆ ಅನುಕೂಲವಾಗುವಂತೆ ಹಣ್ಣು–ಹಂಪಲುಗಳ ಮಾರಾಟ ಮಳಿಗೆ ಹಾಗೂ ಸೂಕ್ತ ಕ್ಯಾಂಟೀನ್ ವ್ಯವಸ್ಥೆ ಇಲ್ಲದಿರುವುದರಿಂದ ರೋಗಿಗಳಿಗೆ ದಿನನಿತ್ಯ ತುಂಬಾ ತೊಂದರೆಯಾಗುತ್ತಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿರುವ ರೋಗಿಗಳು ಹಾಗೂ ಅವರ ಸಂಬಂಧಿಕರು ಆಸ್ಪತ್ರೆಯ ಆವರಣದಲ್ಲಿನ ಹಣ್ಣು ಹಂಪಲುಗಳ ಲಭ್ಯತೆಯ ಕೊರತೆಯಿಂದ ದೂರದ ಸ್ಥಳಗಳಿಗೆ ಹೋಗಿ ದುಬಾರಿ ಬೆಲೆ ತೆತ್ತು ಹಣ್ಣು ಹಂಪಲುಗಳನ್ನು ಕೊಂಡುಕೊಳ್ಳಬೇಕಾದ ಪರಿಸ್ಥಿತಿ ರಾಜ್ಯದ ಹಲವೆಡೆ ಇದೆ. ಇದು ತಪ್ಪಬೇಕು. ಸರ್ಕಾರ ಹಾಪ್‌ಕಾಮ್ಸ್‌ಗಳ ಮೂಲಕ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಹಣ್ಣು ಹಂಪಲುಗಳ ಮಾರಾಟ ವ್ಯವಸ್ಥೆ ಮಾಡಬೇಕಿದೆ. ಇದರ ಜೊತೆಗೆ ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಆಹಾರ ವ್ಯವಸ್ಥೆಯನ್ನು ಕೂಡ ಆಸ್ಪತ್ರೆಯ ಆವರಣದಲ್ಲಿ ರೋಗಿಗಳಿಗೆ ಒದಗಿಸಿದರೆ ದಿನನಿತ್ಯ ಸಾವಿರಾರು ಮಂದಿಗೆ ಇದರಿಂದ ಪ್ರಯೋಜನವಾದೀತು. ಸರ್ಕಾರ ಈ ಬಗ್ಗೆ ದೃಢ ನಿರ್ಧಾರವನ್ನು ತುರ್ತಾಗಿ ಕೈಗೊಳ್ಳಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ನಮ್ಮ ಕಸವನ್ನು ಹಾಕಿಸಿಕೊಳ್ಳಿ

ಮಾನ್ಯರೆ,

ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿ ಎರಡು ವಿದ್ಯಾರ್ಥಿ ನಿಲಯಗಳಿವೆ. ಪ್ರತಿನಿತ್ಯ ಬಳಸುವ ಹಸಿಕಸ ಮತ್ತು ಒಣಕಸ ಸುರಿಯಲು ತುಂಬಾ ಸಮಸ್ಯೆಯಾಗುತ್ತಿದೆ. ಇಷ್ಟು ದಿನ ನಮ್ಮ ವಿದ್ಯಾರ್ಥಿನಿಲಯದ ಮೈದಾನದಲ್ಲಿಯೇ ಕಸಕ್ಕೆ ಬೆಂಕಿ ಹಾಕುತ್ತಿದ್ದೆವು. ಆದರೆ ಈಗ ವಿದ್ಯಾರ್ಥಿನಿಲಯದ ಸುತ್ತ –ಮುತ್ತಲು ಹಲವು ಮನೆಗಳಿದ್ದು ಪರಿಸರ ಮಾಲಿನ್ಯವಾಗುತ್ತಿದೆ ಮತ್ತು ಮಳೆಗಾಲ ಇರುವುದರಿಂದ ಸೊಳ್ಳೆಗಳು ಹೆಚ್ಚುತ್ತಿವೆ. ಈಗಾಗಲೇ ಮೈಸೂರು ಮಹಾನಗರ ಪಾಲಿಕೆಯವರಿಗೆ ವಿಷಯವನ್ನು ತಿಳಿಸಿದ್ದೇವೆ. ಆದರೆ ಅವರು ಇನ್ನು ನಮ್ಮ ಮಾತಿಗೆ ಸ್ಪಂದಿಸುತ್ತಿಲ್ಲ. ಹಾಗಾಗಿ ವಿದ್ಯಾರ್ಥಿ ನಿಲಯದ ಮುಂಭಾಗ ಬಂದು ಕಸವನ್ನು ಹಾಕಿಸಿಕೊಳ್ಳಬೇಕೆಂದು ಮನವಿ.

–ಮಹಾಂತೇಶ್.ಬಿ, ವಿದ್ಯಾರ್ಥಿನಿಲಯ, ಕುವೆಂಪುನಗರ

ಜನಸಂಖ್ಯಾ ನಿಯಂತ್ರಣಕ್ಕೆ ಕಠಿಣ ಕಾಯ್ದೆ ಅಗತ್ಯ

ಮಾನ್ಯರೆ,

ವಿಶ್ವಸಂಸ್ಥೆಯು ಬಿಡುಗಡೆ ಮಾಡಿದ 2022 ಪಾಪ್ಯುಲೇಷನ್ ಪ್ರಾಸ್ಪೆಕ್ಟ್ ವರದಿಯ ಪ್ರಕಾರ 2023ರಲ್ಲಿ ಭಾರತದ ಜನಸಂಖ್ಯೆ ಚೀನಾವನ್ನು ಮೀರಿಸಲಿದೆ ಎಂದು ಅಂದಾಜಿಸಲಾಗಿದೆ. ಈ ವರದಿಯ ಪ್ರಕಾರ 2023ರ ಹೊತ್ತಿಗೆ ಭಾರತದ ಜನಸಂಖ್ಯೆ 142.9 ಕೋಟಿ ಹಾಗೂ ಚೀನಾ 142.6ಕೋಟಿ ಆಗಿ ಭಾರತ ಮೊದಲ ಸ್ಥಾನಕ್ಕೆ ಹೋಗುತ್ತದೆ. ಭಾರತವು ಜನಸಂಖ್ಯೆಯಲ್ಲಿ ಚೀನಾವನ್ನು ಹಿಂದಿಕ್ಕಲು ಭಾರತದ ಜನಸಂಖ್ಯೆಯಲ್ಲಿನ ಏರಿಕೆಗಿಂತ ಚೀನಾದಲ್ಲಿ ಜನಸಂಖ್ಯೆ ಗಣನೀಯವಾಗಿ ಇಳಿಕೆಯಾಗಿರುವುದು ಕಾರಣ. ಒಂದು ದೇಶ ಅಭಿವೃದ್ಧಿ, ಆರ್ಥಿಕತೆ, ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರಬೇಕೇ ಹೊರತು ಜನಸಂಖ್ಯೆಯಲ್ಲಲ್ಲ. ಜನಸಂಖ್ಯೆ ಹೆಚ್ಚಳವು ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಆದ್ದರಿಂದ ಭಾರತ ದೇಶಕ್ಕೆ ಜನಸಂಖ್ಯಾ ನಿಯಂತ್ರಣ ಕಾಯ್ದೆ ಅತ್ಯಗತ್ಯವಾಗಿದೆ.

– ಭರತ್‌ಕುಮಾರ್ ಕೆ., ಮೈಸೂರು.

ವಿಜಯನಗರ 4ನೇ ಹಂತದ ಬೀದಿದೀಪಗಳನ್ನು ಸರಿಪಡಿಸಿ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಕೆಲವು ಕಡೆ ಬೀದಿದೀಪಗಳು ಕೆಟ್ಟು ಹೋಗಿದ್ದು, ಮೂರು ತಿಂಗಳಿಂದ ಬೀದಿದೀಪಗಳೇ ಉರಿಯುತ್ತಿಲ್ಲ. ಕೆಲವು ಕಡೆ ಎಲ್‌ಇಡಿ ದೀಪಗಳನ್ನು ಹಾಕಿದ್ದಾರೆ. ಅವುಗಳು ಕೂಡ ಕೆಟ್ಟು ಹೋಗಿವೆ. ಕೆಲವು ಎಲ್‌ಇಡಿ ದೀಪಗಳನ್ನು ಬಿಚ್ಚಿಕೊಂಡು ಹೋಗಿದ್ದಾರೆ. ಮತ್ತೆ ಹಾಕಿಲ್ಲ. ಬೀದಿದೀಪಗಳು ಹೋದರೆ ನಿವಾಸಿಗಳು ಪ್ರಾಧಿಕಾರದ ನೋಂದಣಿ ಪುಸ್ತಕದಲ್ಲಿ ದೂರು ದಾಖಲಿಸಬೇಕೆಂಬುದು ಅರ್ಥಹೀನವಾದ ಸೂಚನೆ.

ಪ್ರಾಧಿಕಾರದಲ್ಲಿ ಅದಕ್ಕಾಗಿಯೇ ಅಧಿಕಾರಿಗಳು, ಸಿಬ್ಬಂದಿ ಇಲ್ಲವೆ. ಪ್ರತಿ ಬಡಾವಣೆಯಲ್ಲಿ ಆಗಾಗ್ಗೆ ಪರಿಶೀಲಿಸಿ ಕೆಟ್ಟು ಹೋಗಿರುವ ಬೀದಿದೀಪ ಹಾಕಲು ಸಾಧ್ಯವಿಲ್ಲವೆ. ಈ ಬಗ್ಗೆ ಆಯುಕ್ತರು ಕಟ್ಟುನಿಟ್ಟಿನ ಆದೇಶ ನೀಡಬೇಕಾಗಿ ಮನವಿ ಮಾಡುತ್ತೇನೆ. ಈ ಬಡಾವಣೆಯ ರಸ್ತೆಗಳಲ್ಲಿ ಗಿಡಗಂಟಿಗಳು ಬೆಳೆದಿರುವ ಕಾರಣ ವಿಷಜಂತುಗಳು ಜಾಸ್ತಿಯಾಗಿವೆ. ರಾತ್ರಿ ವೇಳೆಯಲ್ಲಿ ರಸ್ತೆಯಲ್ಲಿ ಸಂಚರಿಸಲು ಭಯಪಡಬೇಕಾಗಿದೆ. ಆದ ಕಾರಣ ಸಂಬಂಧಪಟ್ಟ ಅಧಿಕಾರಿಗಳು ಈ ಕೂಡಲೇ ಗಮನಹರಿಸಬೇಕೆಂದು ಮನವಿ.

–ಬಿ.ಜಿ. ರಂಗೇಗೌಡ, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಜಾನಶ್ರುತಿ ಮತ್ತು ರೈಕ್ವ

ಛಾಂದೋಗ್ಯೋಪನಿಷತ್ತು ಕಥೆಗಳ ಕಣಜ. ಕಥೆಗಳ ಉದ್ದೇಶ ಆಧ್ಯಾತ್ಮಿಕ ವಿಷಯಗಳ ಪ್ರತಿಪಾದನೆಗೆ ಚೌಕಟ್ಟನ್ನು ಒದಗಿಸುವುದು. ಶ್ರೋತೃಗಳಿಗೆ ಆಸಕ್ತಿಯನ್ನುಂಟು ಮಾಡಿ ತತ್ತ್ವಾಭಿಮುಖರನ್ನಾಗಿ ಮಾಡುವುದಕ್ಕಾಗಿ ಕಥೆ. ಇಂತಹ ಕಥೆಗಳನ್ನು ಶ್ರೀಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ಆಖ್ಯಾಯಿಕಾ ಎಂದು ಕರೆದಿದ್ದಾರೆ. ಜಾನಶ್ರುತಿ–ರೈಕ್ವರ ಆಖ್ಯಾಯಿಕೆಯ ಭಾಷ್ಯದಲ್ಲಿ ಅವರು ಹೀಗೆ ಹೇಳಿದ್ದಾರೆ –

"ಸುಖಾವ ಬೋಧಾರ್ಥಾ ಆಖ್ಯಾಯಿಕಾ,
ವಿದ್ಯಾದಾನ್‌ಗ್ರಹಣವಿಧಿ ಪ್ರದರ್ಶನಾಥಾ ಚ।
ಶ್ರದ್ಧಾನ್ನದಾನಾನುದ್ಧತತ್ವಾದೀನಾಂ ಚ ವಿದ್ಯಾಪ್ರಾಪ್ತಿಸಾಧನತ್ವಂ
ಪ್ರದರ್ಶ್ಯತೇ ಆಖ್ಯಾಯಿಕಯಾ"

(ಆಖ್ಯಾಯಿಕೆಯನ್ನು ಉಪನಿಷತ್ತು ಹೇಳಿರುವುದು ವಿಷಯವು ಸುಲಭವಾಗಿ ತಿಳಿಯಲೆಂಬುದಕ್ಕಾಗಿ ಮತ್ತು ವಿದ್ಯೆಯನ್ನು ಇತರರಿಗೆ ಉಪದೇಶ ಮಾಡುವ ಹಾಗೂ ಸ್ವೀಕರಿಸುವ ಕ್ರಮವನ್ನು ತಿಳಿಸುವುದಕ್ಕಾಗಿ. ಶ್ರದ್ಧೆ, ಅನ್ನದಾನ, ಉದ್ಧಟತನವಿಲ್ಲದಿರುವುದು ಮುಂತಾದ ಗುಣಗಳು ವಿದ್ಯೆಯನ್ನು ಪಡೆಯಲು ಸಾಧನಗಳು ಎಂಬುದನ್ನೂ ಈ ಆಖ್ಯಾಯಿಕೆ ತಿಳಿಸುತ್ತದೆ) ಛಾಂದೋಗ್ಯೋಪನಿಷತ್ತಿನ ನಾಲ್ಕನೆಯ ಅಧ್ಯಾಯದಲ್ಲಿ ಬರುವುದು ಜಾನಶ್ರುತಿ–ರೈಕ್ವರ ಕಥೆ.

ಜಾನಶ್ರುತಿ ಇವನು ಒಂದು ದೇಶದ ದೊರೆ. ತುಂಬ ತಿಳಿದಿದ್ದವನೂ ಮತ್ತು ವಿನಯವಂತನೂ ಆಗಿದ್ದ ರಾಜ. ಅಷ್ಟೇ ಅಲ್ಲ, ದಾನಶೀಲ. ಅವನನ್ನು ಶ್ರದ್ಧಾದೇಯ ಎಂದು ಕರೆಯುತ್ತಿದ್ದರು. ಏಕೆಂದರೆ ಅವನು ಏನನ್ನು ಕೊಡಬೇಕಾದರೂ ಶ್ರದ್ಧೆಯಿಂದ ಕೊಡುತ್ತಿದ್ದ. ಬೇಡಿದವರಿಗೆ ನಾಚಿಕೆಯಾಗದಂತೆ ಗೌರವಪೂರ್ವಕವಾಗಿ ದಾನವನ್ನು ನೀಡುತ್ತಿದ್ದ. ಅವನನ್ನು ಪ್ರಜೆಗಳು ಬಹುಪಾಕ್ಯ ಎಂದು ಕರೆಯುತ್ತಿದ್ದರು. ಏಕೆಂದರೆ ಅವನ ಅರಮನೆಯ ಅಡುಗೆ ಮನೆಯಲ್ಲಿ ಒಲೆ ಸತತವಾಗಿ ಉರಿಯುತ್ತಿತ್ತು. ಬರುವ ಅತಿಥಿಗಳಿಗಾಗಿ ಅಧಿಕವಾಗಿ ಅಡುಗೆಯನ್ನು ಜಾನಶ್ರುತಿ ನಿತ್ಯವೂ ಮಾಡಿಸುತ್ತಿದ್ದ. ಬಂದವರು ಯಥೇಚ್ಛವಾಗಿ ಊಟ ಮಾಡಬಹುದಾಗಿತ್ತು. ಅಷ್ಟೇ ಅಲ್ಲ. ಅನೇಕ ನಗರಗಳಲ್ಲಿ ಬಂದು ಹೋಗುವ ಯಾತ್ರಿಕರಿಗಾಗಿ ನಿವಾಸಗಳನ್ನೂ ಜಾನಶ್ರುತಿಯು ಕಟ್ಟಿಸಿದ್ದನು. ಅಲ್ಲೂ ಜನರು ಯಾವಾಗ ಬೇಕಾದರೂ ಊಟವನ್ನು ಮಾಡಬಹುದಾಗಿತ್ತು. ಹೀಗೆ ಅವನು ಬಹುದಾಯೀ ಎನ್ನಿಸಿಕೊಂಡಿದ್ದನು.

ಒಂದು ಸಲ ಬೇಸಿಗೆ ಕಾಲ ಬಂದಾಗ ಆ ಜಾನಶ್ರುತಿ ಮಹಾರಾಜನು ರಾತ್ರಿಯ ವೇಳೆ ಅರಮನೆಯ ವಲಭಿ (balcony) ಯಲ್ಲಿ ಸುಖಾಸೀನನಾಗಿ ಕುಳಿತಿದ್ದನು. ಗಾಳಿ ಮೆಲ್ಲಗೆ ಬೀಸುತ್ತಿತ್ತು. ಜಾನಶ್ರುತಿ ತನ್ನ ವೈಭವದ ಬಗೆಗೆ ಚಿಂತಿಸುತ್ತಿದ್ದನು. "ನಾನಿಷ್ಟು ದಾನ ಮಾಡುತ್ತಿದ್ದೇನೆ. ಇಷ್ಟು ಜನ ಹಸಿದವರು ನನ್ನ ಅನ್ನವನ್ನು ತಿಂದು ನನ್ನ ಕೀರ್ತಿಯನ್ನು ಲೋಕದಲ್ಲೆಲ್ಲ ಹರಡುತ್ತಿದ್ದಾರೆ. ಜ್ಞಾನದಲ್ಲೂ ನಾನು ಹಿಂದಿಲ್ಲ. ಎಲ್ಲ ಶಾಸ್ತ್ರಗಳನ್ನೂ ಕಲಿತಿದ್ದೇನೆ. ಪ್ರಾಣಿಗಳ ಮತ್ತು ಪಕ್ಷಿಗಳ ಭಾಷೆಯನ್ನೂ ತಿಳಿದುಕೊಂಡಿದ್ದೇನೆ. ನನಗೆ ಯಾವ ವ್ಯಸನಗಳೂ ಇಲ್ಲ. ನನ್ನ ಪ್ರಜೆಗಳು ಸುಖದಿಂದ ಬಾಳುತ್ತಿದ್ದಾರೆ, ನನ್ನನ್ನು ಹೊಗಳುತ್ತಿದ್ದಾರೆ" ಎಂದು ಭಾವಿಸಿಕೊಳ್ಳುತ್ತಾ ಆನಂದದಿಂದ ಇದ್ದನು. ಅಷ್ಟು ಹೊತ್ತಿಗೆ ಹಂಸ ಪಕ್ಷಿಗಳು ಆಕಾಶದಲ್ಲಿ ಹಾರಾಡುತ್ತಿದ್ದವು. ಅವುಗಳಲ್ಲಿ ಒಂದು ಹಂಸವು ಇನ್ನೊಂದು ಹಂಸಕ್ಕೆ ಹೇಳಿತು "ಭಲ್ಲಾಕ್ಷ, ಭಲ್ಲಾಕ್ಷ! ಜಾನಶ್ರುತಿ ಮಹಾರಾಜನ ಕೀರ್ತಿಜ್ಯೋತಿಯು ಸ್ವರ್ಗಲೋಕದವರೆಗೂ ಹರಡಿದೆ. ಅದನ್ನು ಸೋಂಕುವುದು ಬೇಡ. ಅದು ನಿನ್ನನ್ನು ಸುಡಬಾರದು. ಎಚ್ಚರದಿಂದಿರು. "ಈ ಮಾತನ್ನು ಕೇಳಿದ ಭಲ್ಲಾಕ್ಷ ಎಂಬ ಹಂಸವು ಹೇಳಿತು– "ಹೇ ಕಮ್ವರ, ಈ ರಾಜನ ಬಗೆಗೆ ಏನು ಹೇಳುತ್ತಿರುವೆ? ಇವನೇನು ಜ್ಞಾನಿಯೇ? ಆ ಗಾಡಿಯನ್ನು ಓಡಿಸುವ ರೈಕ್ವನಂತೆ ಇವನು ಎಂಬಂತೆ ಮಾತನಾಡುತ್ತಿರುವೆಯಲ್ಲ. ಅವನ ಮುಂದೆ ಈ ದೊರೆಯ ಜ್ಞಾನ ಏನೂ ಅಲ್ಲ."

ಭಲ್ಲಾಕ್ಷ ಹಂಸದ ಈ ಮಾತುಗಳನ್ನು ಕೇಳಿ ಆಶ್ಚರ್ಯಪಟ್ಟ ಇನ್ನೊಂದು ಹಂಸವು "ಆ ಗಾಡಿಯನ್ನು ಎಳೆಯುವ ರೈಕ್ವನು ಯಾವನು?" ಎಂದು ಕೇಳಿತು. "ಪಗಡೆಯ ಆಟದಲ್ಲಿ ಗೆದ್ದವನ ಬಳಿಗೆ ಕೆಳಗಿನವರು (ಎಂದರೆ ಆಟದಲ್ಲಿ ಸೋತವರು) ಹೇಗೆ ಬಂದು ಸೇರುವರೋ ಹಾಗೆ ಜ್ಞಾನಿಯಾದ ರೈಕ್ವನ ಬಳಿ ಜಿಜ್ಞಾಸುಗಳು ಬಂದು ಸೇರುತ್ತಾರೆ. ಅವನೇ ಶ್ರೇಷ್ಠ" ಎಂದು ಭಲ್ಲಾಕ್ಷವು ಹೇಳಿತು.

ಹಂಸಗಳ ಸಂವಾದವನ್ನು ಜಾನಶ್ರುತಿ ಮಹಾರಾಜನು ಕೇಳಿಸಿಕೊಂಡನು. ಮಾರನೆಯ ದಿನ ಬೆಳಗ್ಗೆ ಎದ್ದವನೇ ತನ್ನ ಸಾರಥಿಯನ್ನು ಕರೆದು ಹೇಳಿದನು –ಎಲೈ ಸಾರಥಿ, ಬಂಡಿಯನ್ನು ಎಳೆದು ಜೀವಿಸುವ ರೈಕ್ವನ ವಿಷಯವೇನೆಂದು ತಿಳಿದಿದ್ದರೆ ಹೇಳು – ಎಂದನು.

"ಅವನಾರು? ಅವನು ಹೇಗಿದ್ದಾನೆ" ಎಂದು ಸಾರಥಿ ಕೇಳಿದನು.

"ಪಗಡೆಯ ಆಟದಲ್ಲಿ ಗೆದ್ದವನನ್ನು ಇತರರು ಅನುಸರಿಸುವಂತೆ ರೈಕ್ವನನ್ನು ಜ್ಞಾನಾಪೇಕ್ಷಿಗಳು ಆಶ್ರಯಿಸುತ್ತಾರಂತೆ. ಅವನನ್ನು ಹುಡುಕಿ ಅವನೆಲ್ಲಿರುವನೆಂದು ನನಗೆ ತಿಳಿಸು" ಎಂದು ಜಾನಶ್ರುತಿ ಮಹಾರಾಜನು ಸಾರಥಿಗೆ ಆದೇಶಿಸಿದನು.

ಸಾರಥಿ ಹಲವು ಗ್ರಾಮಗಳಿಗೆ ಹೋಗಿ ಹುಡುಕಿ ನಿರಾಶನಾಗಿ 'ಆ ರೈಕ್ವನೆಂಬವನು ಎಲ್ಲೂ ಕಾಣಲಿಲ್ಲ' ಎಂದು ರಾಜನಿಗೆ ಹೇಳಿದನು. 'ಅವನೊಬ್ಬ ಬ್ರಹ್ಮಜ್ಞಾನಿ. ಜ್ಞಾನಿಗಳು ಏಕಾಂತದಲ್ಲಿರಬಹುದು. ಅವನನ್ನು ನೀನು ಹುಡುಕಿಕೊಂಡು ಬರಲೇಬೇಕು" ಎಂದು ಜಾನಶ್ರುತಿ ಆಜ್ಞೆ ಮಾಡಿದನು. ಆಗ ಸಾರಥಿ ಎಚ್ಚರಿಕೆಯಿಂದ ಹುಡುಕಲು ಆರಂಭಿಸಿದನು. ಒಂದು ಹಳ್ಳಿಯಲ್ಲಿ ವಿಚಾರಿಸಿದಾಗ ರೈಕ್ವನು ಅಲ್ಲೇ ಇರುವುದಾಗಿ ತಿಳಿದುಬಂದಿತು. ಹುಡುಕಿಕೊಂಡು ಹೋದರೆ ಒಂದು ಬಂಡಿಯ ಕೆಳಗೆ ಮಲಗಿ ಕಜ್ಜಿಯನ್ನು ಕೆರೆದುಕೊಳ್ಳುತ್ತಿದ್ದ ಮನುಷ್ಯ ಕಾಣಿಸಿಕೊಂಡನು. "ಬಂಡಿಯನ್ನು ಎಳೆಯುವ ರೈಕ್ವನು ನೀನಲ್ಲವೇ?" ಎಂದು ಸಾರಥಿ ಕೇಳಿದಾಗ 'ನಾನೇ ಅವನು' ಎಂದನು.

ಸಾರಥಿಯು ಮಹಾನಂದದಿಂದ ಹಿಂದಿರುಗಿ ರಾಜನಿಗೆ ಎಲ್ಲಾ ಮಾಹಿತಿಯನ್ನು ಕೊಟ್ಟನು. ಸಂತುಷ್ಟನಾದ ಮಹಾರಾಜನು ಆರು ನೂರು ಹಸುಗಳನ್ನೂ ಒಂದು ಹೇಸರಗತ್ತೆ ಎಳೆಯುವ ರಥವನ್ನೂ ಚಿನ್ನದ ಹಾರವನ್ನೂ ತೆಗೆದುಕೊಂಡು ರೈಕ್ವನಿಗೆ ಹಳ್ಳಿಗೆ ಹೋದನು. ರೈಕ್ವನನ್ನು ಅಲ್ಲಿ ಕಂಡು 'ಎಲೈ ಭಗವತ್‌ಸ್ವರೂಪನೆ, ಇವೆಲ್ಲವನ್ನೂ ನಿನಗಾಗಿ ತಂದಿರುವೆ. ಇವುಗಳನ್ನು ಸ್ವೀಕರಿಸಿ ನೀನು ಮಾಡುವ ದೇವೋಪಾಸನೆಯನ್ನು ನನಗೆ ತಿಳಿಸಿಕೊಡು' ಎಂದನು.

ರೈಕ್ವನು ರಾಜನ ಪ್ರಾರ್ಥನೆಯನ್ನು ತಿರಸ್ಕರಿಸಿದನು.

ರಾಜನು ಮತ್ತೆ ಒಂದು ಸಾವಿರ ಹಸುಗಳನ್ನು ಚಿನ್ನದ ಹಾರವನ್ನೂ ತನ್ನ ಮಗಳನ್ನೂ ಹೇಸರಗತ್ತೆಗಳ ರಥವನ್ನೂ ತೆಗೆದುಕೊಂಡು ಹೋಗಿ ಅರ್ಪಿಸಿ ತನಗೆ ಆತ್ಮಜ್ಞಾನವನ್ನು ನೀಡಬೇಕೆಂದು ಬೇಡಿಕೊಂಡನು. ಆ ಮೇಲೆ ರೈಕ್ವನು ರಾಜನ ಜ್ಞಾನಾಭಿಲಾಷೆಯನ್ನು ಅರಿತು ಅವನಿಗೆ ಆತ್ಮವಿದ್ಯೆಯನ್ನು ಉಪದೇಶಿಸಿದನು. ಅವನು ಅದನ್ನು ಸಂವರ್ಗ ವಿದ್ಯೆಯೆಂದು ಕರೆದನು. ಯಾವುದರಲ್ಲಿ ಎಲ್ಲವೂ ಕೊನೆಯನ್ನು ಕಾಣುವುವೋ ಅದು ಸಂವರ್ಗ. ವಾಯುವೇ ಸಂವರ್ಗ. ಅಗ್ನಿಯೂ ಸೂರ್ಯನೂ ಚಂದ್ರನೂ ಕೊನೆಗೆ ಸೇರಿ ಹೋಗುವುದು ವಾಯುವಿನಲ್ಲೇ. ನೀರೂ ಆವಿಯಾಗಿ ವಾಯುವಿನಲ್ಲೇ ಸೇರಿ ಹೋಗುವುದು. ಇದು ಅಧಿದೈವತ ಸಂವರ್ಗ.

ನಿದ್ದೆಯಲ್ಲಿ ಮಾತು, ಕಣ್ಣು, ಕಿವಿ, ಮನಸ್ಸು ಇವೆಲ್ಲ ಪ್ರಾಣದಲ್ಲಿ ಸೇರಿ ಹೋಗುತ್ತವೆ. ಆದ್ದರಿಂದ ಪ್ರಾಣವೇ ಸಂವರ್ಗ. ಇದನ್ನು ರೈಕ್ವನು ಜಾನಶ್ರುತಿ ಮಹಾರಾಜನಿಗೆ ತಿಳಿಸಿಕೊಟ್ಟನು.


ಕೃತಾರ್ಥನಾದ ಮಹಾರಾಜನು ಕೃತಜ್ಞತೆಯಿಂದ ರೈಕ್ವನಿಗೆ ಆ ಗ್ರಾಮವನ್ನೇ ಕೊಟ್ಟು ನಮಸ್ಕರಿಸಿದನು. ಅದಕ್ಕೆ ರೈಕ್ವ ಪರ್ಣ ಎಂಬ ಹೆಸರಾಯಿತು.

ಜಾನಶ್ರುತಿಯು ತಾನು ಮಹಾರಾಜನಾದರೂ, ರೈಕ್ವನು ಸಾಮಾನ್ಯ ಗಾಡಿಯನ್ನು ಹೊಡೆಯುವವನಾದರೂ ಅವನ ಬಳಿಗೆ ಹೋದಾಗ ವಿನಯದಿಂದ ಹೋದನು. ಉದ್ಧಟತನವನ್ನು ಮಾಡಲಿಲ್ಲ. ಸೇವಕರನ್ನೋ ಸೈನಿಕರನ್ನೋ ಕಳುಹಿಸಿ ರೈಕ್ವನನ್ನು ತನ್ನ ಬಳಿಗೆ ಕರೆಸಿಕೊಳ್ಳಲಿಲ್ಲ. ತಾನೇ ಅಲ್ಲಿಗೆ ತೆರಳಿದನು. ವಿದ್ಯೆಯು ಯಾರಿಗೆ ಬೇಕೋ ಅವರು ಗುರುವಿನ ಬಳಿಗೆ ತಾವೇ ಹೋಗಬೇಕು, ಸಾಮಾಜಿಕ ಅಂತಸ್ತುಗಳನ್ನು ಪರಿಗಣಿಸಿ ತಾವೇ ದೊಡ್ಡವರೆಂದು ಬೀಗಬಾರದು ಎಂಬ ನಿಯಮವನ್ನು ಅನುಸರಿಸಿದರು. ಇದು ಜ್ಞಾನಾಕಾಂಕ್ಷಿಗಳ ಮುಖ್ಯ ಲಕ್ಷಣ.

ವಿದ್ಯೆಯನು ಕಲಿವವಗೆ ವಿನಯವೇ ಮುಖ್ಯ
ಬೌದ್ಧತ್ಯವದು ಸಕಲ ವಿದ್ಯೆಗಳ ಶತ್ರು
ಪದ್ಧತಿಯನನುಸರಿಸಿ ಗುರುವಿನಾ ಸನ್ನಿಧಿಗೆ
ಸದ್ಯ ಹೋಗಲಿ ಶಿಷ್ಯ ನಾಗರಾಜ.

ಮೈಸೂರು ನಗರ ಪಾಲಿಕೆಗೆ ಬರ ಬೇಕಿರುವ ನೀರಿನ ಬಾಕಿ 221 ಕೋಟಿ: ಅದರಲ್ಲಿ ವಿವಿಧ ಇಲಾಖೆಗಳದ್ದೇ 55 ಕೋಟಿ

ಮೈಸೂರು, ಜು.26(ಜಿಎ)– ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರೋಬ್ಬರಿ 221 ಕೋಟಿ ರೂ. ನೀರಿನ ಶುಲ್ಕ ಬಾಕಿಯಿದ್ದು, ಅದರಲ್ಲಿ ವಿವಿಧ ಸರ್ಕಾರಿ ಇಲಾಖೆಯಿಂದಲೇ 55 ಕೋಟಿ ರೂ. ಬಾಕಿ ಬರಬೇಕಿದೆ.



ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಣಿಜ್ಯ ಸಂಪರ್ಕ–4254, ಗೃಹಬಳಕೆ–170581, ಜಿಲ್ಲಾ ಪಂಚಾಯತ್–4, ಕೈಗಾರಿಕಾ–313, ಇತರೆ– 7195 ಸೇರಿದಂತೆ 1.82.347 ನೀರಿನ ಸಂಪರ್ಕಗಳಿದ್ದು, ಇದರಿಂದ 2,21, 30,44,396 ರೂ. ಬಾಕಿ ಇದೆ.

ವಿವಿಧ ಸರ್ಕಾರಿ ಇಲಾಖೆಗಳಿಂದಲ್ಲೇ ಕೋಟ್ಯಾಂತರ ರೂ. ಬಾಕಿ ಬರಬೇಕಿದ್ದು, ಕೃಷಿ ಇಲಾಖೆ–20,984 ರೂ., ಎಟಿಐ–45,67,976 ರೂ., ಬ್ಯಾಂಕ್–4,83,884 ರೂ., ಚೆಸ್ಕಾಂ–2,53,16,816 ರೂ., ರಕ್ಷಣಾ– 2,79,646 ರೂ., ವಸ್ತು ಪ್ರದರ್ಶನ–6,25,803 ರೂ., ತೋಟಗಾರಿಕೆ–5,08,002 ರೂ., ರೈಲ್ವೆ–14,00,18,228 ರೂ., ಕಾರಾಗೃಹ–24,12,955 ರೂ., ಟೆಲಿಕಾಂ–4,86,532 ರೂ., ಪ್ರವಾಸೋದ್ಯಮ–1,21,213 ರೂ., ಆರೋಗ್ಯ–1,26,07,879 ರೂ., ಶಿಕ್ಷಣ–1,27,05,063 ರೂ., ಪೊಲೀಸ್–5,16,73,102 ರೂ., ಎಸ್‌ಪಿ ಪೊಲೀಸ್–1,14,40,277 ರೂ., ಕ್ರೀಡೆ– 1,15,866 ರೂ., ಸಮಾಜ ಕಲ್ಯಾಣ–2,10,383 ರೂ., ಸಣ್ಣ ಪ್ರಮಾಣದ ಉದ್ಯಮ–3,47,195 ರೂ., ಲೋಕೋಪಯೋಗಿ–15,62,360ರೂ., ಮೈಸೂರು ವಿವಿ–15,71, 392 ರೂ., ಮುಡಾ–2,55,985 ರೂ., ಕಾನೂನು–10,39,913 ರೂ., ಕೆಪಿಟಿಸಿಎಲ್–66,52,498 ರೂ., ಕೆಎಚ್‌ಬಿ–3,17,306 ರೂ., ಗ್ರಾಮ ಪಂಚಾಯಿತಿ–24,81,09,322 ರೂ., ಅಗ್ನಿಶಾಮಕದಳ–1,43,016ರೂ., ಅಬಕಾರಿ–2,66,137 ರೂ. ಸೇರಿದಂತೆ ವಾಣಿಜ್ಯ ತೆರಿಗೆ, ಮೀನುಗಾರಿಕೆ, ಕೆಎಸ್‌ಆರ್‌ಟಿಸಿ, ಕೆಎಂಎಫ್, ರೇಡಿಯೋ, ರೇಸ್‌ಕ್ಲಬ್, ಸ್ಕೌಟ್&ಗೈಡ್ಸ್, ಜಿಲ್ಲಾ ಪಂಚಾಯತ್, ಜಲ ಸಂಪನ್ಮೂಲ, ಎನ್‌ಸಿಸಿ, ವಿಮೆ, ಕೈಗಾರಿಕೆ, ಅರಣ್ಯ ಇಲಾಖೆ ಸೇರಿದಂತೆ 55,73,10,966 ರೂ. ಬಾಕಿ ಇದೆ.

ಕಠಿಣ ಕ್ರಮದ ಮೂಲಕ ಬಾಕಿ ವಸೂಲಿ



ಈ ಎಲ್ಲಾ ಇಲಾಖೆಗಳಿಂದ ಹಲವಾರು ವರ್ಷಗಳಿಂದ ನೀರಿನ ಶುಲ್ಕ ಬಾಕಿ ಇದ್ದು, ಈ ಬಾರಿ ಸಂಗ್ರಹಿಸಲು ಪಾಲಿಕೆ ಶತಾಯಗತಾಯ ಪ್ರಯತ್ನ ಮಾಡುತ್ತಿದ್ದು, ಅದರಂತೆ ಬಾಕಿ ಉಳಿಸಿಕೊಂಡಿರುವವರ ಮನೆ ಮತ್ತು ಇಲಾಖೆಗಳ ನೀರಿನ ಸಂಪರ್ಕವನ್ನು ಕಡಿತಗೊಳಿಸುವ ಮೂಲಕ ಕಠಿಣ ಕ್ರಮಕ್ಕೆ ಮುಂದಾಗಿದೆ. ನೀರಿನ ಬಾಕಿ ಪಾವತಿಯ ಬಗ್ಗೆ ನಿರಂತರವಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಅದರಂತೆ ಈಗಾಗಲೇ ಸೆಸ್ಕಾಂ–4 ಕೋಟಿ ರೂ., ರೈಲ್ವೆ ಇಲಾಖೆ–3 ಕೋಟಿ, ಪೊಲೀಸ್ ಇಲಾಖೆ–2 ಕೋಟಿ ರೂ. ಬಾಕಿ ಪಾವತಿ ಮಾಡಿದ್ದು, ಮುಂದಿನ ತಿಂಗಳೊಳಗೆ 16 ಕೋಟಿ ರೂ. ಸಂಗ್ರಹವಾಗಲಿದೆ ಎಂದು ಪಾಲಿಕೆ ಆಯುಕ್ತ ಲಕ್ಷ್ಮಿ ಕಾಂತ ರೆಡ್ಡಿ 'ಮೈಸೂರು ಮಿತ್ರ' ನಿಗೆ ತಿಳಿಸಿದರು.

ಕಳೆದ 20 ವರ್ಷಗಳಿಂದಲೂ ನಿರಂತರವಾಗಿ ಪಾವತಿ ಬಾಕಿ ಉಳಿದಿದ್ದು, ಶುಲ್ಕ ಪಾವತಿ ಮಾಡದ ಮನೆಗಳು ಮತ್ತು ಇಲಾಖೆಗಳಿಗೆ ನೀರಿನ ಸಂಪರ್ಕವನ್ನು ಕಡಿತಗೊಳಿಸುತ್ತಿರುವುದರಿಂದ ಎಚ್ಚೆತ್ತ ಸಾರ್ವಜನಿಕರು ಮತ್ತು ಇಲಾಖೆಗಳು ಸ್ವಯಂ ಪ್ರೇರಣೆಯಿಂದ ಬಾಕಿ ಪಾವತಿ ಮಾಡುತ್ತಿದ್ದಾರೆ ಎಂದು ತಿಳಿಸಿದರು.



"ಬಾಕಿ ಬರೋಬ್ಬರಿ 240 ಕೋಟಿ ರೂ. ಇತ್ತು ಆದರೆ ಈಗ ಅದು ಕಡಿಮೆ ಆಗುತ್ತಿದ್ದು, 220 ಕೋಟಿ ರೂ.ಗೆ ತಲುಪಿದೆ. ಅಕ್ಕ–ಪಕ್ಕದ ಮನೆಗಳ ನೀರಿನ ಸಂಪರ್ಕ ಕಡಿತಗೊಳಿಸಿದ ಹಿನ್ನೆಲೆ ಅವರೇ ಎಚ್ಚೆತ್ತು ಬಾಕಿ ಪಾವತಿ ಮಾಡುತ್ತಿದ್ದಾರೆ. ಈ ಕಾರ್ಯಾಚರಣೆ ನಿರಂತರವಾಗಿ ಮುಂದುವರೆಯಲಿದೆ.

–ಲಕ್ಷ್ಮಿಕಾಂತ ರೆಡ್ಡಿ, ಆಯುಕ್ತ, ಮೈಸೂರು ನಗರಪಾಲಿಕೆ

ನ್ಯಾಷನಲ್ ಹೆರಾಲ್ಡ್ ಪ್ರಕರಣ

6 ಗಂಟೆಗಳ ಕಾಲ ಸೋನಿಯಾ ವಿಚಾರಣೆ

ಮತ್ತೆ ಇಂದು ಹಾಜರಾಗಲು ಸೂಚನೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದ ಮನಿ ಲಾಂಡರಿಂಗ್ ಪ್ರಕರಣ ಸಂಬಂಧ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಮಂಗಳವಾರ ಸುಮಾರು 6 ಗಂಟೆಗಳ ಕಾಲ ವಿಚಾರಣೆಗೆ ಒಳಪಡಿಸಿದ ಜಾರಿ ನಿರ್ದೇಶನಾಲಯ ಬುಧವಾರ ಮತ್ತೆ ವಿಚಾರಣೆಗೆ ಹಾಜರಾಗುವಂತೆ ಕಾಂಗ್ರೆಸ್ ನಾಯಕಿಗೆ ಸೂಚಿಸಿದೆ. ಜುಲೈ 21ರಂದು ಇಡಿ ಎರಡು ಗಂಟೆಗಳ ಕಾಲ ಸೋನಿಯಾ ಅವರನ್ನು ಪ್ರಶ್ನಿಸಿತ್ತು. ಕೋವಿಡ್‌ನಿಂದ ಚೇತರಿಸಿಕೊಳ್ಳುತ್ತಿರುವ ಕಾರಣ ಅವರ ಕೋರಿಕೆಯ ಮೇರೆಗೆ ದಿನದ ವಿಚಾರಣೆಯನ್ನು ಕೊನೆಗೊಳಿಸಿತ್ತು. ಇಂದು ಮತ್ತೆ ಎರಡನೇ ಸುತ್ತಿನ ವಿಚಾರಣೆಗೆ ಹಾಜರಾದ ಸೋನಿಯಾ ಗಾಂಧಿ ಅವರನ್ನು 6 ಗಂಟೆಗಳ ಕಾಲ ವಿಚಾರಣೆ ನಡೆಸಿ, ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ನಾಳೆ ಮತ್ತೆ ವಿಚಾರಣೆಗೆ ಹಾಜರಾಗುವಂತೆ ಸೋನಿಯಾ ಗಾಂಧಿ ಅವರಿಗೆ ಸೂಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಮಂಗಳವಾರ ಸಂಜೆ 7 ಗಂಟೆಯವರೆಗೆ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದ್ದು, ನಂತರ ಅವರು ಇಡಿ ಕೇಂದ್ರ ಕಚೇರಿಯಿಂದ ತೆರಳಿದರು ಎಂದು ಅವರು ಹೇಳಿದ್ದಾರೆ. ಇಂದು ಬೆಳಗ್ಗೆ 11 ಗಂಟೆ ಸುಮಾರಿಗೆ ಪ್ರಿಯಾಂಕಾ ಗಾಂಧಿ ವಾದ್ರಾ ಹಾಗೂ ರಾಹುಲ್ ಗಾಂಧಿ ಅವರೊಂದಿಗೆ ಜಾರಿ ನಿರ್ದೇಶನಾಲಯ ಕಚೇರಿಗೆ ಸೋನಿಯಾ ಗಾಂಧಿ ಆಗಮಿಸಿದರು. ಸೋನಿಯಾ ಗಾಂಧಿ ತನಿಖೆ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ ಹಾಗೂ ಕಾಂಗ್ರೆಸ್ ಕೇಂದ್ರ ಕಚೇರಿ ಸುತ್ತಮುತ್ತ ಬಿಗಿ ಬಂದೋಬಸ್ತ್ ಒದಗಿಸಲಾಗಿತ್ತು.

ಸೋನಿಯಾಗಾಂಧಿ ಅವರ ವಿಚಾರಣೆ ನಿಲ್ಲುವವರೆಗೂ ಪ್ರತಿಭಟನೆ ನಿಲ್ಲಲ್ಲ



ಬೆಂಗಳೂರು: ನ್ಯಾಷನಲ್ ಹೆರಾಲ್ಡ್ ಹಗರಣಕ್ಕೆ ಸಂಬಂಧಿಸಿದಂತೆ ಇಂದು ಜಾರಿ ನಿರ್ದೇಶನಾಲಯ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ವಿಚಾರಣೆ ನಡೆಸುತ್ತಿದ್ದು ಇದನ್ನ ವಿರೋಧಿಸಿ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರು ಪ್ರತಿಭಟನೆಗಿಳಿದಿದ್ದಾರೆ.

ಇಂದು ಇಡಿಯಿಂದ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ವಿಚಾರಣೆ ವಿರೋಧಿಸಿ ಎಐಸಿಸಿ ಕಚೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದು ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇನ್ನು ರಾಜ್ಯದಲ್ಲೂ ಸಹ ಸೋನಿಯಾ ಗಾಂಧಿ ಪರ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರು ಮೌನ ಪ್ರತಿಭಟನೆ ನಡೆಸಿದರು. ಈ ಕುರಿತು ಮಾತನಾಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ಇಡಿ ವಿಚಾರಣೆ ನಡೆಸುವಷ್ಟು ಸಮಯ ಪ್ರತಿಭಟನೆ ಮಾಡ್ತೀವಿ. ಸೋನಿಯಾ ಗಾಂಧಿ ಅವರ ವಿಚಾರಣೆ ನಿಲ್ಲಿಸುವವರೆಗೂ ಪ್ರತಿಭಟನೆ ನಿಲ್ಲಿಸಲ್ಲ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತೇವೆ ಎಂದಿದ್ದಾರೆ.

ಈ ದೇಶದಲ್ಲಿ ಇಡಿ ಸಿಬಿಐ ದುರ್ಬಳಕೆ ನಡೆಯುತ್ತಿದೆ. ಸಾವಿರಾರು ವಿರೋಧ ಪಕ್ಷದ ನಾಯಕರ ಬಾಯಿ ಮುಚ್ಚಲು ಹೊರಟಿದ್ದಾರೆ. ಬಿಜೆಪಿಯವರ ಒಬ್ಬರ ಮೇಲೂ ಕ್ರಮ ಕೈಗೊಂಡಿಲ್ಲ. ಅವರ ಪಕ್ಷದ ಒಬ್ಬರನ್ನೂ ಅರೆಸ್ಟ್ ಮಾಡಿಲ್ಲ, ವಿಚಾರಣೆ ಸಹ ಮಾಡಿಲ್ಲ. 75 ವರ್ಷದ ಸ್ವಾತಂತ್ರ್ಯೋತ್ಸವ ತಂದು ಕೊಟ್ಟಿದ್ದು ಕಾಂಗ್ರೆಸ್ ಪಕ್ಷ ಸಂವಿಧಾನ ತಂದು ಕೊಟ್ಟಿದ್ದು ಕಾಂಗ್ರೆಸ್ ಪಕ್ಷ. ಪ್ರಜಾಪ್ರಭುತ್ವ ಕಾರಣದಿಂದ ನೀವು ಪಿಎಂ ಆಗಿದ್ದೀರಾ. ಕಟ್ಟಿದ ಸಂಸ್ಥೆಗಳನ್ನು ಒಡೆದು ಹಾಕುತ್ತಿದ್ದೀರಾ ಎಂದು ಕಿಡಿಕಾರಿದರು.

ಈಗ ಪ್ರತಿಭಟನೆ ಮಾಡ್ತಿರೋರು ಜೈಲಿಗೆ ಹೋಗಿ ಬಂದವರು ಎಂಬ ಸಿ.ಟಿ ರವಿ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಸಿಟಿ ರವಿ ವಿರುದ್ಧ ಡಿಕೆಶಿ ಏಕವಚನದಲ್ಲೇ ವಾಗ್ದಾಳಿ ನಡೆಸಿದರು. ಅವನು ಯಾವಾನಾದ್ರು, ಏನಾದರೂ ಮಾತಾಡಿಕೊಳ್ಳಲಿ. ಮಹಾತ್ಮ ಗಾಂಧೀಜಿ ಜೈಲಿಗೆ ಹೋಗವ್ರೆ, ಸರ್ದಾರ್ ವಲ್ಲಭಭಾಯಿ ಪಟೇಲ್ ಹೋಗವ್ರೆ, ನೆಹರು ಹೋಗವ್ರೆ. ನಾವು ಏನು ಮಂಚಕ್ಕಾಗಿ ಜೈಲಿಗೆ ಹೋಗಿದ್ವಾ..? ಅಥವಾ ಇನ್ನೊಂದಕ್ಕೆ ಹೋಗಿದ್ವಾ..? ಎಂದು ತಿರುಗೇಟು ಕೊಟ್ಟರು.

ರಾಹುಲ್ ಸೇರಿ ಹಲವರ ಬಂಧನ



ನವದೆಹಲಿ: ಕೇಂದ್ರ ಸರ್ಕಾರ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ರಾಷ್ಟ್ರಪತಿ ಭವನದವರೆಗೂ ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸೇರಿದಂತೆ ಅನೇಕ ಕಾಂಗ್ರೆಸ್ ಮುಖಂಡರನ್ನು ಪೊಲೀಸರು ಬಂಧಿಸಿದ್ದಾರೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೂಡ ಬಂಧಿಸಲಾಗಿದೆ. ಈ ಸಂದರ್ಭದಲ್ಲಿ ರಾಹುಲ್ ಗಾಂಧಿ ರಸ್ತೆ ಮಧ್ಯೆ ಕುಳಿತು ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ರಾಹುಲ್ ಗಾಂಧಿ, ಎಲ್ಲಾ ಕಾಂಗ್ರೆಸ್ ಸಂಸದರು ಇಲ್ಲಿಗೆ ಬಂದಿದ್ದಾರೆ. ಹಣದುಬ್ಬರ, ನಿರುದ್ಯೋಗದ ಬಗ್ಗೆ ಅವರು ಮಾತನಾಡುತ್ತಿದ್ದಾರೆ. ಪೊಲೀಸರು ಇಲ್ಲಿ ಕುಳಿತುಕೊಳ್ಳಲು ಬಿಡುತ್ತಿಲ್ಲ. ಸಂಸತ್ ಒಳಗಡೆಯೂ ಚರ್ಚೆಗೆ ಅವಕಾಶ ನೀಡುತ್ತಿಲ್ಲ ಎಂದು ಹೇಳಿದರು. ಕಾಂಗ್ರೆಸ್ ಕಚೇರಿ ಬಳಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಭಾರೀ ಪ್ರತಿಭಟನೆ ನಡೆಸುವುದರೊಂದಿಗೆ ಸೋನಿಯಾ ಗಾಂಧಿ ಅವರ ಇಡಿ ತನಿಖೆಗೆ ವಿರೋಧ ವ್ಯಕ್ತಪಡಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾಗಿ ಎಂ.ಶಿವಕುಮಾರ್ ಅಧಿಕಾರ ಸ್ವೀಕಾರ



ಕರ್ನಾಟಕ ಮೃಗಾಲಯಗಳ ಪ್ರಾಧಿಕಾರದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಎಂ.ಶಿವಕುಮಾರ್ ಅವರನ್ನು ಶಾಸಕ ಎಲ್.ನಾಗೇಂದ್ರ ಅಭಿನಂದಿಸಿದರು.

ಮೈಸೂರು, ಜು.26(ಆರ್‌ಕೆ)– ಕರ್ನಾಟಕ ಮೃಗಾಲಯಗಳ ಪ್ರಾಧಿಕಾರದ ಅಧ್ಯಕ್ಷರಾಗಿ ಎಂ.ಶಿವಕುಮಾರ್ ಅವರು ಇಂದು ಅಧಿಕಾರ ವಹಿಸಿಕೊಂಡರು.

ಸೋಮವಾರ ರಾತ್ರಿಯಷ್ಟೇ ಅಧಿಕೃತ ಆದೇಶವಾಗಿತ್ತು. ಇಂದು ಬೆಳಿಗ್ಗೆ ಮೈಸೂರಿನ ಮೃಗಾಲಯದ ಕಚೇರಿಯಲ್ಲಿ ಅಧಿಕಾರ ವಹಿಸಿಕೊಂಡ ಶಿವಕುಮಾರ್, ಪಕ್ಷ ಸಂಘಟನೆಗೆ ಶ್ರಮಿಸಿದ್ದನ್ನು ಪರಿಗಣಿಸಿ, ತಮ್ಮನ್ನು ಕರ್ನಾಟಕ ಮೃಗಾಲಯಗಳ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದು, ಕಾರಣಕರ್ತರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಮೈಸೂರು ಸೇರಿದಂತೆ ರಾಜ್ಯದ ಎಲ್ಲಾ ಮೃಗಾಲಯಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವ ಮೂಲಕ ಪ್ರಾಣಿಗಳ ಸುರಕ್ಷತೆಗೆ ಆದ್ಯತೆ ನೀಡುತ್ತೇನೆ. ದೇಶ-ವಿದೇಶಗಳಿಂದ ಹೆಚ್ಚು ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ಮೂಲಕ ಮೃಗಾಲಯಗಳ ಆದಾಯ ವೃದ್ಧಿಸಿ ಸಮಗ್ರ ಅಭಿವೃದ್ಧಿ ಮಾಡಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವಂತೆ ಮಾಡಲು ಶ್ರಮಿಸುತ್ತೇನೆ ಎಂದು ನುಡಿದರು.

ಅಧಿಕಾರಿಗಳು, ಸಿಬ್ಬಂದಿ ಹಾಗೂ ಮೃಗಾಲಯಗಳ ವ್ಯವಸ್ಥಾಪನಾ ಮಂಡಳಿ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಸಲಹೆ, ಮಾರ್ಗದರ್ಶನಕ್ಕೆ ಮನ್ನಣೆ ನೀಡಿ, ತಮಗೆ ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತೇನೆ ಎಂದರು. ಶಾಸಕ ಎಲ್.ನಾಗೇಂದ್ರ, ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ, ಮೈಸೂರು ಮೃಗಾಲಯದ ಎಕ್ಸಿಕ್ಯೂಟಿವ್ ಡೈರೆಕ್ಟರ್ ಅಜಿತ್ ಕುಲಕರ್ಣಿ, ಸದಸ್ಯರಾದ ಜ್ಯೋತಿ ರೇಚಣ್ಣ, ಗೋಕುಲ್ ಗೋವರ್ಧನ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಜ್ವರದಿಂದ ಬಳಲುತ್ತಿದ್ದರೂ ಮೌನ ಪ್ರತಿಭಟನೆಯಲ್ಲಿ ಸಿದ್ದರಾಮಯ್ಯ ಭಾಗಿ

ಬೆಂಗಳೂರು: ಜ್ವರದಿಂದ ಬಳಲುತ್ತಿದ್ದರೂ ಮೌನ ಪ್ರತಿಭಟನೆಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಭಾಗಿಯಾಗಿದ್ದರು. ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮಾಜಿ ಸಿಎಂ ಅವರು ಕುಟುಂಬದ ವೈದ್ಯರಿಂದ ತಪಾಸಣೆಗೊಳಗಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಈ ವೇಳೆ ವೈದ್ಯರು, ವಿಶ್ರಾಂತಿ ಪಡೆದುಕೊಳ್ಳುವಂತೆ ಸೂಚಿಸಿದ್ದಾರೆ. ಆದರೆ ಜ್ವರದಿಂದ ಬಳಲುತ್ತಿದ್ದರೂ ಮೌನ ಪ್ರತಿಭಟನೆಗೆ ಆಗಮಿಸಿದ್ದಾರೆ.



ಇತ್ತ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಮಾತನಾಡಿ, ಸೋನಿಯಾ ಗಾಂಧಿಯವರ ವಿಚಾರಣೆ ನಡೆಯುತ್ತಿದೆ. ಅವರನ್ನು ವಾಪಸ್ ಕಳಿಸೋವರೆಗೂ ಪ್ರತಿಭಟನೆ ಮಾಡುತ್ತೇವೆ. ಪ್ರತಿಭಟನೆಗೆ ಎಲ್ಲ ನಾಯಕರನ್ನು ಬರುವುದಕ್ಕೆ ಹೇಳಿದ್ದೇವೆ. ಮೌನವಾಗಿ ಪ್ರತಿಭಟನೆ ಮಾಡ್ತೀವಿ. ದೆಹಲಿಯಲ್ಲೂ ಪ್ರತಿಭಟನೆ ಮಾಡ್ತಿದ್ದಾರೆ ಎಂದು ತಿಳಿಸಿದರು.

ಜಮೀರ್ ಅಹಮದ್‌ಗೆ ರಣದೀಪ್ ಸುರ್ಜೇವಾಲಾ ಎಚ್ಚರಿಕೆ ನೋಟೀಸ್ ವಿಚಾರ ಕುರಿತು ಪ್ರತಿಕ್ರಿಯಿಸಿ, ನಾನೂ ಆ ವಿಚಾರವನ್ನು ಪೇಪರ್‌ನಲ್ಲಿ ಓದಿದೆ ನನಗೂ ಆ ಮಾಹಿತಿ ಬಂದಿದೆ. ಯಾರ್‍ಯಾರ ಮೇಲೆ ಏನೇನು ಕ್ರಮ ತಗೋಬೇಕೋ ಅವರು ತಗೋತಾರೆ ಅಂತ ಡಿಕೆಶಿ ಹೇಳಿದರು.

ಶಾಲಾ ವಿದ್ಯಾರ್ಥಿಗಳಿಗೆ ಬಿಸಿಯೂಟದೊಂದಿಗೆ ಮೊಟ್ಟೆ ವಿತರಣೆ ಆರಂಭ

ಮೈಸೂರು, ಮಂಡ್ಯ, ಕೊಡಗು, ಹಾಸನ, ಚಾ.ನಗರ ಸೇರಿ ಐದು ಜಿಲ್ಲೆಗಳ 4,49,703 ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಿಸಲು 1,664.96 ಲಕ್ಷ ಅನುದಾನ ಬಿಡುಗಡೆ

ಮೈಸೂರು, ಜು.26(ಎಸ್‌ಪಿಎನ್)– ಶಾಲಾ ಮಕ್ಕಳ ಅಪೌಷ್ಟಿಕತೆ ನಿವಾರಣೆಗಾಗಿ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಬಿಸಿಯೂಟದೊಂದಿಗೆ ಬೇಯಿಸಿದ ಮೊಟ್ಟೆ (ಸೇವಿಸದ ಮಕ್ಕಳಿಗೆ ಬಾಳೆಹಣ್ಣು ಇಲ್ಲವೇ ಶೇಂಗಾಚಿಕ್ಕಿ) ವಿತರಣೆ ಕಾರ್ಯ ಮಂಗಳವಾರದಿಂದ ಆರಂಭಗೊಂಡಿತು.



6ರಿಂದ 15 ವರ್ಷದ ವಯೋಮಾನ ದವರೆಗಿನ ಶಾಲಾ–ಮಕ್ಕಳಲ್ಲಿ ಅಪೌಷ್ಟಿಕತೆ, ರಕ್ತಹೀನತೆ ಹಾಗೂ ಬಹು ಪೋಷಕಾಂಶಗಳ ಕೊರತೆ ಇರುವುದು 2019–20ನೇ ನೇ ಸಾಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಮೀಕ್ಷಾ ವರದಿಯಲ್ಲಿ (ಎನ್‌ಎಫ್‌ಹೆಚ್‌ಎಸ್) ಕಂಡು ಬಂದಿತ್ತು. ಈ ಮೊದಲು ಮಕ್ಕಳಲ್ಲಿ ಅಪೌಷ್ಟಿಕತೆ ಹೋಗಲಾಡಿಸುವ ಸಲು ವಾಗಿ ಬೀದರ್, ರಾಯಚೂರು, ಕಲಬುರಗಿ, ಯಾದಗಿರಿ, ಕೊಪ್ಪಳ, ಬಳ್ಳಾರಿ, ವಿಜಯ ನಗರ ಮತ್ತು ವಿಜಯಪುರ ಜಿಲ್ಲೆ ಸೇರಿದಂತೆ ಒಟ್ಟು 8 ಜಿಲ್ಲಾ ಶಾಲಾ ಮಕ್ಕಳಿಗೆ ಮೊಟ್ಟೆ ವಿತರಿಸಲು ಆದೇಶ ಹೊರಡಿಸಲಾಗಿತ್ತು.

2022–23ನೇ ಸಾಲಿನ ಜುಲೈ–2022ರಿಂದ ಫೆಬ್ರವರಿ–2023ರವರೆಗೆ ಒಟ್ಟು 46 ವಾರಗಳವರೆಗೆ ಎಲ್ಲಾ ಜಿಲ್ಲೆಯ ವಿದ್ಯಾರ್ಥಿ(1–8ನೇ ತರಗತಿ)ಗಳಿಗೆ ವಾರಕ್ಕೆರಡು ದಿನ ಮೊಟ್ಟೆ ವಿತರಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ಡಾ.ಆರ್.ವಿಶಾಲ್ ಅವರ ಆದೇಶದ ಹಿನ್ನೆಲೆಯಲ್ಲಿ ಇಂದಿ(ಜು.26)ನಿಂದ ಮೈಸೂರು ಜಿಲ್ಲೆಯಲ್ಲೂ ವಿತರಣೆ ಮಾಡಲಾಗಿದೆ ಎಂದು ಜಿಲ್ಲಾ ಉಪ ನಿರ್ದೇಶಕರ ಕಚೇರಿಯ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಹಿರಿಯ ಅಧಿಕಾರಿಗಳ ಆದೇಶದ ಹಿನ್ನೆಲೆ ಯಲ್ಲಿ ಮೈಸೂರು ತಾಲೂಕು ಎಂ.ಸಿ. ಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಬಿಸಿ ಊಟದ ಜೊತೆಗೆ ಮೊಟ್ಟೆ ಹಾಗೂ ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ವಿತರಿಸಲಾಗಿದೆ. ಈ ವೇಳೆ ಮುಖ್ಯ ಶಿಕ್ಷಕ ವೀರಪ್ಪ, ಕೀಳನ ಪುರ ಗ್ರಾಪಂ ಪಿಡಿಒ ಮಾಯಪ್ಪ, ಎಸ್‌ಡಿಎಂಸಿ ಅಧ್ಯಕ್ಷ ವೆಂಕಟರಮಣ ಹಾಗೂ ಗ್ರಾಪಂ ಸ್ಥಾಯಿ ಸಮಿತಿ ಸದಸ್ಯರಾದ ರಾಜೇಶ್, ವಿಜಯಕುಮಾರ್, ಸದಸ್ಯ ಕುಮಾರ್, ಸೋಮಣ್ಣ, ಸುಗಣ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ಮಹಾದೇವ, ಶಿಕ್ಷಕ ನಟರಾಜ್, ಮಾಜಿ ಅಧ್ಯಕ್ಷ ಅಂದಾನಿ ಅಡುಗೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯ 1,68,248 ವಿದ್ಯಾರ್ಥಿಗಳಿಗೆ 464.36 ಲಕ್ಷ ರೂ., ಮಂಡ್ಯ 96,322 ವಿದ್ಯಾರ್ಥಿಗಳಿಗೆ 265.85 ಲಕ್ಷ ರೂ., ಕೊಡಗು 24,322 ವಿದ್ಯಾರ್ಥಿಗಳಿಗೆ 67.34 ಲಕ್ಷ ರೂ., ಹಾಸನ 96,907 ವಿದ್ಯಾರ್ಥಿಗಳಿಗೆ 267.46 ಲಕ್ಷರೂ., ಚಾಮರಾಜನಗರ 63,904 ವಿದ್ಯಾರ್ಥಿಗಳಿಗೆ 599.95 ಲಕ್ಷ ರೂ ಸೇರಿದಂತೆ ಐದು ಜಿಲ್ಲೆಗಳಿಂದ 4,49,703 ವಿದ್ಯಾರ್ಥಿಗಳಿಗೆ 1,664.96 ಲಕ್ಷ ರೂ. ಅನುದಾನ ಬಿಡುಗಡೆಗೊಂಡಿದೆ. ಅಲ್ಲದೆ, ರಾಜ್ಯಾದ್ಯಂತ ಒಟ್ಟು 30,62,566 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಲಿದ್ದು, ಈ ಯೋಜನೆ ಅನುಷ್ಠಾನ(46 ವಾರಗಳಿಗೆ)ಗೊಳ್ಳಲು 8,452.68 ಲಕ್ಷ ರೂ ವೆಚ್ಚವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮೈಸೂರು ಮಿತ್ರ' ವರದಿ ಫಲಶ್ರುತಿ

ಪೀಪಲ್ಸ್ ಪಾರ್ಕ್‌ನಲ್ಲಿ 'ಬಯಲು ವೇಶ್ಯಾವಾಟಿಕೆ'ಗೆ ಕಡಿವಾಣ

ರಾತ್ರಿ ವೇಳೆ ಭದ್ರತಾ ಸಿಬ್ಬಂದಿ ನೇಮಿಸಲು ನಗರಪಾಲಿಕೆ ನಿರ್ಧಾರ

ಮೈಸೂರು. ಜು.26(ಆರ್‌ಕೆಬಿ)– ಮೈಸೂರಿನ ಪ್ರಸಿದ್ಧ ಪೀಪಲ್ಸ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಬಯಲು ವೇಶ್ಯಾವಾಟಿಕೆಗೆ ಮೈಸೂರು ಮಹಾನಗರಪಾಲಿಕೆ ಕಡಿವಾಣ ಹಾಕಲು ಮುಂದಾಗಿದೆ. ರಾತ್ರಿ ವೇಳೆ ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡಲು ನಿರ್ಧರಿಸಿದೆ.



ಮೈಸೂರಿನ ಹೃದಯ ಭಾಗದಲ್ಲಿದ್ದು, ಸದಾ ಜನಜಂಗುಳಿ, ವಾಹನ ದಟ್ಟಣೆ ಇದ್ದರೂ ಪ್ರಸಿದ್ಧ ಪೀಪಲ್ಸ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಬಯಲು ವೇಶ್ಯಾವಾಟಿಕೆ, ಅಶ್ಲೀಲ ಚಟುವಟಿಕೆಗಳ ಬಗ್ಗೆ 'ಜು.26ರಂದು ಮೈಸೂರು ಮಿತ್ರ ವರದಿ ಮಾಡಿತ್ತು. ರಾಶಿ ರಾಶಿ ಬಿದ್ದಿರುವ ನಿರೋಧ್ ಬಾಕ್ಸ್‌ಗಳು, ಬಳಸಿ ಬಿಸಾಡಿದ್ದ ರಾಶಿ ರಾಶಿ ಕಾಂಡೋಮ್‌ಗಳ ಬಗ್ಗೆ ಚಿತ್ರ ಸಹಿತ ವರದಿ ಮಾಡಿತ್ತು. ಇದಕ್ಕೆ ಕಡಿವಾಣ ಹಾಕುವಂತೆ ಸಾರ್ವಜನಿಕರು, ಹಿರಿಯ ನಾಗರಿಕರು, ಪರಿಸರವಾದಿಗಳಿಂದ ಒತ್ತಾಯವೂ ಕೇಳಿ ಬಂದಿತ್ತು.

ಮಿತ್ರನ ಫಲಶ್ರುತಿ

ವರದಿಯನ್ನು ಗಮನಿಸಿದ ಮಹಾನಗರಪಾಲಿಕೆ ಅಧಿಕಾರಿಗಳು ಮಂಗಳವಾರ ಪೀಪಲ್ಸ್ ಪಾರ್ಕ್‌ನ ಮಂಟಪವೂ ಸೇರಿದಂತೆ ಆವರಣದಲ್ಲಿ ಬಿದ್ದಿದ್ದ ಬಳಸಿ ಬಿಸಾಡಿದ ಕಾಂಡೋಮ್‌ಗಳು, ಖಾಲಿ ಬಾಕ್ಸ್‌ಗಳನ್ನು ತೆರವು ಮಾಡಿಸಿದ್ದಾರೆ. ಇಂದು ಮಂಟಪ ಸ್ವಚ್ಛಗೊಳಿಸಿದ್ದು 'ಮೈಸೂರು ಮಿತ್ರ' ಸ್ಥಳಕ್ಕೆ ಹೋಗಿದ್ದಾಗ ಕಂಡು ಬಂದಿತು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪಾಲಿಕೆ ಅಧಿಕಾರಿಯೊಬ್ಬರು, ಹಿಂದೆ ಪಾರ್ಕ್‌ನಲ್ಲಿ ರಾತ್ರಿ ಪಾಳಿಯ ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡಲಾಗಿತ್ತು. ಆದರೆ ಅಲ್ಲಿ ಅಶ್ಲೀಲ ಚಟುವಟಿಕೆಯಲ್ಲಿ ತೊಡಗುವವರು ಆತನನ್ನು ಹೆದರಿಸಿದ ಪರಿಣಾಮ ಭದ್ರತಾ ಸಿಬ್ಬಂದಿ ಹೋಗುತ್ತಿರಲಿಲ್ಲ ಈಗ ಮತ್ತೆ ಖಾಸಗಿ ಭದ್ರತಾ ಸಿಬ್ಬಂದಿ ನೇಮಕ ಮಾಡಲಾಗುವುದು. ಅಲ್ಲಿ ಯಾವುದೇ ಅಶ್ಲೀಲ ಚಟುವಟಿಕೆ ನಡೆಯದಂತೆ ಕಡಿವಾಣ ಹಾಕಲಾಗುವುದು ಎಂದು ತಿಳಿಸಿದರು.

12 ಲಕ್ಷ ರಾಷ್ಟ್ರ ಧ್ವಜಗಳನ್ನು ಮಾರಾಟ ಮಾಡಲು ಕರ್ನಾಟಕ ಅಂಚೆ ಇಲಾಖೆ ಯೋಜನೆ

ಬೆಂಗಳೂರು: ಆಜಾದಿಯ ಅಮೃತ ಮಹೋತ್ಸವ ಆಚರಣೆಯ ಹಿನ್ನೆಲೆಯಲ್ಲಿ ಹರ್ ಘರ್ ತಿರಂಗಾ ಅಭಿಯಾನ ನಡೆಸಲಾಗುತ್ತಿದ್ದು, ಇದರ ಭಾಗವಾಗಿ ರಾಜ್ಯ ಅಂಚೆ ಇಲಾಖೆ 12 ಲಕ್ಷ ರಾಷ್ಟ್ರ ಧ್ವಜಗಳನ್ನು ಮಾರಾಟ ಮಾಡುವ ಯೋಜನೆ ಹೊಂದಿದೆ.



ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ರಾಜೇಂದ್ರಕುಮಾರ್ ಮಾಧ್ಯಮದೊಂದಿಗೆ ಮಾತನಾಡಿದ್ದು, "ರಾಜ್ಯದ ಪ್ರತಿ ಪ್ರಧಾನ ಅಂಚೆ ಕಚೇರಿಯ ಎದುರು ಸೆಲ್ಫಿ ಪಾಯಿಂಟ್ ಅನ್ನು ಸ್ಥಾಪಿಸಲಾಗುತ್ತದೆ. ರಾಷ್ಟ್ರಧ್ವಜದೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಜನತೆ ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳಬಹುದಾಗಿದೆ. ಇನ್ನು ಹರ್ ಘರ್ ತಿರಂಗಾ ಗೀತೆಯ ಮೂಲಕ ಪ್ರಧಾನ ಅಂಚೆ ಕಚೇರಿಗಳಲ್ಲಿ ಅಭಿಯಾನದ ವಿಡಿಯೋಗಳನ್ನು ಪ್ರಸಾರ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ದೇಶಾದ್ಯಂತ 2 ಕೋಟಿ ಧ್ವಜ ಮಾರಾಟ ಮಾಡುವುದನ್ನು ಕಡ್ಡಾಯ ಗೊಳಿಸಿದೆ. ರಾಜ್ಯದಲ್ಲಿ ಎಲ್ಲಾ ಅಂಚೆ ಕಚೇರಿಗಳ ಮೂಲಕ ಆ.1 ರಿಂದ 12 ಲಕ್ಷ ಧ್ವಜಗಳನ್ನು ಮಾರಾಟ ಮಾಡುವ ಉದ್ದೇಶ ಹೊಂದಲಾಗಿದೆ ಎಂದು ಸಿಪಿಎಂಜಿ ಹೇಳಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಮೂರು ದಿನಗಳ ಕಾಲ ಧ್ವಜಾರೋಹಣ ಮಾಡುವುದಕ್ಕಾಗಿ ಜನತೆಗೆ ಉತ್ತೇಜನ ನೀಡಲಾಗುವುದು, ಜನತೆಯಲ್ಲಿ ದೇಶಭಕ್ತಿ ಮೂಡಿಸುವುದು ಹಾಗೂ ಆ ಮೂಲಕ ದೇಶ ಕಟ್ಟಲು ಶ್ರಮಿಸಿದವರ ಕೊಡುಗೆಗಳನ್ನು ನೆನೆಯುವಂತೆ ಮಾಡುವುದು ಈ ಅಭಿಯಾನದ ಹಿಂದಿನ ಉದ್ದೇಶವಾಗಿದೆ ಎಂದು ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ರಾಜೇಂದ್ರ ಕುಮಾರ್ ಹೇಳಿದ್ದಾರೆ.

ಮೊಹಮ್ಮದ್ ರಫಿ, ಲತಾ ಮಂಗೇಶ್ಕರ್ ಹಾಡಿನ ಮೋಡಿ

ಮೈಸೂರು, ಜು.26(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಸಂಗೀತ ಮಾಂತ್ರಿಕ ಮೊಹಮ್ಮದ್ ರಫಿ ಹಾಗೂ ಲತಾ ಮಂಗೇಶ್ಕರ್ ಅವರ ಹಳೆಯ ಹಿಂದಿ ಮತ್ತು ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕೇಳುಗರ ಮನಸೆಳೆಯಿತು.

'ಜ್ಯೂನಿಯರ್ ರಫಿ' ಖ್ಯಾತಿಯ ರಾಘವೇಂದ್ರ ರತ್ನಾಕರ್, ಗಾಯಕಿ ಯರಾದ ಡಾ.ಪ್ರೀತಂ ರಾಘವೇಂದ್ರ ಹಾಗೂ ಶ್ರೇಷ್ಠಾ ತಮ್ಮ ಗಾಯನದ ಮೂಲಕ ಎಲ್ಲರ ಮನಗೆದ್ದರು. ಭಕ್ತಿಗೀತೆಯ ಮೂಲಕ ಆರಂಭಿಸಿ ತಾರೆ ಜಮೀನ್ ಪರ್ ಹಿಂದಿ ಚಿತ್ರದ 'ಮೇರೆ ಮೆಹಬೂಬ್ ತುಜೆ', ದೋಸ್ತಿ ಚಿತ್ರದ 'ರಹಿ ಮಾನ್ವ ದುಕ್ ಕಿ ಚಿಂಟಾ', ವಾವ್ ಕೌನ್ ತಿ ಚಿತ್ರದ 'ಲಗ್ ಜಾ ಗಲೆ', ಗೈಡ್ ಚಿತ್ರದ 'ತೇರೆ ಮೇರೆ ಸಪ್ನೆ', ಅಭಿಮಾನ್ ಚಿತ್ರದ 'ತೇರಿ ಬಿಂದಿಯಾ ರೇ', ಹವ್ ಕಿಸೀಸೇ ಕಮ್ ನಹಿ ಚಿತ್ರದ 'ಕ್ಯಾ ಹುವಾ ತೇರಾ ವಾದಾ', ಚೈನಾ ಟೌನ್ ಚಿತ್ರದ 'ಬಾರ್ ಬಾರ್ ದೇಖೋ', ಪ್ರೊಫೆಸರ್ ಚಿತ್ರದ 'ಮೇ ಚಲೀ ಮೇ ಚಲೀ', ಮೇರಿ ಸನಂ ಚಿತ್ರದ 'ಪುಕರತ್ ಚಲೋವೋ ಮೇನ್', ಬ್ರಹ್ಮಾಚಾರಿ ಚಿತ್ರದ 'ದಿಲ್ ಕೆ ಜರೂನ್ ಕೆ ಮೇನ್ ತುಜುಕೋ', ಕೊಯಿನೂರ್ ಚಿತ್ರದ 'ಮಧುಬಾನ್ ಮೇನ ರಾಧಿಕೆ', ಪಾರಸ್‌ಮಣಿ ಚಿತ್ರದ 'ವಾ ಜಬ್ ಯಾದ್ ಆಯೇ', ಜಂಗ್ಲಿ ಚಿತ್ರದ 'ಚಾಯೇ ಕೋಯಿ ಮುಜೆ ಜಂಗ್ಲಿ ಕಹೆ',



ಚಿರಾಗ್ ಚಿತ್ರದ 'ತೇರಿ ಆನ್‌ಕೋನ್ ಕೇ ಸಿವ್', ಬೈಜೂಬೌರಾ ಚಿತ್ರದ 'ಓ ದುನಿಯಾ ಕೆ ರಕ್ಷಾವಾಲೆ', ದುಲಾರಿ ಚಿತ್ರದ 'ಸುಹಾನಿ ರಾತ್ ದಾಲ್ ಚೌಕಿ ಹಾಗೂ ಕನ್ನಡದ ಒಂದೇ ಬಳ್ಳಿಯ ಹೂಗಳು ಚಿತ್ರದ 'ನೀನೆಲ್ಲಿ ನಡೆವೆ ದೂರ' ಇನ್ನಿತರ ಹಾಡುಗಳನ್ನು ಹಾಡಿ ಗಮನ ಸೆಳೆದರು.

ಇದಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಗಾಯಕ ರಾಘ ವೇಂದ್ರ ರತ್ನಾಕರ್ ಹಾಗೂ ಗಾಯಕಿ ಡಾ.ಪ್ರೀತಂ ರಾಘವೇಂದ್ರ ಅವರನ್ನು ಸನ್ಮಾನಿಸಿದರು. ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ಎಂ.ಚಂದ್ರಶೇಖರ್, ಲತಾ ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

ಕಬಿನಿಯಿಂದ ಸಮರ್ಪಕ ನೀರು ಪೂರೈಕೆ ಸಂಬಂಧ ಚೆಸ್ಕಾಂ ಅಧಿಕಾರಿಗಳೊಂದಿಗೆ ಶಾಸಕ ರಾಮದಾಸ್ ಸಭೆ

ಕೋಟಿ ರೂ. ವೆಚ್ಚದಲ್ಲಿ ಪುನರ್ ವ್ಯವಸ್ಥೆ ಭರವಸೆ



ಕುಡಿಯುವ ನೀರು ಸರಬರಾಜು ಕೇಂದ್ರಕ್ಕೆ ವಿದ್ಯುತ್ ವ್ಯತ್ಯಯ ಹಿನ್ನೆಲೆಯಲ್ಲಿ ಶಾಸಕ ಎಸ್.ಎ.ರಾಮದಾಸ್ ಚೆಸ್ಕಾಂ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಮೈಸೂರು, ಜು.26(ಎಂಟಿವೈ)– ಕಬಿನಿಯಿಂದ ಮೈಸೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆಯಲ್ಲಿ ಆಗುತ್ತಿರುವ ಸಮಸ್ಯೆಗೆ ಶಾಶ್ವತವಾದ ಪರಿಹಾರ ಕಂಡುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.

ವಿದ್ಯಾರಣ್ಯಪುರಂನಲ್ಲಿರುವ ಶಾಸಕರ ಕಚೇರಿಯಲ್ಲಿ ಮಂಗಳವಾರ ಚೆಸ್ಕಾಂ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ನಿಟ್ಟಿನಲ್ಲಿ ಕಬಿನಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಗೆ ವಿದ್ಯುತ್ ಪೂರೈಸಲು ಮೈಸೂರು ನಗರ ಹಾಗೂ ಜಯಪುರ ಫೀಡರ್ ಲೈನ್ ವ್ಯವಸ್ಥೆ ಮಾಡಲಾಗಿದೆ. ಕೆಲವು ಸಂದರ್ಭದಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುವುದರಿಂದ ನೀರು ಪಂಪ್ ಮಾಡಲು ಅಡಚಣೆಯಾಗುತ್ತಿದೆ. ಇದರಿಂದ ಮೈಸೂರು ಮಹಾನಗರ ಪಾಲಿಕೆಯ ಕೆಲವು ವಾರ್ಡ್‌ಗಳಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ ಎಂದರು.

ಕಬಿನಿ ಕುಡಿಯುವ ನೀರೆತ್ತುವ ಕೇಂದ್ರಕ್ಕೆ ವಿದ್ಯುತ್ ಪೂರೈಸಲು ಅಳವಡಿಸಿರುವ ಯಂತ್ರೋಪಕರಣ ಹಳೆಯದ್ದಾಗಿದೆ. ಅಲ್ಲದೇ ನೀರೆತ್ತುವ ಯಂತ್ರೋಪಕರಣ ವ್ಯವಸ್ಥೆಯೂ ಸುಧಾರಿಸಬೇಕಾಗಿದೆ. ನೀರಿನ ಸಮಸ್ಯೆ ಪದೇ ಪದೆ ಉದ್ಭವಿಸುತ್ತಿದ್ದು, ಅದನ್ನು ಶಾಶ್ವತವಾಗಿ ನಿವಾರಿಸಲು ಒಂದು ಕೋಟಿ ರೂ.ವೆಚ್ಚದಲ್ಲಿ ಯೋಜನೆ ರೂಪಿಸಲಾಗುತ್ತಿದೆ. ಇದಕ್ಕಾಗಿ ಸಭೆ ನಡೆಸಲಾಗಿದೆ. ಪ್ರಸ್ತುತ ಇರುವ ವ್ಯವಸ್ಥೆಯಲ್ಲೇ ಸದ್ಯಕ್ಕೆ ನೀರು ಸರಬರಾಜು ಮಾಡುವುದಕ್ಕಾಗಿ ಕ್ರಮ ಕೈಗೊಳ್ಳಲಾಗಿದೆ. ಯಾವ ವಾರ್ಡ್‌ನಲ್ಲಿ, ಯಾವ ಸಮಯದಲ್ಲಿ, ಎಷ್ಟು ನೀರನ್ನು, ಎಷ್ಟು ಫೋರ್ಸ್‌ನಲ್ಲಿ ಬಿಡಬೇಕೆಂದು ಪಟ್ಟಿ ಮಾಡಲಾಗಿದೆ. ಅದರಂತೆ ನೀರು ಪೂರೈಸಲಾಗುತ್ತದೆ. ಮತ್ತೆ ಕೆಲವು ವಾರ್ಡ್‌ಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತದೆ ಎಂದು ತಿಳಿಸಿದರು.

ಜು.28ರಂದು ಮಧ್ಯಾಹ್ನ 3ಕ್ಕೆ ಪಾಲಿಕೆ ಆಯುಕ್ತರು ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಕಬಿನಿಯ ಕುಡಿಯುವ ನೀರಿನ ಯೋಜನೆಯ ಸ್ಥಳಕ್ಕೆ ತೆರಳಿ ಪರಿಶೀಲಿಸಲಾಗುತ್ತದೆ. ಆ ವೇಳೆ ಪಂಪಿಂಗ್ ಪಾಯಿಂಟ್, ಜಾಕ್‌ವೆಲ್ ಪಾಯಿಂಟ್ ಸೇರಿದಂತೆ ಇನ್ನಿತರ ವ್ಯವಸ್ಥೆಯನ್ನು ಪರಿಶೀಲಿಸಲಾಗುತ್ತದೆ ಎಂದರು.

ಆ.14ರೊಳಗೆ ಕೆ.ಆರ್.ಕ್ಷೇತ್ರದಲ್ಲಿರುವ ಎಲ್ಲಾ ಬೋರ್‌ವೆಲ್‌ಗಳನ್ನು ಉದ್ಯಾನಗಳಿಗೆ ಸಂಪರ್ಕ ಕಲ್ಪಿಸಲಾಗುತ್ತದೆ. ಇನ್ನು ಮುಂದೆ ಬೋರ್‌ವೆಲ್‌ಗಳಲ್ಲಿನ ನೀರನ್ನು ಉದ್ಯಾನವನಗಳ ನಿರ್ವಹಣೆಗೆ ಬಳಸಿಕೊಳ್ಳಲಾಗುತ್ತದೆ. ಯಂತ್ರೋಪಕರಣ ಬದಲಿಸುವ, ವಿದ್ಯುತ್ ಫೀಡರ್ ಲೈನ್ ದುರಸ್ತಿ, ಪಂಪಿಂಗ್ ಕೇಂದ್ರದಲ್ಲಿ ಯಂತ್ರ ಬದಲಿಸುವ ವೇಳೆ 2–3 ದಿನ ಕುಡಿಯುವ ನೀರಿನ ಪೂರೈಕೆಯಲ್ಲಿ ಸಮಸ್ಯೆಯಾಗಬಹುದು. ಅದಕ್ಕೆ ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಇಲವಾಲ ಬಳಿ ಯುವಕನ ಶವ ಪತ್ತೆ

ಕೊಲೆ ಶಂಕೆ ವ್ಯಕ್ತಪಡಿಸಿದ ಯುವಕನ ತಂದೆ

ಮೈಸೂರು, ಜು.26(ಎಂಕೆ)– ಮೈಸೂರಿನ ಇಲವಾಲ ಬಳಿಯ ಅಲೋಕ ಅರಮನೆ ಪಕ್ಕದ ಕ್ವಾರಿ ಹೊಂಡವೊಂದರಲ್ಲಿ ಯುವಕನ ಶವ ಮಂಗಳವಾರ ಪತ್ತೆಯಾಗಿದೆ.

ಇಲ್ಲಿನ ಹನುಮಂತಪುರದ ನಿವಾಸಿ ಪಾಪಯ್ಯ ಎಂಬುವರ ಮಗ ಯೋಗೇಶ್(17) ಮೃತದೇಹ ಪತ್ತೆಯಾಗಿದ್ದು, ಕಳೆದ ಎರಡ್ಮೂರು ದಿನಗಳ ಹಿಂದೆಯೇ ಮೃತಪಟ್ಟಿರಬಹುದು. ಕಾಲು ಜಾರಿ ಬಿದ್ದಿರುವ ಸಾಧ್ಯತೆ ಇದೆ ಎಂದು ಇಲವಾಲ ಪೊಲೀಸರು ತಿಳಿಸಿದ್ದಾರೆ.

ಕೊಲೆ ಶಂಕೆ: ಇಲವಾಲ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾಭ್ಯಾಸ ಮಾಡುತ್ತಿದ್ದ ಯೋಗೇಶ್, ಜು.24 ರಂದು ಮನೆಗೆ ವಾಪಸ್ಸಾಗಿರಲಿಲ್ಲ. ಎಲ್ಲೋ ಹೋಗಿರಬಹುದು ಎಂದುಕೊಂಡಿದ್ದೆವು. ಮೃತ ದೇಹ ಗಮನಿಸಿದರೆ ಕೊಲೆ ಮಾಡಿರುವಂತೆ ಕಾಣುತ್ತಿದ್ದು, ಮಗನ ಸಾವಿನ ಕುರಿತು ತನಿಖೆ ನಡೆಸುವಂತೆ ಮೃತ ಯೋಗೇಶ್ ತಂದೆ ಪಾಪಯ್ಯ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಸಿರು ನಮ್ಮ ಉಸಿರು

ಮಕ್ಕಳು ಚಿಕ್ಕಂದಿನಲ್ಲಿ ಕಲಿತ ಸಂಸ್ಕಾರಗಳೇ ಮುಂದೆ ಉತ್ತಮ ವ್ಯಕ್ತಿತ್ವ ರೂಪಿಸುತ್ತವೆ

ಇನ್ಫೋಸಿಸ್ ಫೌಂಡೇಷನ್‌ನ ಡಾ.ಸುಧಾಮೂರ್ತಿ ಅಭಿಮತ

ಸುತ್ತೂರು, ಜು.26(ಎಂಕೆ)– ಮಕ್ಕಳು ಚಿಕ್ಕವರಾಗಿದ್ದಾಗ ಕಲಿತ ವಿನಯ, ವಿದ್ಯೆ, ಸಂಸ್ಕಾರಗಳೇ ಮುಂದೆ ದೊಡ್ಡವರಾದಾಗ ಉತ್ತಮ ವ್ಯಕ್ತಿತ್ವವನ್ನು ರೂಪಿಸುತ್ತವೆ ಎಂದು ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಸುಧಾಮೂರ್ತಿ ಹೇಳಿದರು. ಸುತ್ತೂರು ಶ್ರೀಕ್ಷೇತ್ರದಲ್ಲಿ ಪ್ರಾರ್ಥನಾ ಸಭೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಮಾತನಾಡಿದ ಅವರು, ಹಳ್ಳಿಗಾಡಿನ ಮಕ್ಕಳಿಗೆ ಅವಕಾಶಗಳು ಕಡಿಮೆ. ಆದರೆ ಇಲ್ಲಿನ ಶಾಲೆಯ ಮಕ್ಕಳಿಗೆ ಎಲ್ಲಾ ರೀತಿಯ ಅವಕಾಶಗಳನ್ನು ಶ್ರೀಮಠ ಕಲ್ಪಿಸಿದೆ. ಇಲ್ಲಿನ ವಿದ್ಯಾರ್ಥಿಗಳನ್ನು ನೋಡುತ್ತಿದ್ದರೆ ತುಂಬಾ ಸಂತೋಷವಾಗುತ್ತದೆ. ಗುರುಗಳ ಮಾತು ಮಾಣಿಕ್ಯದಂತೆ, ಅವರ ಮಾರ್ಗದರ್ಶನದಿಂದ ಉತ್ತಮ ಜೀವನ ರೂಪಿಸಿಕೊಳ್ಳಬಹುದು. .ಮನೆಯಲ್ಲಿ ಇಬ್ಬರು ಮಕ್ಕಳನ್ನು ಸಾಕುವುದೇ ಕಷ್ಟವಾಗಿರುವಾಗ ಇಲ್ಲಿ ನಾಲ್ಕೈದು ಸಾವಿರ ಮಕ್ಕಳನ್ನು ಜತನದಿಂದ ಕಾಪಾಡುತ್ತಿರುವ ಸುತ್ತೂರು ಜಗದ್ಗುರುಗಳವರ ಜ್ಞಾನಾನ್ನದಾಸೋಹ ಅನುಪಮವಾದುದು ಎಂದು ಸುತ್ತೂರು ಮಠದ ಸೇವೆಯನ್ನು ಶ್ಲಾಘಿಸಿದರು.



ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಸುಧಾಮೂರ್ತಿ ಯವರು ಭಾರತೀಯ ದಿಟ್ಟ ಮಹಿಳೆ. ಅವರು ಸ್ಥಾಪಿಸಿದ ಇನ್ಫೋಸಿಸ್ ಸಂಸ್ಥೆಯ ನೌಕರರನ್ನು ಅವರ ಕುಟುಂಬದ ಸದಸ್ಯರಂತೆಯೇ ಕಾಣುತ್ತಾರೆ. ಇನ್ಫೋಸಿಸ್ ಪ್ರತಿಷ್ಠಾನದ ವತಿಯಿಂದ ಅನೇಕ ಸಮಾಜ ಸೇವೆಗಳನ್ನು ಒದಗಿಸುತ್ತಿದ್ದಾರೆ. ಅವರ ಮಾತೃವಾತ್ಸಲ್ಯ, ಅಂತಃಕರಣ, ದಾನಶೀಲ ಗುಣ ಹಾಗೂ ಸಾದಾಸೀದ ಸರಳ ವ್ಯಕ್ತಿತ್ವದಿಂದಲೇ ಪ್ರಸಿದ್ಧರಾಗಿದ್ದಾರೆ ಎಂದು ನುಡಿದರು. ಸುಧಾಮೂರ್ತಿಯವರ ಸಹೋದರಿ ಸುನಂದಾ ಕುಲಕರ್ಣಿ, ಜಯರಾಜೇಂದ್ರರು, ಜಿ.ಎಲ್.ತ್ರಿಪುರಾಂತಕ ಮತ್ತಿತರರಿದ್ದರು.

ಪ್ರತ್ಯೇಕ ಪ್ರಕರಣದಲ್ಲಿ ಮೂವರು ಅಂತರ ಜಿಲ್ಲಾ ಖದೀಮರ ಬಂಧನ

20 ಲಕ್ಷಕ್ಕೂ ಅಧಿಕ ಮೌಲ್ಯದ ವಸ್ತುಗಳು, ಏರ್‌ಗನ್ ವಶ

ಮೈಸೂರು, ಜು.26(ಎಸ್‌ಬಿಡಿ)– ಮೈಸೂರಿನ ಸಿಸಿಬಿ ಪೊಲೀಸರು ಮೂವರು ಅಂತರ ಜಿಲ್ಲಾ ಖದೀಮರನ್ನು ಬಂಧಿಸಿ, ಅವರು ಮನೆಗಳವು ಹಾಗೂ ವಾಹನ ಕಳ್ಳತನದಲ್ಲಿ ದೋಚಿದ್ದ ಸುಮಾರು 20 ಲಕ್ಷ ರೂ. ಮೌಲ್ಯದ ವಸ್ತುಗಳು ಹಾಗೂ ಒಂದು ಏರ್‌ಗನ್ ಅನ್ನು ವಶಪಡಿಸಿಕೊಂಡಿದ್ದಾರೆ.



ಪ್ರಕರಣ–1: ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಗೆ ಕನ್ನ ಹಾಕಿದ್ದ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖೆ ನಡೆಸುತ್ತಿದ್ದ ಸಿಸಿಬಿ ಪೊಲೀಸರು, ಜು.18ರಂದು ನಗರ ಬಸ್ ನಿಲ್ದಾಣದ ಬಳಿ ಆರೋಪಿಯನ್ನು ಬಂಧಿಸಿದ್ದರು. ಆತನ ಇಬ್ಬರು ಸಹಚರರೊಂದಿಗೆ ಸೇರಿ ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶ, ಮಂಡ್ಯ, ಬೆಂಗಳೂರು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಮನೆಗೆ ನುಗ್ಗಿ ಬೆಲೆ ಬಾಳುವ ವಸ್ತುಗಳನ್ನು ಕಳ್ಳತನ ಮಾಡಿದ್ದು ವಿಚಾರಣೆ ವೇಳೆ ತಿಳಿದುಬಂದಿತ್ತು.

ಆತ ನೀಡಿದ ಮಾಹಿತಿ ಆಧಾರದಲ್ಲಿ ಕಳ್ಳತನ ಮಾಡಿದ್ದ ವಸ್ತುಗಳನ್ನು ಬೇರೆಡೆಗೆ ವಿಲೇವಾರಿ ಮಾಡುತ್ತಿದ್ದ ಮತ್ತೊರ್ವ ಆರೋಪಿಯನ್ನು ಬಂಧಿಸಿದ ಪೊಲೀಸರು, 191 ಗ್ರಾಂ ಚಿನ್ನಾಭರಣ, 1 ಕೆಜಿ 330 ಗ್ರಾಂ ಬೆಳ್ಳಿ ಪದಾರ್ಥಗಳು ಸೇರಿ ಸುಮಾರು 10.15 ಲಕ್ಷಮೌಲ್ಯದ ವಸ್ತುಗಳು ಹಾಗೂ ಒಂದು ಏರ್‌ಗನ್ ವಶಪಡಿಸಿಕೊಂಡಿದ್ದಾರೆ.

ಈ ಮೂಲಕ ಮೈಸೂರು ನಗರ ವಿಜಯನಗರ ಠಾಣೆ, ಮೇಟಗಳ್ಳಿ ಹಾಗೂ ಕೆಆರ್‌ಎಸ್ ಠಾಣೆ, ಬೆಂಗಳೂರು ಕುಂಬಳಗೋಡು ಠಾಣೆ ವ್ಯಾಪ್ತಿಯ ತಲಾ 1, ಇಲವಾಲ ಠಾಣೆಯ 2, ಮೈಸೂರು ದಕ್ಷಿಣ ಠಾಣೆಯ 3 ಮನೆ ಕಳವು ಪ್ರಕರಣಗಳು ಪತ್ತೆಯಾದಂತಾಗಿದೆ.

ಬಾಲ್ಯದಿಂದಲೂ ಚಾಳಿ: ಮೊದಲ ಆರೋಪಿಗೆ ಮನೆ ಕಳವು ಮಾಡುವುದು ಬಾಲ್ಯದಿಂದಲೂ ಚಾಳಿಯಾಗಿ ಅಂಟಿಕೊಂಡಿದೆ ಚಿಕ್ಕ ವಯಸ್ಸಿನಲ್ಲೇ ಮನೆಯೊಂದರಲ್ಲಿ ಕಳ್ಳತನ ಮಾಡಿ ಸಿಕ್ಕಿಹಾಕಿಕೊಂಡು ಬಾಲಮಂದಿರದಲ್ಲಿದ್ದ. ಆದರೆ ಅಲ್ಲಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದ ಆಸಾಮಿ ತನ್ನ ಹಳೇ ಚಾಳಿ ಮುಂದುವರೆಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಈತನ ಇನ್ನಿಬ್ಬರು ಸಹಚರರ ಬಂಧನಕ್ಕೆ ಪೊಲೀಸರು ಶೋಧ ಮುಂದುವರೆಸಿದ್ದಾರೆ.

ಪ್ರಕರಣ–2: ಹಲವು ಜಿಲ್ಲೆಗಳಲ್ಲಿ ದ್ವಿಚಕ್ರ ಕಳ್ಳತನ ಮಾಡುತ್ತಿದ್ದ ಚಾಲಾಕಿ ಕಳ್ಳನನ್ನು ಬಂಧಿಸಿ, ಆತನಿಂದ ಸುಮಾರು 9 ಲಕ್ಷ ರೂ. ಮೌಲ್ಯದ 6 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಮೂಲಕ ಮೈಸೂರಿನ ಲಕ್ಷ್ಮೀಪುರಂ ಠಾಣೆಯ 2, ಬೆಂಗಳೂರು ಬ್ಯಾಟರಾಯನಪುರ ಠಾಣೆ, ರಾಜರಾಜೇಶ್ವರಿನಗರ, ಚಾಮರಾಜಪೇಟೆ, ಚನ್ನಪಟ್ಟಣ ಠಾಣೆ ವ್ಯಾಪ್ತಿಯ ತಲಾ ಒಂದು ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ.

ಮೈಸೂರು ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ ಅವರ ಮಾರ್ಗದರ್ಶನ, ಸಿಸಿಬಿ ಎಸಿಪಿ ಸಿ.ಕೆ.ಅಶ್ವತ್ಥನಾರಾಯಣರವರ ನೇತೃತ್ವದಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಜಿ.ಶೇಖರ್ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಈ ಪ್ರಕರಣಗಳನ್ನು ಭೇದಿಸಿದ್ದಾರೆ.

ಮೊಬೈಲ್ ಮೂಲಕ ಕುದುರೆ ರೇಸ್ ಜೂಜು; ಇಬ್ಬರ ಬಂಧನ

ಮೈಸೂರು, ಜು.26(ಎಸ್‌ಬಿಡಿ)– ಹೈದರಾಬಾದ್‌ನಲ್ಲಿ ನಡೆಯುತ್ತಿದ್ದ ಕುದುರೆ ರೇಸ್ ಸಂಬಂಧ ಮೈಸೂರಿನಲ್ಲಿ ಮೊಬೈಲ್ ಸಂಪರ್ಕದ ಮೂಲಕ ಕಾನೂನುಬಾಹಿರವಾಗಿ ಜೂಜಾಡುತ್ತಿದ್ದ ಇಬ್ಬರನ್ನು ಸಿಸಿಬಿ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ನಜರ್‌ಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ಜೆ.ಸಿ.ನಗರದ ಮನೆಯೊಂದರಲ್ಲಿ ಕಾನೂನು ಬಾಹಿರವಾಗಿ ಕುದುರೆ ರೇಸ್ ಜೂಜಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದ್ದು, ಸ್ಥಳದಲ್ಲಿದ್ದ 50,500 ರೂ. ಹಣ, ಒಂದು ಲ್ಯಾಪ್‌ಟಾಪ್, ಎರಡು ಮೊಬೈಲ್ ಹಾಗೂ ಹಾರ್ಸ್ ರೇಸ್ ಗೈಡ್ ಪುಸ್ತಕಗಳನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತರಿಬ್ಬರು ಮನೆಯಲ್ಲೇ ಕುಳಿತುಕೊಂಡು ಜೂಜಾಡುವವರ ವಾಟ್ಸಾಪ್ ಗ್ರೂಪ್ ಮತ್ತು ಕರೆ ಮಾಡುವ ಮೂಲಕ ಹೈದರಾಬಾದ್ ಮತ್ತಿತರ ಕಡೆಗಳಲ್ಲಿ ನಡೆಯುವ ಕುದುರೆ ರೇಸ್ ಸಂಬಂಧ ಜೂಜಾಡುತ್ತಿದ್ದರು. ಈ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿಸಿಪಿ ಗೀತಾ ಪ್ರಸನ್ನ, ಸಿಸಿಬಿ ಎಸಿಪಿ ಸಿ.ಕೆ.ಅಶ್ವಥನಾರಾಯಣ ಅವರ ಮಾರ್ಗದರ್ಶನದಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಸಿಬ್ಬಂದಿ ರವಿಕುಮಾರ್, ಅನಿಲ್, ಅರುಣ್‌ಕುಮಾರ್, ಸುಬಾನಲ್ಲಾ ಬಾಲ್ದಾರ್, ಕೆ.ಜಿ.ಶ್ರೀನಿವಾಸ ಅವರು ಕಾರ್ಯಾಚರಣೆ ನಡೆಸಿದ್ದಾರೆ.

ಅಕ್ರಮ ಹಣ ವರ್ಗಾವಣೆ ಪ್ರಕರಣ: ಫಾರೂಕ್ ಅಬ್ದುಲ್ಲಾ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ: ಜಮ್ಮು ಮತ್ತು ಕಾಶ್ಮೀರ ಕ್ರಿಕೆಟ್ ಅಸೋಸಿಯೇಷನ್‌ನ ಹಣಕಾಸು ಅವ್ಯವಹಾರ ಆರೋಪಕ್ಕೆ ಸಂಬಂಧಿಸಿದಂತೆ ಹಣ ವರ್ಗಾವಣೆ ಪ್ರಕರಣದಲ್ಲಿ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವರ ವಿರುದ್ಧ ಜಾರಿ ನಿರ್ದೇಶನಾಲಯ(ಇಡಿ) ಮಂಗಳವಾರ ಚಾರ್ಜ್‌ಶೀಟ್ ಸಲ್ಲಿಸಿದೆ. ಇಂದು ಚಾರ್ಜ್‌ಶೀಟ್ ಸಲ್ಲಿಸಿದ ಇಡಿ, ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ 84 ವರ್ಷದ ಫಾರೂಕ್ ಅಬ್ದುಲ್ಲಾ ಅವರನ್ನು ಹಲವು ಬಾರಿ ಪ್ರಶ್ನಿಸಿದೆ. ಕೊನೆಯ ಬಾರಿಗೆ ಮೇ 31 ರಂದು ಶ್ರೀನಗರದಲ್ಲಿ ಮೂರು ಗಂಟೆಗಳಿಗೂ ಹೆಚ್ಚು ಕಾಲ ವಿಚಾರಣೆ ನಡೆಸಿತ್ತು.

ನಿಮ್ ಡಿಜಿಪಿಯವರೇ ಹೇಳಿಲ್ವೇ... ನೀವ್ಯಾಕೆ ಅಡ್ಡ ಹಾಕ್ತಿರಿ...!?

- ಮೈಸೂರು ಸಂಚಾರಿ ಪೊಲೀಸರಿಗೆ ವಾಹನ ಸವಾರರ ಖಡಕ್ ಪಾಠ
- ಹಿರಿಯ ಅಧಿಕಾರಿಗಳ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡಿರುವ ವಾಹನ ಚಾಲಕರು
- ಮೈಸೂರಲ್ಲಿ ತಪಾಸಣೆಗಿಳಿದ ಸಂಚಾರ ಪೊಲೀಸರಿಗೆ ಹೊಸ ತಲೆನೋವು



ಮೈಸೂರು, ಜು.26(ಎಂಕೆ)–ಡಿಜಿ–ಐಜಿ ಸಾಹೇಬರೇ ಹೇಳಿದ್ದಾರೆ... ನಮ್ಮನ್ಯಾಕೆ ಅಡ್ಡಗಟ್ಟುತ್ತೀರಿ ಎಂದು ಮೈಸೂರಲ್ಲಿ ವಾಹನ ಸವಾರರು ಸಂಚಾರಿ ಪೊಲೀಸರ ಮೇಲೆರಗಿ ಬೀಳುವುದು ಹೆಚ್ಚಾಗಿದೆ...!

ಇತ್ತೀಚೆಗೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕ (ಡಿಜಿಪಿ) ಪ್ರವೀಣ್ ಸೂದ್, ಅನಗತ್ಯವಾಗಿ ವಾಹನಗಳನ್ನು ತಡೆದು ನಿಲ್ಲಿಸಬಾರದು ಎಂದಿದ್ದನ್ನೇ ನೆಪ ಮಾಡಿಕೊಂಡಿರುವ ವಾಹನ ಸವಾರರು ಹೆಲ್ಮೆಟ್, ಸೀಟ್ ಬೆಲ್ಟ್ ಹಾಕದಿದ್ದರೂ ವಾಹನಗಳ ತಡೆದು ತಪಾಸಣೆ ನಡೆಸಬಾರದು ಎಂದು ಡಿಜಿಪಿ ಆದೇಶ ನೀಡಿದ್ದಾರೆ ಎಂದು ಹೇಳುತ್ತಾ ಸಂಚಾರಿ ಪೊಲೀಸರ ವಿರುದ್ಧವೇ ತಿರುಗಿ ಬೀಳುತ್ತಿದ್ದಾರೆ. ಎಷ್ಟೋ ವಾಹನ ಸವಾರರ ಬಳಿ ಹೆಲ್ಮೆಟ್, ಸೀಟ್ ಬೆಲ್ಟ್ ಹಾಕದೆ ವಾಹನದಲ್ಲಿ ಸಂಚರಿಸುವವರಲ್ಲಿ ಕೆಲವರ ಬಳಿ ಡಿಎಲ್, ಇನ್ಸೂರೆನ್ಸ್ ಕೂಡ ಇರುವುದಿಲ್ಲ. ಸಾರ್ವಜನಿಕರ ಸಮಯದ ಉಳಿತಾಯದ ಸಲುವಾಗಿ ಬೇಕಾಬಿಟ್ಟಿ ವಾಹನ ತಪಾಸಣೆ ಮಾಡಿ ಸಮಯ ವ್ಯರ್ಥ ಮಾಡಬಾರದೆಂದು ನೀಡಿದ ಸೂಚನೆಯನ್ನೇ ತಪ್ಪಾಗಿ ಗ್ರಹಿಸಿರುವ ಸವಾರರು ಭಾರತೀಯ ಮೋಟಾರ್ ವಾಹನ ಕಾಯ್ದೆ ಅನ್ವಯ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಡದೆ ವಾಗ್ವಾದ ನಡೆಸುತ್ತಿದ್ದಾರೆ ಎಂದು ಸಂಚಾರಿ ಪೊಲೀಸರು ತೀವ್ರ ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಅನುಮಾನಾಸ್ಪದ ವ್ಯಕ್ತಿಗಳ ವಾಹನ ಮತ್ತು ಸಂಚಾರ ನಿಯಮ ಉಲ್ಲಂಘನೆಯ ವಾಹನಗಳನ್ನು ನಿಲ್ಲಿಸಬಾರದೆಂದು ಎಲ್ಲಿಯೂ ಹೇಳಿಲ್ಲ ಎಂಬುದನ್ನು ಸಾರ್ವಜನಿಕರು ಅರ್ಥ ಮಾಡಿಕೊಳ್ಳ ಬೇಕಿದೆ. ಚಾಲಕನು ಸೀಟ್ ಬೆಲ್ಟ್ ಧರಿಸದೆ ಇದ್ದಾಗ, ಬೈಕ್ ಸವಾರರು ಹೆಲ್ಮೆಟ್ ಧರಿಸದೆ ಇದ್ದಾಗ, ಸೈಡ್ ಮಿರರ್ ಅಳವಡಿಸದಿದ್ದಾಗ, ಟಿಂಟೆಡ್ ಗ್ಲಾಸ್ ಅಳವಡಿಸಿದ್ದರೆ, ಕರ್ಕಶ ಆರ್ನ್ ಅಳವಡಿಸಿಕೊಂಡು ಚಲಿಸುತ್ತಿದ್ದಾಗ, ತ್ರಿಬಲ್ ರೈಡಿಂಗ್, ವಾಹನದ ಸಾಮರ್ಥ್ಯಕ್ಕಿಂತ ಹೆಚ್ಚಿನ ಪ್ರಯಾಣಿಕರನ್ನು ಸಾಗಿಸುತ್ತಿದ್ದಾಗ, ಡಿಫೆಕ್ಟಿವ್ ಸೈಲೆನ್ಸರ್ ಅಳವಡಿಸಿಕೊಂಡಿದ್ದರೆ, ದೋಷಪೂರಿತ ನಂಬರ್ ಪ್ಲೇಟ್ ಅಳವಡಿಸಿದ್ದರೆ, ಕುಡಿದು ವಾಹನ ಚಾಲನೆ ಮಾಡುವುದು, ರ್‍ಯಾಶ್ ಅಂಡ್ ನೆಗ್ಲಿಜೆನ್ಸಿ ಡ್ರೈವಿಂಗ್ ಹಾಗೂ ಅನುಮಾನಾಸ್ಪದ ವ್ಯಕ್ತಿಗಳು ಹಾಗೂ ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸುತ್ತಿದ್ದರೆ ಅಂತಹವರನ್ನು ತಪಾಸಣೆ ಮಾಡಲೇ ಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

ಯಾವುದೇ ಸಂಚಾರ ನಿಯಮ ಉಲ್ಲಂಘನೆಯನ್ನು ಮಾಡದಿದ್ದ ವಾಹನಗಳನ್ನು ಕೇವಲ ವಾಹನದ ದಾಖಲಾತಿಗಳನ್ನು ಪರಿಶೀಲಿಸುವ ಸಲುವಾಗಿ ನಿಲ್ಲಿಸಬಾರದೆಂದು ನಿರ್ದೇಶನ ನೀಡಿದರೆ, ಕೆಲವು ವಾಹನ ಚಾಲಕರು ಮಾಹಿತಿ ಸಂಪೂರ್ಣವಾಗಿ ತಿಳಿದುಕೊಳ್ಳದೆ ಸಂಚಾರ ನಿಯಮ ಉಲ್ಲಂಘಿಸಿ ವಾಗ್ವಾದಕ್ಕೆ ಇಳಿಯುತ್ತಿರುವುದು ಈಗ ಸಾಮಾನ್ಯವಾಗಿದೆ. ಆದರೆ ಇಂಥಹ ವಾಹನ ಚಾಲಕರ ವಿರುದ್ಧ ಹೆಚ್ಚಿನ ಕ್ರಮ ಕೈಗೊಳ್ಳಬಹುದು ಎಂಬುದನ್ನು ಚಾಲಕರು ಮತ್ತು ಸವಾರರು ಅರಿಯಬೇಕು. ಯಾವುದೇ ಸರ್ಕಾರಿ ನೌಕರನ ಕರ್ತವ್ಯಕ್ಕೆ ಅನಗತ್ಯವಾಗಿ ಅಡ್ಡಿಪಡಿಸಿದರೆ ಭಾರತೀಯ ದಂಡ ಸಂಹಿತೆಯ ಪ್ರಕಾರ ಕರ್ತವ್ಯಕ್ಕೆ ಅಡ್ಡಿಪಡಿಸಿದ ವ್ಯಕ್ತಿಯ ಮೇಲೆ ಕೇಸ್ ದಾಖಲಿಸಿ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ ಎಂಬುದನ್ನು ತಿಳಿದುಕೊಳ್ಳಬೇಕಿದೆ ಎಂದಿದ್ದಾರೆ.

ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸ: ರಸ್ತೆ ಮಧ್ಯದಲ್ಲಿ ನಿಂತು ವಾಯು ಮತ್ತು ಶಬ್ದ ಮಾಲಿನ್ಯವನ್ನು ಸಹಿಸಿಕೊಂಡು ಕರ್ತವ್ಯ ನಿರ್ವಹಿಸುವ ಪೊಲೀಸರ ಆತ್ಮಸ್ಥೈರ್ಯವನ್ನು ಕುಗ್ಗಿಸುವ ಕೆಲಸ ಮಾಡಲಾಗುತ್ತಿದೆ. ಆದ್ದರಿಂದ ವಾಹನ ಸವಾರರು ವಾಗ್ವಾದಕ್ಕಿಳಿಯುವ ಬದಲು ತಮ್ಮ ಸುರಕ್ಷತೆಯ ಪ್ರಯಾಣದ ಸಲುವಾಗಿ ಸಂಚಾರ ನಿಯಮಗಳನ್ನು ಪಾಲಿಸಿ ಪೊಲೀಸರೊಂದಿಗೆ ಸಹಕರಿಸಬೇಕು ಎಂದು ಪೊಲೀಸ್ ಸಿಬ್ಬಂದಿ ಮನವಿ ಮಾಡಿದ್ದಾರೆ.

ನಾಳೆ 'ಮೆದುಳಿನ ಸ್ಟ್ರೋಕ್ ಘಟಕ' ಉದ್ಘಾಟನೆ

ಮೈಸೂರು, ಜು.26(ಎಂಕೆ)– ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯಲ್ಲಿ ಜು.28ರಂದು 'ಮೆದುಳಿನ ಸ್ಟ್ರೋಕ್ ಘಟಕ' ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಅಂದು ಸಂಜೆ 4 ಗಂಟೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಉದ್ಘಾಟಿಸಲಿದ್ದು, ಶಾಸಕ ಸಾ.ರಾ.ಮಹೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸುಯೋಗ್ ಆಸ್ಪತ್ರೆ ಮುಖ್ಯಸ್ಥ ಡಾ.ಯೋಗಣ್ಣ, ನ್ಯೂರೋ ಸರ್ಜನ್ ಡಾ.ರಾಜೇಶ್, ನರರೋಗ ತಜ್ಞ ಡಾ.ಸುಹಾಸ್, ಮೆದುಳು ಸ್ಟ್ರೋಕ್ ತಜ್ಞೆ ಡಾ.ರೂಪ ಭಾಗವಹಿಸಲಿದ್ದಾರೆ.

ಮುಖ್ಯಮಂತ್ರಿ ಬೊಮ್ಮಾಯಿ ಆಡಳಿತಕ್ಕೆ ಒಂದು ವರ್ಷ: ಜು.28ರ ಜನೋತ್ಸವಕ್ಕೆ ಭರದ ಸಿದ್ಧತೆ!

ವಿಪಕ್ಷಗಳ ನಾಯಕರ ಹೇಳಿಕೆಗೆ ಆರೋಗ್ಯ ಸಚಿವ ಡಾ. ಸುಧಾಕರ್ ತಿರುಗೇಟು



ಬೆಂಗಳೂರು, ಜು.26(ಕೆಎಂಶಿ)– ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬಿಜೆಪಿಗೆ ಶಕ್ತಿ ಇಲ್ಲ ಎಂದು ಹೇಳುವ ಬೇರೆ ಪಕ್ಷದ ನಾಯಕರಿಗೆ, ಜುಲೈ 28 ರಂದು ನಡೆಯಲಿರುವ ಜನೋತ್ಸವ ಸಮಾವೇಶದಲ್ಲಿ ಉತ್ತರ ಸಿಗಲಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಸಚಿವರು, ಬಿಜೆಪಿ ಜನರಿಂದ ಮೇಲೆ ಬಂದಿರುವ ಪಕ್ಷ. ಜನರಿಗೋಸ್ಕರ ಕೆಲಸ ಮಾಡುತ್ತಿದೆ. ಆಡಳಿತಕ್ಕೆ ಬಂದು 3 ವರ್ಷವಾಗಿದೆ. ಕೋವಿಡ್ ಕಾರಣದಿಂದ ಕಳೆದ 2 ವರ್ಷಗಳಲ್ಲಿ ಯಾವುದೇ ಕಾರ್ಯಕ್ರಮ ನಡೆಸಲು ಸಾಧ್ಯವಾಗಿಲ್ಲ. ಈಗ ಬಸವರಾಜ ಬೊಮ್ಮಾಯಿಯವರು ಸಿಎಂ ಆಗಿ ಒಂದು ವರ್ಷವಾದ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಂಡಿದ್ದೇವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ನೆರವು ಪಡೆದ ಲಕ್ಷಾಂತರ ಫಲಾನುಭವಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಲಕ್ಷಾಂತರ ಕಾರ್ಯಕರ್ತರು ಪಕ್ಷ ಹಾಗೂ ಸರ್ಕಾರದ ಕಾರ್ಯವೈಖರಿಯನ್ನು ಮೆಚ್ಚಿ ಸಂದೇಶ ಕಳುಹಿಸಲಿದ್ದಾರೆ ಎಂದು ತಿಳಿಸಿದರು.

ಯಾವುದೇ ಒಂದು ಸಮುದಾಯದಿಂದ ಒಬ್ಬರು ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲ. ಸಮುದಾಯದ ಒಟ್ಟಾರೆ ಅಭಿಪ್ರಾಯ ಇರಬೇಕು. ಉಳಿದ ಸಮುದಾಯಗಳ ವಿಶ್ವಾಸ ಗಳಿಸಬೇಕು. ಜನರ ನಾಯಕತ್ವದ ಮೇಲೆ ನಂಬಿಕೆ ಇಟ್ಟವರು ಮಾತ್ರ ಮುಖ್ಯಮಂತ್ರಿಯಾಗಬಹುದು. ಯಾವುದೇ ಸಮುದಾಯಕ್ಕೆ ನೋವಾಗುವ ರೀತಿಯಲ್ಲಿ ಹೇಳಿಕೆ ನೀಡುವುದು ಪ್ರಜಾಪ್ರಭುತ್ವದಲ್ಲಿ ಸರಿಯಲ್ಲ. ಸಚಿವರಾಗಿ ಅನುಭವವಿದ್ದಂತಹ ಜಮೀರ್ ಅಹ್ಮದ್‌ರಿಂದ ಒಕ್ಕಲಿಗರಿಗೆ ನೋವಾಗುವಂತಹ ಮಾತನ್ನು ನಿರೀಕ್ಷೆ ಮಾಡಿರಲಿಲ್ಲ. ರಾಜಕಾರಣಿಗಳು ಮಾತನಾಡುವ ಮುನ್ನ ಯೋಚನೆ ಮಾಡಿ ಮಾತನಾಡಬೇಕು ಎಂದು ಹೇಳಿದರು.

ಒಕ್ಕಲಿಗ ಸಮುದಾಯ ಕೃಷಿಕರ ಸಮುದಾಯ. ಕೃಷಿಕರು ದೇಶದ ಬೆನ್ನೆಲುಬು. ಈ ಸಮುದಾಯ ಎಲ್ಲಾ ಸಮುದಾಯಗಳ ಜೊತೆ ಒಳ್ಳೆಯ ವಿಶ್ವಾಸ ಇಟ್ಟುಕೊಂಡು, ಗ್ರಾಮೀಣ ಪ್ರದೇಶಗಳಲ್ಲಿ ಒಳ್ಳೆಯ ವಾತಾವರಣ ನಿರ್ಮಾಣ ಮಾಡಿದೆ. ಕಾಯಕವನ್ನೇ ನಂಬಿರುವ ಸಮುದಾಯವಿದು. ಜಮೀರ್ ಹೇಳಿಕೆಯಿಂದ ಅವರಿಗೆ ಹಾಗೂ ಅವರ ಪಕ್ಷಕ್ಕೆ ಹೆಚ್ಚು ನಷ್ಟವಾಗುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಚಾರಣೆ ವೇಳೆ ಬಾಯಿ ಬಡಿದುಕೊಂಡರೂ ಪ್ರಯೋಜನ ಆಗಲಿಲ್ಲ. ಈಗ ಮೌನಕ್ಕೆ ಶರಣಾಗಿದ್ದಾರೆ. 54 ವರ್ಷ ಆಡಳಿತ ಮಾಡಿದ್ದ ಕಾಂಗ್ರೆಸ್ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡಿಲ್ವಾ? ಆಗ ಎಲ್ಲವೂ ಸರಿ ಇತ್ತು ಅನ್ನುವವರು ಈಗೇಕೆ ಸಂದೇಹ ಪಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಪ್ರಧಾನಿ ನರೇಂದ್ರ ಮೋದಿಯವರು ಗುಜರಾತ್ ಮುಖ್ಯಮಂತ್ರಿಗಳಾಗಿದ್ದಾಗಲೇ 8–10 ಗಂಟೆಗಳ ಕಾಲ ವಿಚಾರಣೆ ಎದುರಿಸಿದ್ದರು. ಅಮಿತ್ ಶಾ ಅವರನ್ನು ಗಡಿಪಾರು ಮಾಡಲಾಗಿತ್ತು. ಕಾಂಗ್ರೆಸ್‌ನ ದ್ವಿಮುಖ ನೀತಿಯನ್ನು ಜನರು ಒಪ್ಪಿಕೊಳ್ಳುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದವರು ಮಾತ್ರ ತನಿಖೆ, ವಿಚಾರಣೆಗೆ ಸಹಕರಿಸುತ್ತಾರೆ. ಒಂದು ವೇಳೆ ನ್ಯಾಯ ಸಿಕ್ಕಿಲ್ಲ ಎಂದರೆ ಕೋರ್ಟ್ ವ್ಯವಸ್ಥೆ ನಮ್ಮ ದೇಶದಲ್ಲಿದೆ ಎಂದು ಕಾಂಗ್ರೆಸ್ ಪ್ರತಿಭಟನೆಯ ಬಗ್ಗೆ ಕಿಡಿಕಾರಿದರು.

ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ವೈದ್ಯರ ದಿನಾಚರಣೆ



ಮೈಸೂರು, ಜು.26– ಕೆ.ಆರ್.ಆಸ್ಪತ್ರೆ ಆವರಣದಲ್ಲಿರುವ ನೆಫ್ರೋ ಯುರಾಲಜಿ ಸಂಸ್ಥೆಗೆ ಸ್ಯಾನಿಟೋರಿಯಂ ಆವರಣದಲ್ಲಿ 3 ರಿಂದ 5 ಎಕರೆ ಜಾಗವನ್ನು ಹೊಸ ಆಸ್ಪತ್ರೆ ನಿರ್ಮಾಣಕ್ಕೆ ಕೇಳಿದ್ದಾರೆ. ನಾನು ಸರ್ಕಾರದ ಗಮನಕ್ಕೆ ತಂದು ಭೂಮಿ ಕೊಡಿಸಲು ಪ್ರಯತ್ನ ಮಾಡುವುದಾಗಿ ವಿಧಾನಪರಿಷತ್ ಸದಸ್ಯ ಅಡಗೂರು ವಿಶ್ವನಾಥ್ ತಿಳಿಸಿದರು.

ನೆಫ್ರೋಯುರಾಲಜಿ ಸಂಸ್ಥೆಯಲ್ಲಿ ನಡೆದ ವೈದ್ಯರ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು 'ವೈದ್ಯೋ ನಾರಾಯಣೋ ಹರಿ' ಎಂಬಂತೆ ವೈದ್ಯರು ದೇವರಿಗೆ ಸಮಾನ. ಅವರು ಸಾವಿರಾರು ಜನರ ಆರೋಗ್ಯವನ್ನು ಕಾಪಾಡುತ್ತಾರೆ. ಅವರ ಆರೋಗ್ಯವನ್ನು ಚೆನ್ನಾಗಿ ನೋಡಿಕೊಂಡು ಆಸ್ಪತ್ರೆಗೆ ಬರುವ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡಬೇಕು ಎಂದು ಮನವಿ ಮಾಡಿದರು.

ನೆಫ್ರೋಯುರಾಲಜಿ ಸಂಸ್ಥೆಯ ನಿರ್ದೇಶಕರಾದ ಡಾ॥ ಆರ್. ಕೇಶವ ಮೂರ್ತಿ ಮಾತನಾಡಿ ಆಂಬುಲೆನ್ಸ್ ಇಲ್ಲದೆ ರೋಗಿಗಳಿಗೆ ತೊಂದರೆಯಾಗಿತ್ತು. ರಾತ್ರಿ ಪಾಳೆಯದಲ್ಲಿ ಡಯಾಲಿಸಿಸ್ ರೋಗಿಗಳು ದೂರದ ಊರಿಗೆ ಹೋಗಬೇಕಾಗಿತ್ತು ಹಾಗೂ ಹೆಚ್ಚು ಸುಸ್ತಾಗಿರುವ ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗಳಿಗೆ ಸಾಗಿಸಲು ಅನುಕೂಲವಾಗುವಂತೆ ಆಂಬುಲೆನ್ಸ್ ಅನ್ನು ಕೊಡುಗೆಯಾಗಿ ನೀಡಿದ್ದಕ್ಕೆ ಅಡಗೂರು ವಿಶ್ವನಾಥ್‌ರವರಿಗೆ ಧನ್ಯವಾದ ತಿಳಿಸಿದರು.

ಮೈಸೂರಲ್ಲಿ ಸಂತ ಅನ್ನಮ್ಮನ ದೇವಾಲಯದ ವಾರ್ಷಿಕೋತ್ಸವ

ಮೈಸೂರು, ಜು.26(ಆರ್‌ಕೆ)–ಮೈಸೂರಿನ ಗಾಂಧಿನಗರದ ಅನ್ನಮ್ಮಪುರಂನಲ್ಲಿ ಇಂದು ಸಂತ ಅನ್ನಮ್ಮನ ದೇವಾಲಯದ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.



ಇಂದು ಬೆಳಗ್ಗೆ ದೇವಾಲಯದಲ್ಲಿ ಗುರುಗಳಾದ ಫಾದರ್ ಸ್ಟಾನಿಡಿ ಆಲ್ಮೇಡಾ, ಫಾದರ್ ಪ್ರವೀಣ್ ಹಾಗೂ ಫಾದರ್ ಸ್ಟ್ಯಾನ್ಲಿ ಅವರ ಸಮ್ಮುಖದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಿತು. 500ಕ್ಕೂ ಹೆಚ್ಚು ಭಕ್ತರು ಗಾಯನ ಬಲಿಪೂಜೆಯಲ್ಲಿ ಭಾಗವಹಿಸಿದ್ದರು. ಸಂಜೆ 5 ಗಂಟೆಗೆ ಸೆಂಟ್ ಫಿಲೋಮಿನಾ ಚರ್ಚ್‌ನಿಂದ ಲೂರ್ದನಗರ ಮಾರ್ಗವಾಗಿ ಎಫ್‌ಟಿಎಸ್ ಸರ್ಕಲ್ ಮೂಲಕ ಸಂತ ಅನ್ನಮ್ಮನವರ ಉತ್ಸವ ಮೂರ್ತಿಯ ಮೆರವಣಿಗೆ ದೇವಾಲಯದಲ್ಲಿ ಅಂತ್ಯವಾಯಿತು. ವಾರ್ಷಿಕೋತ್ಸವ ಸಮಿತಿ ಅಧ್ಯಕ್ಷ ಎ.ಸುಸೈರಾಜ್, ಕಾರ್ಯದರ್ಶಿ ಆರೋಕ್ಯದಾಸ್, ವಿಲ್ಫ್ರೆಡ್, ಸಂದೀಪ್, ಅರ್ಜುನ, ಸಂದೇಶ್, ಪ್ರವೀಣ್, ಮೇರಿ ಐರಿನ್, ಹೆನ್ನಿಮೋಸೆಸ್, ಗಬ್ರಿಲ್, ಜೈಮೇರಿ, ರಾಬರ್ಟ್, ಜಾನ್‌ಪಾಲ್, ಆರಿಟಾ ಸೇರಿದಂತೆ ನೂರಾರು ಮಂದಿ ಉತ್ಸವದಲ್ಲಿ ಭಾಗವಹಿಸಿದ್ದರು.



ಕೆಂಚೇಗೌಡ ನಿಧನ

ಮೈಸೂರು, ಜು.26– ಮೈಸೂರಿನ ಬೋಗಾದಿಯ ಮಾರಿಗುಡಿ ಬೀದಿಯ ನಿವಾಸಿ ಕೆಂಚೇಗೌಡ (95) ಮಂಗಳವಾರ ರಾತ್ರಿ ನಿಧನರಾದರು. ಮೃತರು ಪತ್ನಿ ನಿಂಗಮ್ಮ, ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12ಗಂಟೆಗೆ ಬೋಗಾದಿಯ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲ ತಿಳಿಸಿದೆ.

ಪಾಲಹಳ್ಳಿ ಗ್ರಾಪಂನಲ್ಲಿ ಸಾಮಾಜಿಕ ಪರಿಶೋಧನಾ ಸಭೆ



ಶ್ರೀರಂಗಪಟ್ಟಣ, ಜು.26– ತಾಲೂಕಿನ ಪಾಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2021–22ನೇ ಸಾಲಿನ ಸಾಮಾಜಿಕ ಪರಿಶೋಧನೆ ಸಭೆಯು ತಾಲೂಕಿನ ಸಹಾಯಕ ನಿರ್ದೇಶಕ ಮಂಜೇಗೌಡ ಅವರು ಅಧ್ಯಕ್ಷತೆಯಲ್ಲಿ ನಡೆಯಿತು.

ಈ ವೇಳೆ ಪಂಚಾಯಿತಿ ವ್ಯಾಪ್ತಿಯಲ್ಲಿ ಅ.1, 2021ರಿಂದ ಮಾ.31, 2022ರವರೆಗೆ ಅನುಷ್ಠಾನವಾಗಿರುವ ಕಾಮಗಾರಿಗಳ ಮಾಹಿತಿ ಸಲ್ಲಿಸಲಾಯಿತು. ಕೆಲವು ಇಲಾಖೆಗಳ ಅಧಿಕಾರಿಗಳು ಹಾಜರಿಲ್ಲದ ಕಾರಣ ಹಿರಿಯ ರೈತ ಮುಖಂಡರಾದ ಪಾಲಹಳ್ಳಿ ಶ್ರೀನಿವಾಸ್ ಆಕ್ಷೇಪ ವ್ಯಕ್ತಪಡಿಸಿದರು. ಬೆಂಗಳೂರು– ಮೈಸೂರಿನ ನಡುವೆ ಸಂಚರಿಸುತ್ತಿರುವ ಡೆಮೋ ರೈಲು ನಿಲ್ಲಿಸುವುದಕ್ಕೆ ಮನವಿ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷೆ ಕಲಾ, ಉಪಾಧ್ಯಕ್ಷ ನವೀನ್‌ಕುಮಾರ್, ತಾಲೂಕು ಸಂಯೋಜಕಿ ರೂಪಾ, ಪಿಡಿಓ ಆರ್.ರವಿ, ಸದಸ್ಯರಾದ ದಿನೇಶ್, ಪ್ರಕಾಶ್, ರಾಮಕೃಷ್ಣ, ರಘು, ಧನಲಕ್ಷ್ಮೀ, ಜಯಲಕ್ಷ್ಮೀ, ಅಕ್ಷತಾ ಇದ್ದರು.

ನಾಗಮಂಗಲ ತಾಲೂಕಿನ ಆದಿಚುಂಚನಗಿರಿಯಲ್ಲಿ ಕಂದಾಯ ದಿನಾಚರಣೆ

ರೈತರ ಕಷ್ಟಕ್ಕೆ ಸ್ಪಂದಿಸಿ, ಅವರ ಸಂಕಟ ನಿವಾರಿಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಸೂಚನೆ



ನಾಗಮಂಗಲ, ಜು.26– ಕಂದಾಯ ಇಲಾಖೆ ಎಲ್ಲಾ ಇಲಾಖೆಗಳಿಗೂ ಮಾತೃ ಇಲಾಖೆ ಇದ್ದಂತೆ. ಇಲ್ಲಿ ಕೆಲಸ ಮಾಡುವ ಅಧಿಕಾರಿಗಳು ರೈತರ ಕಷ್ಟಗಳಿಗೆ ಸ್ಪಂದಿಸಿ ಕೆಲಸ ಮಾಡಬೇಕು ಎಂದು ಜಿಲ್ಲಾ ಉಸ್ತುವಾರಿ ಮತ್ತು ಅಬಕಾರಿ ಸಚಿವ ಕೆ.ಗೋಪಾಲಯ್ಯ ಸೂಚಿಸಿದರು.

ತಾಲೂಕಿನ ಆದಿಚುಂಚನಗಿರಿಯಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಸರ್ಕಾರಿ ಕಂದಾಯ ಇಲಾಖಾ ನೌಕರರ ಸಂಘ ಬೆಂಗಳೂರು, ಕರ್ನಾಟಕ ರಾಜ್ಯ ಗ್ರಾಮ ಲೆಕ್ಕಾಧಿಕಾರಿಗಳ ಸಂಘ ಬೆಂಗಳೂರು ಮತು ಕರ್ನಾಟಕ ರಾಜ್ಯ ಗ್ರಾಮ ಸಹಾಯಕರ ಸಂಘ ಬೆಂಗಳೂರು ಇವರ ಸಹಯೋಗದಲ್ಲಿ ನಡೆದ ಕಂದಾಯ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. 1951 ರಲ್ಲಿ ಕಂದಾಯ ಇಲಾಖೆ ವಿಭಜನೆಗೊಂಡು ಹಲವು ಇಲಾಖೆಗಳಿಗೆ ಹಸ್ತಾಂತರವಾದ ನಂತರ ತನ್ನ ಮಾತೃ ಸ್ವರೂಪವನ್ನು ಕಳೆದುಕೊಂಡಿದೆ. ಸಾರ್ವಜನಿಕರಿಗೆ ಮತ್ತು ರೈತರಿಗೆ ತುಂಬಾ ಹತ್ತಿರವಿರುವ ಇಲಾಖೆ ಎಂದರೆ ಕಂದಾಯ ಇಲಾಖೆ. ಇಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮತ್ತು ನೌಕರರಿಗೆ ಸಾಕಷ್ಟು ಸವಾಲುಗಳಿವೆ. ನೀವ್ಯಾರೂ ಜೀವನ ಪರ್ಯಂತ ಇಲಾಖೆಗಳಲ್ಲಿ ಇರುವುದಿಲ್ಲ. ಇರುವಷ್ಟು ದಿನ ಪ್ರತೀ ಹಳ್ಳಿಗಳಿಗೆ ಭೇಟಿ ನೀಡಿ ರೈತರ ಸಮಸ್ಯೆ ಗುರುತಿಸಿ ಬಗೆಹರಿಸಬೇಕು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ಕಂದಾಯ ಇಲಾಖಾ ನೌಕರರ ಸಂಘದ ಅಧ್ಯಕ್ಷ ಎಸ್.ಕೃಷ್ಣಮೂರ್ತಿ ಮಾತನಾಡಿ, ಮಂಡ್ಯ ಜಿಲ್ಲೆಯಲ್ಲಿ ಬ್ರಿಟೀಷರ ಕಾಲದ ಆಳ್ವಿಕೆಯಲ್ಲಿ ರೂಪುಗೊಂಡ ಹೋಬಳಿಗಳು ಈಗಲೂ ಇವೆ. ಇವುಗಳನ್ನು ಚಿಕ್ಕದಾಗಿಸಿಕೊಳ್ಳುವ ಅವಶ್ಯಕತೆ ಇದ್ದು, ಆ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ರಾತ್ರಿ ಪಾಳಯಕ್ಕೆ ಗ್ರಾಮ ಸಹಾಯಕರನ್ನು ನೇಮಕ ಮಾಡದಂತೆ ಸರ್ಕಾರವನ್ನು ಒತ್ತಾಯಿಸಿದರು.

> ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುವುದೇ ನಮ್ಮ ಸೌಭಾಗ್ಯ. ಕಂದಾಯ ಇಲಾಖೆ ಸ್ವಾತಂತ್ರ್ಯ ನಂತರವಷ್ಟೇ ಅಲ್ಲ, ಸ್ವಾತಂತ್ರ್ಯ ಪೂರ್ವದಲ್ಲೂ ಅಸ್ತಿತ್ವದಲ್ಲಿತ್ತು. ಬ್ರಿಟೀಷರು, ಮೊಘಲರು ಮತ್ತು ರಾಜ ಮಹಾರಾಜರ ಕಾಲದಿಂದಲೂ ಇಲಾಖೆ ಅಸ್ತಿತ್ವದಲ್ಲಿದ್ದು, ಇಲಾಖೆಯ ನೌಕರರು ಜವಾಬ್ದಾರಿ ವಹಿಸಿ ಕೆಲಸ ಮಾಡಬೇಕು. - ಅಶ್ವಥಿ, ಜಿಲ್ಲಾಧಿಕಾರಿ.

ಆದಿಚುಂಚನಗಿರಿಯ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ವಿ.ಆರ್.ಶೈಲಜಾ, ಪಾಂಡವಪುರ ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ, ಮಂಡ್ಯ ಉಪವಿಭಾಗಾಧಿಕಾರಿ ಆರ್.ಐಶ್ವರ್ಯ, ಮದ್ದೂರು ತಹಸೀಲ್ದಾರ್ ಟಿ.ಎನ್.ನರಸಿಂಹಮೂರ್ತಿ, ನಾಗಮಂಗಲ ತಹಸೀಲ್ದಾರ್ ನಂದೀಶ್, ಶ್ರೀರಂಗಪಟ್ಟಣ ತಹಸೀಲ್ದಾರ್ ಎನ್.ಶ್ವೇತಾ, ಪಾಂಡವಪುರ ತಹಸೀಲ್ದಾರ್ ಎಸ್.ಎಲ್.ನಯನಾ, ಮಳವಳ್ಳಿ ತಹಸೀಲ್ದಾರ್ ವಿಜಿಯಣ್ಣ, ಮಂಡ್ಯ ತಹಸೀಲ್ದಾರ್ ಕುಂಜಿ ಅಹಮದ್, ಕೆ.ಆರ್.ಪೇಟೆ ತಹಸೀಲ್ದಾರ್ ಎಂ.ವಿ.ರೂಪಾ, ಕೆಂ.ಎಂ.ಸ್ವಾಮೀಗೌಡ ಇದ್ದರು.

ವಿಜೃಂಭಣೆಯ ಕಿಕ್ಕೇರಮ್ಮ ಹಬ್ಬ



ಕಿಕ್ಕೇರಿ, ಜು.26– ಪಟ್ಟಣದ ಗ್ರಾಮ ದೇವತೆ ಕಿಕ್ಕೇರಮ್ಮನವರ ಹಬ್ಬ ವಿಜೃಂಭಣೆಯಿಂದ ನೆರವೇರಿತು. ಕೊರೊನಾ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ಸರಳವಾಗಿ ಆಚರಿಸಲಾಗಿದ್ದ ಹಬ್ಬವನ್ನು ಈ ಬಾರಿ ಸಂಭ್ರಮದಿಂದ ಆಚರಿಸಲಾಯಿತು.

ಹಬ್ಬದ ಅಂಗವಾಗಿ ಗ್ರಾಮದ ತುಂಬೆಲ್ಲಾ ಸಡಗರ, ಸಂಭ್ರಮ ಮನೆ ಮಾಡಿತ್ತು. ಮಕ್ಕಳು, ಯುವಕರು, ಯುವತಿಯರು, ಮಹಿಳೆಯರು, ಹಿರಿಯರು ಸಂಭ್ರಮದಲ್ಲಿ ಪಾಲ್ಗೊಂಡಿದ್ದರು.

ಗ್ರಾಮದಲ್ಲಿ ಮಹಿಳೆಯರು ತಂಬಿಟ್ಟಿನ ಹೂವಿನ ಮಡೆ ಆರತಿ ಹೊತ್ತು ಮೆರವಣಿಗೆಯಲ್ಲಿ ಸಾಗಿದರು. ಬಸವಣ್ಣ ಗುಡಿ, ರಥ ಬೀದಿ ಮೂಲಕ ಸಾಗಿದ ಮೆರವಣಿಗೆಯೂ ಗ್ರಾಮದ ಹೊರವಲಯದಲ್ಲಿರುವ ಕಿಕ್ಕೇರಮ್ಮ ಗುಡಿಯ ಬಳಿ ಸಂಪನ್ನವಾಯಿತು. ಮಡೆ ಆರತಿಯನ್ನು ಶುಭ್ರವಾದ ಮಡಿ ಬಟ್ಟೆಯ ಮೇಲೆ ಇಡಲಾಯಿತು. ದೇಗುಲದ ಆಗ್ನೇಯ ಭಾಗದಲ್ಲಿ ದೇವಿಯ ಗದ್ದುಗೆ ನಿರ್ಮಿಸಿ ಹೂವಿನಿಂದ ಶೃಂಗರಿಸಲಾಗಿತ್ತು. ಕುಂಕುಮ, ಅರಿಶಿನವನ್ನು ಗದ್ದುಗೆ ಹಚ್ಚಿ ಹಣ್ಣು, ಕಾಯಿ ಅರ್ಪಿಸಿ ಪೂಜಿಸಲಾಯಿತು. ಗ್ರಾಮದ ಮುಖಂಡರು, ಜನಪ್ರತಿನಿಧಿಗಳು ಭಾಗವಹಿಸಿದ್ದರು.

ಮುಸ್ಲಿಂರ ಪ್ರಾರ್ಥನಾ ಮಂದಿರಕ್ಕೆ ಭೂಮಿಪೂಜೆ



ಶ್ರೀರಂಗಪಟ್ಟಣ, ಜು.26– ತಾಲೂಕಿನ ಕೆ.ಶೆಟ್ಟಹಳ್ಳಿ ಗ್ರಾಮದಲ್ಲಿ ರೂ. 5ಲಕ್ಷ ವೆಚ್ಚದಡಿ ಮುಸ್ಲಿಂ ಸಮುದಾಯದ ಪ್ರಾರ್ಥನಾ ಮಂದಿರ ನಿರ್ಮಾಣಕ್ಕೆ ಶಾಸಕ ರವೀಂದ್ರ ಶ್ರೀಕಂಠಯ್ಯ ಭೂಮಿಪೂಜೆ ನೆರವೇರಿಸಿದರು.

ಇದೇ ವೇಳೆ ಮಾತನಾಡಿದ ಅವರು, ಹಿಂದೆ ಇದ್ದ ಪ್ರಾರ್ಥನಾ ಮಂದಿರವು ಶಿಥಿಲಾವಸ್ಥೆಯಲ್ಲಿದ್ದ ಕಾರಣ ನೂತನ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಈ ಸಂಬಂಧ ಮುಸ್ಲಿಂ ಮುಖಂಡರು ಹಲವಾರು ಬಾರಿ ಮನವಿ ಸಲ್ಲಿಸಿದ್ದು, ಆ ಸಮುದಾಯದ ಅನುಕೂಲಕ್ಕೆ ನೆರವು ನೀಡಲಾಗಿದೆ ಎಂದು ತಿಳಿಸಿದರು. ಪ್ರಾರ್ಥನಾ ಮಂದಿರಕ್ಕೆ ಅಗತ್ಯವಾದ ಮೂಲ ಸೌಲಭ್ಯ ಒದಗಿಸಿ ಕೊಡಲಾಗುವುದು ಎಂದು ಭರವಸೆ ನೀಡಿದ ಶಾಸಕರು, ಕ್ಷೇತ್ರದ ಶಾಸಕನಾಗಿ ಎಲ್ಲಾ ಸಮುದಾಯಗಳ ಒಳಿತಿಗಾಗಿ ಹಲವು ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದರು. ಈ ವೇಳೆ ಗ್ರಾಮಸ್ಥರು ಬಸ್ ನಿಲ್ದಾಣ ನಿರ್ಮಿಸುವಂತೆ ಒತ್ತಾಯಿಸಿದ ಹಿನ್ನೆಲೆಯಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆದು ಸರ್ಕಾರಿ ಜಾಗದಲ್ಲಿ ಶೀಘ್ರ ನಿಲ್ದಾಣ ನಿರ್ಮಿಸಲಾಗುವುದು ಎಂದು ಭರವಸೆ ನೀಡಿದರು.

ಇಂದು ವಿದ್ಯುತ್ ವ್ಯತ್ಯಯ

ಮದ್ದೂರು, ಜು.26– ಮದ್ದೂರು ಪಟ್ಟಣ ವ್ಯಾಪ್ತಿಯ ಬೆಂಗಳೂರು, ಮೈಸೂರು ಹೆದ್ದಾರಿ ತುರ್ತು ಕಾಮಗಾರಿ ಕೈಗೊಂಡಿರುವುದರಿಂದ ಜು.27ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ 11 ಕೆವಿ ಫೀಡರ್ ಎಫ್–2 ವಿಭಾಗದ ಹೆಚ್.ಕೆ.ವಿ. ನಗರ, ಲೀಲಾವತಿ ಬಡಾವಣೆ, ಎಳನೀರು ಮಾರುಕಟ್ಟೆ, ಎಫ್ –16 ಬಸವನಪುರ ಫೀಡರ್‌ನ ಗೆಜ್ಜಲಗೆರೆ, ಸಾದೊಳಲು, ಕುದರಗುಂಡಿ, ಕುದರಗುಂಡಿ ಕಾಲೋನಿ, ಎಫ್–13ರ ವಳಗೆರೆಹಳ್ಳಿ ಫೀಡರ್‌ನ ಚಾಮನಹಳ್ಳಿ, ದೇಶಹಳ್ಳಿ ಇನ್ನಿತರೆ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಸೆಸ್ಕ್ ಎಇಇ ರಮೇಶ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಡಿನ ಅಭಿವೃದ್ಧಿಗಾಗಿ ಮತ್ತೆ ಜೆಡಿಎಸ್ ಅಧಿಕಾರಕ್ಕೆ ತರಲು ಪ್ರಯತ್ನ: ಹೆಚ್‌ಡಿಕೆ

ಭಾರತೀನಗರ, ಜು.26– ನಾಡಿನ ಅಭಿವೃದ್ಧಿಗಾಗಿ ಮತ್ತೆ ಜೆಡಿಎಸ್ ಅಧಿಕಾರಕ್ಕೆ ತರಲು ಪ್ರಯತ್ನಿಸುತ್ತಿದ್ದೇನೆ ವಿನಃ ನನ್ನ ಸ್ವಾರ್ಥಕ್ಕಾಗಿ ಅಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.



ಇಲ್ಲಿನ ಶ್ರೀವೆಂಕಟೇಶ್ವರ ದೇವಾಲಯದ 48ನೇ ದಿನದ ಮಂಡಲ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನನ್ನ ಅಧಿಕಾರ ಅವಧಿಯಲ್ಲಿ ಯಾವುದೇ ದುರ್ಬಳಕೆಯಾಗದೆ ಜನರ ಸೇವೆ ಮಾಡಿದ್ದೇನೆ. ಈಗಿನ ಬಿಜೆಪಿ ಸರ್ಕಾರದಂತೆ ಶೇ. 40ರಷ್ಟು ಕಮಿಷನ್ ರಾಜಕಾರಣ ಮಾಡಿಲ್ಲ. ಜನರ ಸೇವೆಗಾಗಿ ರಾಜಕಾರಣ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ 5 ವರ್ಷ ಸರ್ಕಾರ ಅಧಿಕಾರಕ್ಕೆ ಬಂದರೆ ಉತ್ತಮ ಯೋಜನೆಗಳನ್ನು ಜಾರಿಗೆ ತಂದು ಬಡವರಿಗೆ ಅನುಕೂಲ ಕಲ್ಪಿಸುತ್ತೇನೆ ಎಂದರು.

ಮುಂದಿನ ದಿನಗಳಲ್ಲಿ 100 ದಿನ ಗ್ರಾಮ ವಾಸ್ತವ್ಯ ಕಾರ್ಯಕ್ರಮ ಹಮ್ಮಿಕೊಂಡು ತಾಲೂಕಿನಲ್ಲಿ ಒಂದು ದಿನಕ್ಕೆ ಎಷ್ಟು ಗ್ರಾಮಗಳನ್ನು ಭೇಟಿ ಮಾಡಬಹುದೋ ಅಷ್ಟು ಗ್ರಾಮಗಳಿಗೆ ತೆರಳಿ ಜನರ ಸಮಸ್ಯೆ ಆಲಿಸುತ್ತೇನೆ ಎಂದರು.

ಡಿ.ಸಿ.ತಮ್ಮಣ್ಣ ಅವರು ರಾಜಕೀಯ ನಿವೃತ್ತಿ ಹೊಂದುತ್ತೇನೆ ಎಂದಿದ್ದರು. ನಾನು ಈ ಚುನಾವಣೆಯಲ್ಲಿ ಸ್ಪರ್ಧೆ ಮಾಡಿ, ನಿವೃತ್ತಿ ಹೊಂದಬೇಡಿ ಎಂದು ಮನವಿ ಮಾಡಿಕೊಂಡೆ. ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿ ಜನರಿಗಾಗಿ ದುಡಿದಿದ್ದಾರೆ. ಜನರ ನಿರೀಕ್ಷೆಗಿಂತಲೂ ಹೆಚ್ಚು ಕೆಲಸ ಮಾಡಿದ್ದಾರೆ. ಮದ್ದೂರು ತಾಲೂಕಿನ ಅಭಿವೃದ್ಧಿಗೆ ಅತ್ಯಂತ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ರಾಜ್ಯದ 224 ಶಾಸಕರಲ್ಲಿ ಅಭಿವೃದ್ಧಿ ಕೆಲಸ ಬಂದಾಗ ಡಿ.ಸಿ.ತಮ್ಮಣ್ಣನವರೇ ಮೇಲುಗೈ ಸಾಧಿಸುತ್ತಾರೆ. ಮುಂದಿನ ದಿನಗಳಲ್ಲಿ ಇವರಿಗೆ ಹೆಚ್ಚಿನ ಮನ್ನಣೆಯನ್ನು ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಹಂಗರಹಳ್ಳಿ ವಿದ್ಯಾಚೌಡೇಶ್ವರಿ ಮಹಾಸಂಸ್ಥಾನ ಮಠದ ಶ್ರೀಬಾಲಮಂಜುನಾಥ ಸ್ವಾಮೀಜಿ, ಆದಿಚುಂಚನಗಿರಿ ಮಠದ ವಿಜಯನಗರ ಶಾಖೆಯ ಸೌಮ್ಯನಾಥ ಸ್ವಾಮೀಜಿ, ಮೇಲುಕೋಟೆ ಸ್ಥಾನಚಾರ್ಯರಾದ ಶ್ರೀನಿವಾಸ ನರಸಿಂಹನ್ ಗುರೂಜಿ, ಶಾಸಕ ಡಿ.ಸಿ.ತಮ್ಮಣ್ಣ, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಹೊನ್ನೇಗೌಡ, ಮಾದನಾಯಕನಹಳ್ಳಿ ರಾಜಣ್ಣ, ಎ.ಟಿ.ಬಲ್ಲೇಗೌಡ, ಕೂಳಗೆರೆ ಶೇಖರ್, ಚಿಕ್ಕತಿಮ್ಮೇಗೌಡ, ಟ್ರಸ್ಟ್‌ನ ಅಧ್ಯಕ್ಷ ಪೂಜೂರಿ ವೆಂಕಟೇಗೌಡ, ಕಾರ್ಯಾಧ್ಯಕ್ಷ ವೆಂಕಟೇಶ್, ಕಾರ್ಯದರ್ಶಿ ನಾಗಪ್ಪ ವೆಂಕಟೇಶ್, ಕೆಂಚೇಗೌಡರ ಶ್ರೀನಿವಾಸ್, ವಿಶ್ವ, ಅಣ್ಣೂರು ಸತೀಶ್, ಕಾಳಿಪ್ರಾಸದ್, ತರಕಾರಿ ರಾಮಲಿಂಗಣ್ಣ, ಕಾಡುಕೊತ್ತನಹಳ್ಳಿ ಶಿಕ್ಷಕ ಚಂದ್ರಶೇಖರ್, ಮಂಡ್ಯ ಗಿರಿಯಣ್ಣ, ರವಿ, ಬಿಳಿಯಪ್ಪ, ಚಿಕ್ಕಹೈದಣ್ಣ ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮದ ನಂತರ ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ ಅವರು ಶ್ರೀವೆಂಕಟೇಶ್ವರ ದೇವಾಲಯದ ಮಂಡಲ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ದೇವರ ಆಶೀರ್ವಾದ ಪಡೆದರು. ಈ ವೇಳೆ ಕಾಂಗ್ರೆಸ್ ಮುಖಂಡ ವಿನಯ್‌ರಾಮಕೃಷ್ಣ, ಗ್ರಾಪಂ ಅಧ್ಯಕ್ಷ ವಕ್ರತುಂಡ ವೆಂಕಟೇಶ್ ಇದ್ದರು.

ವಿಧಾನಸಭಾ ಚುನಾವಣೆಯಲ್ಲಿ ನಿಖಿಲ್ ಸ್ಪರ್ಧಿಸಲ್ಲ: ಹೆಚ್‌ಡಿಕೆ

ಮದ್ದೂರು, ಜು.26– ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದರು.



ಪಟ್ಟಣದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿಖಿಲ್ 30 ರಿಂದ 40 ಕ್ಷೇತ್ರದಲ್ಲಿ ಪಕ್ಷ ಸಂಘಟನೆ ಮಾಡುತ್ತಾರೆ. ಅವರು ಯಾವುದೇ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ ಎಂದು ತಿಳಿಸಿದರು.

ಇನ್ನು ಒಕ್ಕಲಿಗ ಸಮುದಾಯದಲ್ಲೇ ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ಎದುರಾಗಿರುವ ಹಿನ್ನೆಲೆಯಲ್ಲಿ ಯಾವುದೇ ಸರ್ಕಾರ ಅಧಿಕಾರಕ್ಕೆ ಬರಲು ರಾಜ್ಯದ ಜನತೆ ತೀರ್ಮಾನ ಮಾಡಬೇಕೆ ಹೊರತು ಯಾರೋ ತೀರ್ಮಾನ ಮಾಡೋದಲ್ಲ. ಮುಂದಿನ ದಿನಗಳಲ್ಲಿ ಎಲ್ಲದಕ್ಕೂ ಉತ್ತರ ಸಿಗಲಿದೆ ಎಂದರು. ಮದ್ದೂರು ಪಟ್ಟಣಕ್ಕೆ ಆಗಮಿಸಿದ ಮಾಜಿ ಸಿಎಂ ಕುಮಾರಸ್ವಾಮಿ ಅವರನ್ನು ಶಾಸಕ ಡಿ.ಸಿ.ತಮ್ಮಣ್ಣ ಮತ್ತು ಕಾರ್ಯಕರ್ತರು ಅಭಿನಂದಿಸಿದರು. ಈ ವೇಳೆ ಮುಖಂಡರಾದ ಮಾದನಾಯಕನಹಳ್ಳಿ ರಾಜಣ್ಣ, ಶೇಖರ್, ರಾಮಕೃಷ್ಣ, ಮಹೇಂದ್ರ, ರಾಮಣ್ಣ ಮಹೇಶ್, ರವಿಕುಮಾರ್ ಇತರರಿದ್ದರು.

ಜಿಲ್ಲೆಯಾದ್ಯಂತ ಕಾರ್ಗಿಲ್ ವಿಜಯ್ ದಿವಸ್ ಆಚರಣೆ

ಇತಿಹಾಸದ ಪುಟ ಸೇರಿದ ಕಾರ್ಗಿಲ್ ಯೋಧರ ಹೋರಾಟ: ನಿವೃತ್ತ ಮೇಜರ್ ವೆಂಕಟಗಿರಿ



ಮಡಿಕೇರಿ, ಜು.26– ಜನರಲ್ ತಿಮ್ಮಯ್ಯ ಮ್ಯೂಸಿಯಂನಲ್ಲಿರುವ ಅಮರ್ ಜವಾನ್ ಸ್ಮಾರಕಕ್ಕೆ ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ರೋಟರಿ ವುಡ್ಸ್ ವತಿಯಿಂದ ಭಾವಪೂರ್ಣ ಪುಷ್ಪ ನಮನ ಸಲ್ಲಿಸಲಾಯಿತು. ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಕೂಡ ಹಾಜರಿದ್ದು ಜಿಲ್ಲಾಡಳಿತದ ಪರವಾಗಿ ಹುತಾತ್ಮ ಯೋಧರಿಗೆ ಗೌರವ ಸಲ್ಲಿಸಿದರು.

ಊಹೆಗೂ ನಿಲುಕದ ಹೋರಾಟ: ರೋಟರಿ ವುಡ್ಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ನಿವೃತ್ತ ಮೇಜರ್ ವೆಂಕಟಗಿರಿ, ಕಾರ್ಗಿಲ್ ಸಮರ ಎಂಬುದು ಇತಿಹಾಸದ ಪುಟಗಳಲ್ಲಿ ಭಾರತೀಯ ಯೋಧರ ತ್ಯಾಗ, ಬಲಿದಾನದ ಪ್ರತೀಕವಾಗಿ ಅಚ್ಚಳಿಯದೇ ದಾಖಲಾಗಿದೆ. ಭಾರತೀಯ ಸೈನ್ಯದ ಕೆಳಹಂತದ ಯೋಧರ ಧೈರ್ಯ, ಶ್ರಮದ ಫಲವೇ ಕಾರ್ಗಿಲ್ ವಿಜಯವಾಗಿದ್ದು ಅನೇಕ ಯೋಧರಿಗೆ ಕಠಿಣ ಹವಾಮಾನ ಪರಿಸ್ಥಿತಿಯಲ್ಲಿ ದ್ರಾಸ್, ಕಾರ್ಗಿಲ್ ವಲಯಗಳನ್ನು ವಶಪಡಿಸಿಕೊಳ್ಳುವುದು ಕಷ್ಟಸಾಧ್ಯ. ಈ ನಿಟ್ಟಿನಲ್ಲಿ ಮುಂದುವರೆದದ್ದೇ ಆದಲ್ಲಿ ಖಂಡಿತಾ ಎತ್ತರದ ಬೆಟ್ಟದ ಮೇಲೆ ಠಿಕಾಣಿ ಹೂಡಿದ್ದ ಪಾಕಿಸ್ತಾನ ಸೈನಿಕರ ಗುಂಡಿಗೆ ಬಲಿಯಾಗುತ್ತೇವೆ ಎಂದು ಚೆನ್ನಾಗಿಯೇ ತಿಳಿದಿತ್ತು.

ಅಂದಿನ ವಾಜಪೇಯಿ ಸರ್ಕಾರ ಕೂಡ ಭಾರತೀಯ ಸೈನ್ಯಕ್ಕೆ ಎಲ್ಲಾ ರೀತಿಯ ಬೆಂಬಲ ನೀಡಿದ್ದು ಕೂಡ ಸ್ಮರಣಾರ್ಹ. ಅಂತೆಯೇ ಕಾರ್ಗಿಲ್ ಮೇಲೆ ಮತ್ತೆ ತಿರಂಗಾ ಹಾರಾಟ ಮಾಡಿದ ದಿನವಾದ ಜುಲೈ 26 ಅನ್ನು ದೇಶದೆಲ್ಲೆಡೆ ಕಾರ್ಗಿಲ್ ವಿಜಯ್ ದಿವಸ್ ಎಂದು ಆಚರಿಸುತ್ತಿರುವುದು ಕೂಡ ನಾಗರಿಕ ಸಮಾಜಕ್ಕೆ ಹೆಮ್ಮೆಯ ವಿಚಾರ ಎಂದು ವೆಂಕಟಗಿರಿ ಅಭಿಪ್ರಾಯಪಟ್ಟರು. ಇದೇ ಸಂದರ್ಭ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್, ಮೇಜರ್ ವೆಂಕಟಗಿರಿ ಅವರನ್ನು ರೋಟರಿ ವುಡ್ಸ್ ಪರವಾಗಿ ಸನ್ಮಾನಿಸಿ ಗೌರವಿಸಿದರು.

ಮಡಿಕೇರಿ ತಹಶೀಲ್ದಾರ್ ಮಹೇಶ್, ರೋಟರಿ ಉಪರಾಜ್ಯಪಾಲ ರತನ್ ತಮ್ಮಯ್ಯ, ರೋಟರಿ ಜಿಲ್ಲಾ ಪಬ್ಲಿಕ್ ಇಮೇಜ್ ಸಮಿತಿ ಅಧ್ಯಕ್ಷ ಅನಿಲ್ ಎಚ್.ಟಿ., ರೋಟರಿ ವುಡ್ಸ್ ಗೌರವ ಸಲಹೆಗಾರ ಮೋಹನ್ ಪ್ರಭು, ಜಿಲ್ಲಾ ಔಷಧಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಎ.ಕೆ.ಜೀವನ್, ಸರ್ವೋದಯ ಸಮಿತಿ ಅಧ್ಯಕ್ಷ ಅಂಬೆಕಲ್ ಕುಶಾಲಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರ ಸಹಾಯಕ ನಿರ್ದೇಶಕ ಚೆನ್ನಸ್ವಾಮಿ, ಅಧಿಕಾರಿ ಮಣಜೂರು ಮಂಜುನಾಥ್, ಸೇರಿದಂತೆ ರೋಟರಿ ವುಡ್ಸ್ ಸದಸ್ಯರು ಪಾಲ್ಗೊಂಡು ಹುತಾತ್ಮ ಸ್ಮಾರಕಕ್ಕೆ ಗೌರವ ನಮನ ಸಲ್ಲಿಸಿದರು.

ರಾಷ್ಟ್ರಧ್ವಜ ಹಾರಾಡಲಿ: ಕೊಡಗು ಜಿಲ್ಲಾ ಮಾಜಿ ಸೈನಿಕರ ಸಂಘದ ವತಿಯಿಂದ ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನದಲ್ಲಿನ ಅಮರ್ ಜವಾನ್ ಸ್ಮಾರಕದಲ್ಲಿ ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸಲಾಯಿತು. ಈ ಸಂದರ್ಭ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಅವರಿಗೆ ಮನವಿ ಸಲ್ಲಿಸಿದ ಸಂಘದ ಗೌರವ ಕಾರ್ಯದರ್ಶಿ ನಿವೃತ್ತ ಮೇಜರ್ ಓ.ಎಸ್. ಚಂಗಪ್ಪ, ಅಮರ್ ಜವಾನ್ ಸ್ಮಾರಕದಲ್ಲಿ ಭಾರತದ ರಾಷ್ಟ್ರಧ್ವಜ ನಿರಂತರವಾಗಿ ಹಾರಾಡುವಂತೆ ವ್ಯವಸ್ಥೆ ಕಲ್ಪಿಸಿ ಎಂದು ಕೋರಿದರು.

ಪ್ರತೀ ವರ್ಷ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮವನ್ನು ಜಿಲ್ಲಾಡಳಿತದ ವತಿಯಿಂದಲೇ ಆಚರಿಸುವಂತಾಗಬೇಕು ಎಂದೂ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಕೊಡಗು ಜಿಲ್ಲಾ ಮಾಜಿ ಸೈನಿಕರ ಸಂಘದ ಪ್ರಮುಖರಾದ ಸುಬೇದರ್ ಮೇಜರ್ ವಾಸಪ್ಪನ್, ಸುಬೇದಾರ್ ಮೇಜರ್ ಸೋಮಯ್ಯ, ಸುಬೇದಾರ್ ಸಂಜು ಅಚ್ಚಯ್ಯ, ಸುಬೇದಾರ್ ಮಾದಪ್ಪ, ಸುಬೇದಾರ್ ಕಾವೇರಪ್ಪ, ಮಡಿಕೇರಿಯ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕುಟ್ಟಪ್ಪ ಇತರ ಪದಾಧಿಕಾರಿಗಳು ಹಾಜರಿದ್ದರು.

ಏರ್ ಮಾರ್ಷಲ್‌ರಿಂದ ಗೌರವ: ನಿವೃತ್ತ ಏರ್ ಮಾರ್ಷಲ್ ಕೆ.ಸಿ.ಕಾರ್ಯಪ್ಪ ಜನರಲ್ ತಿಮ್ಮಯ್ಯ ಸ್ಮಾರಕ ಭವನದಲ್ಲಿನ ಅಮರ್ ಜವಾನ್ ಸ್ಮಾರಕಕ್ಕೆ ಬಂದು ಹುತಾತ್ಮ ಯೋಧರ ಸ್ಮಾರಕದ ಮುಂದೆ ಗೌರವ ಸೆಲ್ಯೂಟ್ ಸಲ್ಲಿಸಿ ಸ್ಮಾರಕಕ್ಕೆ ಪುಷ್ಪ ನಮನ ಅರ್ಪಿಸಿದರು. ಸುಬೇದಾರ್ ಮೇಜರ್ ತಿಮ್ಮಯ್ಯ ಹಾಜರಿದ್ದರು.

ಯೋಧರ ಹೋರಾಟ ಭಾರತೀಯರಿಗೆ ಮಾದರಿ



ವಿರಾಜಪೇಟೆ, ಜು.26– ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ವತಿಯಿಂದ ವಿರಾಜಪೇಟೆ ಮಿನಿ ವಿಧಾನ ಸೌಧದ ಎದುರಿಗಿರುವ ಯೋಧರ ಸ್ಮಾರಕಕ್ಕೆ ತಹಶಿಲ್ದಾರ್ ಡಾ.ಆರ್.ಯೋಗಾನಂದ ಅವರು ಹೂಗುಚ್ಛ ಅರ್ಪಿಸಿ ನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರ ಕುಟುಂಬಕ್ಕೆ ಭಗವಂತ ಒಳ್ಳೆದನ್ನು ಕರುಣಿಸಲಿ ಯೋಧರ ಹೋರಾಟ ಭಾರತೀಯರಿಗೆ ಮಾದರಿಯಾಗಲಿ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಗಣೇಶ್ ನಂಜಪ್ಪ ಅವರು ಕಾರ್ಗಿಲ್ ಯುದ್ಧದಲ್ಲಿ ಮಡಿದ ಯೋಧರ ಬಗ್ಗೆ ಮಾತನಾಡಿದರು. ಸಂಘದ ಉಪಾಧ್ಯಕ್ಷ ಚಪ್ಪಂಡ ಹರೀಶ್, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಸುಸ್ಮಿತಾ, ಲಯನ್ಸ್ ಕ್ಲಬ್ ಅಧ್ಯಕ್ಷ ನರು ನರೇಂದ್ರ, ಬಿಲ್ಲವ ಸಮಾಜದ ಅಧ್ಯಕ್ಷ ಬಿ.ಎಂ.ಗಣೇಶ್, ಹೆಗ್ಗಡೆ ಸಮಾಜದ ಅಧ್ಯಕ್ಷ ಕಾವೇರಪ್ಪ, ಸ್ಟೇಟ್ ಬ್ಯಾಂಕ್ ವ್ಯವಸ್ಥಾಪಕರಾದ ವಿ.ಕೆ.ಉಮಾ, ಮಾಜಿ ಸೈನಿಕರ ಸಂಘದ ತೋರೆರ ಪೂವಯ್ಯ, ಪಿ.ಕರುಂಬಯ್ಯ, ಪುಗ್ಗೇರ ನಂದ, ಚಂದ್ರಶೇಖರ್, ಅಪ್ಪಯ್ಯ ಹಾಗೂ ಇತರ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ದೇಶ ಸೇವೆ ಮಾಡುವ ಯೋಧರನ್ನು ಗೌರವಿಸಿ



ಸಿದ್ದಾಪುರ, ಜು.26– ಸರ್ವ ಸಹಾಯಿ ಮಿತ್ರ ಮಂಡಳಿ ವತಿಯಿಂದ ಕಾರ್ಗಿಲ್ ವಿಜಯೋತ್ಸವ ಹಾಗೂ ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಸ್ಮರಣೆ ಕಾರ್ಯಕ್ರಮ ಚೆನ್ನಯ್ಯನಕೋಟೆ ಶಾಲಾ ಮೈದಾನದಲ್ಲಿ ನಡೆಯಿತು. ಕರ್ನಾಟಕ ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ ಮಾತನಾಡಿ, ಗಾಳಿ ಮಳೆ ಚಳಿಯನ್ನು ಲೆಕ್ಕಿಸದೆ ಪ್ರಾಣ ಒತ್ತೆಯಿಟ್ಟು ಗಡಿ ಕಾಯುವ ಮೂಲಕ ದೇಶ ಸೇವೆ ಮಾಡುವ ಯೋಧರನ್ನು ಪ್ರತಿಯೊಬ್ಬರು ಗೌರವಿಸಬೇಕಾಗಿದೆ ಎಂದರು.

ಸನ್ಮಾನ: ಕೇರಳದ ಪ್ರಖ್ಯಾತ ಉರಗ ತಜ್ಞ ವಾವ ಸುರೇಶ್, ಕರ್ನಾಟಕ ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ, ಚೆನ್ನಯ್ಯನಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ.ಶಿವಪ್ಪ ಗೋಟಿಯಾಲ್ ಅವರನ್ನು ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಅತಿ ಹೆಚ್ಚು ಅಂಕ ಪಡೆದ ಯೋಧರ ಕುಟುಂಬದ ವಿದ್ಯಾರ್ಥಿಗಳು ಹಾಗೂ ಉರಗ ರಕ್ಷಕರು, ಸಮಾಜ ಸೇವಕರನ್ನ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಸರ್ವ ಸಹಾಯಿ ಮಿತ್ರ ಮಂಡಳಿ ಅಧ್ಯಕ್ಷ ಅಬ್ದುಲ್ ರೆಹಮಾನ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಚೆನ್ನಯ್ಯನ ಕೋಟೆ ಗ್ರಾಪಂ ಅಧ್ಯಕ್ಷೆ ಗಾಯತ್ರಿ, ಮಾಲ್ದಾರೆ ಗ್ರಾಪಂ ಅಧ್ಯಕ್ಷ ಸಮೀರ್, ಮಡಿಕೇರಿ ರಕ್ತನಿಧಿ ಕೇಂದ್ರದ ಕರುಂಬಯ್ಯ, ಗ್ರಾಪಂ ಸದಸ್ಯರುಗಳಾದ ಶೀಲಾ, ಗಣೇಶ್, ವಿಜು, ಶಾಲಾ ಮುಖ್ಯಶಿಕ್ಷಕಿ ಸಿದ್ದರಾಜಮ್ಮ, ಮುನೀರ್, ರದೀಶ್, ಡಾ. ವಿಜಯಕಾಂತ್, ವಿಜು ನಾರಾಯಣ್, ಸಲಾಂ, ಶಶಿ ಅಚ್ಯುತನ್, ಇಂದಿರಾ ಮುರುಗೇಶ್, ಮನೋಜ್, ಮಹೇಂದ್ರ, ಶಿಲ್ಪ, ಹರೀಶ್, ವಿನು ಕುಮಾರ್ ಮತ್ತಿತರರಿದ್ದರು.

ಕಾರ್ಗಿಲ್ ವಿಜಯ್ ದಿವಸ್ ಸ್ಮರಿಸುವುದು ನಮ್ಮ ಕರ್ತವ್ಯ

ಸೋಮವಾರಪೇಟೆ, ಜು.26– ಕಾರ್ಗಿಲ್ ವಿಜಯ್ ದಿವಸ್ ನೆನಪಿಸಿಕೊಳ್ಳುವುದು ಈ ದೇಶದ ಪ್ರಜೆಗಳಾದ ನಮ್ಮ ಕರ್ತವ್ಯ ಎಂದು ಶಾಸಕ ಅಪ್ಪಚ್ಚು ರಂಜನ್ ಹೇಳಿದರು.

ಇಲ್ಲಿನ ಜೈಜವಾನ್ ಮಾಜಿ ಸೈನಿಕರ ಸಂಘದಿಂದ ಮಂಗಳವಾರ ಪತ್ರಿಕಾಭವನದಲ್ಲಿ ನಡೆದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಕಾರ್ಗಿಲ್ ವಿಜಯ್ ದಿವಸ್ ಇದು ನಮ್ಮ ಅವಿಸ್ಮರಣೀಯ ಕ್ಷಣವಾಗಿದೆ. ಯೋಧರು ಮಾತ್ರವಲ್ಲದೇ ಅವರ ಕುಟುಂಬಗಳ ಕಣ್ಣೀರಿನ ಮೇಲೆ ಇಂದು ಕಾರ್ಗಿಲ್ ವಿಜಯ್ ದಿವಸ್ ನಿಂತಿದೆ. ಎಲ್ಲರೂ ಸೈನಿಕರಿಗೆ ಮತ್ತು ಅವರ ಕುಟುಂಬಕ್ಕೂ ಗೌರವ ನೀಡುವಂತಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜೈಜವಾನ್ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಬಿ.ಈರಪ್ಪ ಮಾತನಾಡಿ, ಯುದ್ಧ ಯಾವುದೇ ದೇಶಕ್ಕೆ ಒಳ್ಳೆಯದಲ್ಲ.ಎರಡು ದೇಶಗಳ ನಡುವೆ ಯುದ್ಧವಾದರೆ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿ ಹದಗೆಡುತ್ತದೆ. ಇತಿಹಾಸ ಇದಕ್ಕೆ ಸಾಕ್ಷಿಯಾಗಿದೆ. ರಾಜಕೀಯ ದ್ವೇಷ ಹಾಗೂ ಕಾಶ್ಮೀರದ ಸಮಸ್ಯೆಗಳನ್ನು ಬಗೆಹರಿಸಲು ಮೊದಲ ಹಂತವಾಗಿ



ಮಾಜಿ ಪ್ರಧಾನಿ ವಾಜಪೇಯಿ ಲಾಹೋರ್‌ಗೆ ಬಸ್ಸಿನಲ್ಲಿ ಪ್ರಯಾಣ ಬೆಳೆಸಿದ್ದರು. ಅವರ ಈ ಲಾಹೋರ್ ಯಾತ್ರೆ ರಾಜಕೀಯವಾಗಿ ಸಫಲರಾದರೂ ಪಾಕಿಸ್ತಾನದ ದ್ರೋಹಕ್ಕೆ ಸಾಕ್ಷಿ ಆಯಿತು ಎಂದರು.

ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ಇದೀಗ ಇಲ್ಲಿನ ಪಪಂನಲ್ಲಿ ಮುಖ್ಯಾಧಿಕಾರಿಗಳಾಗಿರುವ ನಾಚಪ್ಪ ತಮ್ಮ ಅನುಭವಗಳನ್ನು ಹಂಚಿಕೊಂಡರು. ಪಟ್ಟಣ ಪಂಚಾಯಿತಿ ಅಧ್ಯಕ್ಷ ಪಿ.ಕೆ.ಚಂದ್ರು ಮಾತನಾಡಿದರು.ವೇದಿಕೆಯಲ್ಲಿ ಕಾರ್ಯದರ್ಶಿ ಬಸಪ್ಪ ಉಪಸ್ಥಿತರಿದ್ದರು.

ನಾಡು ನುಡಿ ಕುರಿತು ಸಂಗೀತ ಕಾರ್ಯಕ್ರಮ

ಮಡಿಕೇರಿ, ಜು.26– ಹಾಕತ್ತೂರು ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿಶೇಷ ಘಟಕ ಯೋಜನೆಯಡಿಯಲ್ಲಿ ಯು.ಡಿ.ಚಂದ್ರಪ್ಪ ಮತ್ತು ತಂಡದವರಿಂದ ಮಂಗಳವಾರ ನಾಡು ನುಡಿ ಕುರಿತು ಸಂಗೀತ ಕಾರ್ಯಕ್ರಮ ನಡೆಯಿತು.

ಶಾಲಾ ಮುಖ್ಯ ಶಿಕ್ಷಕರಾದ ಸ್ವಾಮಿ ಅವರು ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಹೆಚ್ಚು ಹಮ್ಮಿಕೊಂಡು ಕಲೆ, ಸಂಸ್ಕೃತಿಗೆ ಹೆಚ್ಚಿನ ಆದ್ಯತೆ ನೀಡುವಂತಾಗಬೇಕು ಎಂದು ಅವರು ಹೇಳಿದರು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕ ವೃಂದದವರು, ವಿದ್ಯಾರ್ಥಿಗಳು, ಸಾರ್ವಜನಿಕರು ಇತರರು ಇದ್ದರು.

ಮೇಕೇರಿಯಲ್ಲಿ ಅಕ್ರಮ ಗಣಿಗಾರಿಕೆ

ಕೆಂಪು ಹರಳು ಸಾಗಿಸುತ್ತಿದ್ದ ಲಾರಿ ವಶಕ್ಕೆ

ಮಡಿಕೇರಿ, ಜು.26– ತಾಲೂಕಿನ ಮೇಕೇರಿ ಗ್ರಾಮದಲ್ಲಿ ಅನಧಿಕೃತ ಗಣಿಗಾರಿಕೆ ನಡೆಯುತ್ತಿರುವ ಪ್ರಕರಣ ಬೆಳಕಿಗೆ ಬಂದಿದೆ.

ಕೆಂಪು ಹರಳುಗಳನ್ನು ಒಳಗೊಂಡಿರುವ ಕಲ್ಲುಗಳನ್ನು ಅನಧಿಕೃತವಾಗಿ ಸಾಗಾಣಿಕೆ ಮಾಡುತ್ತಿದ್ದ ಲಾರಿಯನ್ನು ಸುಂಟಿಕೊಪ್ಪ ಪೊಲೀಸರು ವಶಕ್ಕೆ ಪಡೆದಾಗ ಪ್ರಕರಣ ಬಯಲಾಗಿದೆ ಲಾರಿ ಸಹಿತ ಹರಳು ಕಲ್ಲು ಒಳಗೊಂಡಿರುವ ಕಲ್ಲುಗಳನ್ನು ವಶಕ್ಕೆ ಪಡೆದಿರುವ ಪೊಲೀಸರು ಲಾರಿಯನ್ನು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಭೂ ವಿಜ್ಞಾನಿಗಳು ಮಡಿಕೇರಿ ತಾಲೂಕಿನ ಮೇಕೇರಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ



ನಡೆಸಿದರು. ಇಲ್ಲಿರುವ ಕಲ್ಲಿನಲ್ಲಿ ಅಲ್ಲಲ್ಲಿ 'ಕೊರಾಂಡಂ' ಎಂಬ ಹರಳು ಕಲ್ಲುಗಳು ಇರುವುದು ಕಂಡು ಬಂದಿದೆ. ಕಲ್ಲು ತೆರವುಗೊಳಿಸಲು ಇಲಾಖೆಯಿಂದ ಅನುಮತಿ ಪಡೆಯದೆ ಇರುವ ಕಾರಣ ಕಾನೂನು ಕ್ರಮ ಕೈಗೊಳ್ಳಲಾಗಿದೆ.

10ನೇ ತರಗತಿ ವಿದ್ಯಾರ್ಥಿನಿ ನೇಣಿಗೆ ಶರಣು

ಮಡಿಕೇರಿ, ಜು.26– ಸುಂಟಿಕೊಪ್ಪ ಸಮೀಪದ ನಾಕೂರು ಶಿರಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಮ್ಮೆಗುಂಡಿ ತೋಟದ ಕಾರ್ಮಿಕ ಅಣ್ಣು ಎಂಬವರ 16 ವರ್ಷದ ಪುತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸುಂಟಿಕೊಪ್ಪ ಸರಕಾರಿ ಪ್ರೌಢಶಾಲೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿದ್ದ ಈಕೆ ಇಂದು ಶಾಲೆಗೆ ತೆರಳದೆ ಓದಿಕೊಳ್ಳಲೆಂದು ತೋಟದ ಲೈನ್ ಮನೆಯಲ್ಲಿ ಉಳಿದುಕೊಂಡಿದ್ದಳು ಎನ್ನಲಾಗಿದೆ. ಮನೆಯವರು ಕೆಲಸಕ್ಕೆ ಹೋಗಿದ್ದು, ಸಂಜೆ ಹಿಂತಿರುಗಿ ಬಂದು ನೋಡಿದಾಗ ಮನೆಯೊಳಗೆ ವೇಲ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಈಕೆಯ ಮೃತದೇಹ ಕಂಡು ಬಂದಿದೆ. ಸುಂಟಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ.

ವಸತಿ ಸಚಿವ ವಿ.ಸೋಮಣ್ಣ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳ ಕೊಡುಗೆ

ಬೇಗೂರಿನಲ್ಲಿ ರೋಬೋ ಪ್ರಯೋಗಾಲಯ ಉದ್ಘಾಟನೆ

ಗ್ರಾಮೀಣ ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನದ ಶಿಕ್ಷಣ ಅಗತ್ಯ: ಸುತ್ತೂರು ಶ್ರೀ





ಗುಂಡ್ಲುಪೇಟೆ, ಜು.26–ಗ್ರಾಮಾಂತರ ಪ್ರದೇಶದಲ್ಲೂ ಪ್ರತಿಭಾವಂತ ವಿದ್ಯಾರ್ಥಿಗಳಿದ್ದು, ಇವರಿಗೂ ಆಧುನಿಕ ತಂತ್ರಜ್ಞಾನದ ಶಿಕ್ಷಣ ನೀಡುವ ಅಗತ್ಯವಿದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ವಸತಿ ಸಚಿವ ವಿ.ಸೋಮಣ್ಣ ಹುಟ್ಟುಹಬ್ಬದ ಅಂಗವಾಗಿ ತಾಲೂಕಿನ ಬೇಗೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಅವರ ಅಭಿಮಾನಿಗಳು ಕೊಡುಗೆ ಆಗಿ ನೀಡಿರುವ ಶ್ರೀ ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿ ವಿಜ್ಞಾನ ಮತ್ತು ರೋಬೋಟಿಕ್ ಪ್ರಯೋಗಾಲಯವನ್ನು ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಜಗತ್ತು ವೈಜ್ಞಾನಿಕವಾಗಿ ಪ್ರಗತಿ ಹೊಂದುತ್ತಿದ್ದು, ಸದ್ಯ ರೋಬೋ ತಂತ್ರಜ್ಞಾನ ಬಳಕೆಯಿಂದ ವೈದ್ಯಕೀಯ ಹಾಗೂ ಇತರ ಕ್ಷೇತ್ರಗಳಲ್ಲಿ ಅದ್ಭುತ ಸಾಧನೆಗಳನ್ನು ಮಾಡಲಾಗುತ್ತಿದೆ. ತಾಲೂಕಿನ ದೇಶೀಪುರ ಗ್ರಾಮದ ಹೆಣ್ಣು ಮಗಳೊಬ್ಬಳು ಯಾವುದೇ ಟ್ಯೂಷನ್ ಇಲ್ಲದೆ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 624 ಅಂಕ ಗಳಿಸಿದ್ದಾಳೆ. ಇಷ್ಟು ಅಂಕ ಪಡೆಯಲು ಪಟ್ಟಣ ಪ್ರದೇಶದ ವಿದ್ಯಾರ್ಥಿಗಳು ತುಂಬಾ ಸರ್ಕಸ್ ಮಾಡಬೇಕಾಗುತ್ತದೆ. ಸದ್ಯ ಸೋಮಣ್ಣ ಅಭಿಮಾನಿಗಳು ಈ ತಂತ್ರಜ್ಞಾನದ ಪ್ರಯೋಗಾಲಯವನ್ನು ಕೊಡುಗೆಯಾಗಿ ನೀಡಿರುವುದು ಗ್ರಾಮದ ಶಾಲೆಯ ವಿದ್ಯಾರ್ಥಿಗಳ ಪಾಲಿಗೆ ವರದಾನವಾಗಲಿದೆ. ಎಂದರು.

ತಾಲೂಕಿನ ಇತರ ಶಾಲೆಗಳು ಹಾಗೂ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಈ ಪ್ರಯೋಗಾಲಯಗಳಿಗೂ ಲಿಂಕ್ ಮಾಡುವ ಮೂಲಕ ಜ್ಞಾನ ಕ್ಷಿತಿಜ ವಿಸ್ತಾರವಾಗಲು ಅನುಕೂಲವಾಗಲಿದೆ. ಈಗಾಗಲೇ ಇಲ್ಲಿನ ಮಕ್ಕಳು ತಮ್ಮ ಮನೆಗಳಲ್ಲಿ ನಿರುಪಯುಕ್ತವಾಗಿದ್ದ ವಸ್ತುಗಳನ್ನು ಬಳಸಿ ಗಾಳಿಯಂತ್ರ, ಏರ್ ರಾಕೆಟ್ ಮುಂತಾದವುಗಳನ್ನು ತಯಾರಿಸಿ ತಮ್ಮ ಕ್ರಿಯಾಶೀಲತೆ ಪ್ರದರ್ಶಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಜಿಲ್ಲೆ ಹಾಗೂ ತಾಲೂಕಿಗೆ ತಮ್ಮ ಮನೆತನದ ನಂಟು ಗಾಢವಾಗಿದೆ. ತಾಲೂಕಿನ ಹಂಗಳ ಗ್ರಾಮದಲ್ಲಿ ತಮ್ಮ ಪೂರ್ವಜರು ನೆಲೆಸಿದ್ದರು. ಚಾಮರಾಜೇಶ್ವರ ದೇವಸ್ಥಾನ ನಿರ್ಮಿಸಿಕೊಟ್ಟು ಜಿಲ್ಲೆಗೆ ಚಾಮರಾಜನಗರ ಎಂಬ ಹೆಸರು ಬರಲು ಕಾರಣರಾಗಿದ್ದಾರೆ ಎಂದು ಇತಿಹಾಸ ವನ್ನು ಸ್ಮರಿಸಿದರಲ್ಲದೆ, ಭಾರತವು ಹಳ್ಳಿಗಳ ದೇಶವಾಗಿದ್ದು, ಪ್ರತಿಭೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿವೆ. ಆದ್ದರಿಂದ ಗ್ರಾಮೀಣ ಶಾಲೆಗಳಿಗೆ ಸೌಲಭ್ಯ ಕಲ್ಪಿಸುವ ಅಗತ್ಯವಿದೆ ಎಂದರು.

ಸಚಿವ ವಿ.ಸೋಮಣ್ಣ, ಶಾಸಕ ಸಿ.ಎಸ್. ನಿರಂಜನಕುಮಾರ್ ಮಾತನಾಡಿದರು. ಈ ಸಂದರ್ಭದಲ್ಲಿ ಮೈಸೂರು ವಿವಿ ಕುಲಪತಿ ಡಾ.ಹೇಮಂತಕುಮಾರ್, ಗಡಿ ಪ್ರದೇಶದ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ.ಸೋಮಶೇಖರ್, ಡಿಸಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಸ್.ಗಾಯತ್ರಿ, ಎಸ್ಪಿ ಶಿವಕುಮಾರ್, ಎಎಸ್ಪಿ ಸುಂದರರಾಜ್, ಪಿಯು ಉಪ ನಿರ್ದೇಶಕ ನಾಗಮಲ್ಲೇಶ್, ಸಾರ್ವಜನಿಕ ಶಿಕ್ಷಣ ಇಲಾಖೆ ಯ ಉಪನಿರ್ದೇಶಕ ಮಂಜುನಾಥ್, ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಕಮರಹಳ್ಳಿ ಶ್ರೀಕಂಠಪ್ಪ ಸೇರಿದಂತೆ ಹಲವರಿದ್ದರು.

ಜಿಲ್ಲೆಯಲ್ಲಿ ಅಗತ್ಯವಿರುವೆಡೆ ರೋಬೋ ಪ್ರಯೋಗಾಲಯ ಆರಂಭಕ್ಕೆ ಕ್ರಮ

ಗುಂಡ್ಲುಪೇಟೆ: ಜಿಲ್ಲೆಯ ತಾಲೂಕುಗಳಲ್ಲಿನ ಅಗತ್ಯವಿರುವ ಸರ್ಕಾರಿ ಕಾಲೇಜುಗಳಲ್ಲಿ ರೋಬೋ ಪ್ರಯೋಗಾಲಯವನ್ನು ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ವಸತಿ ಸಚಿವ ವಿ.ಸೋಮಣ್ಣ ಭರವಸೆ ನೀಡಿದ್ದಾರೆ.

ತಮ್ಮ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಚಾಮರಾಜನಗರ ಜಿಲ್ಲೆಯ ಉದಯವಾಗಲು ಅಂದಿನ ಮುಖ್ಯಮಂತ್ರಿಯಾಗಿದ್ದ ಜೆ.ಎಚ್.ಪಟೇಲ್ ಅವರ ಕೊಡುಗೆಯಿದೆ. ಇದನ್ನು ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ನಡೆಸಲಾಗಿದೆ. ಮಲೆಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ, ಜಿಲ್ಲಾ ಕೇಂದ್ರದಲ್ಲಿ ಮೆಡಿಕಲ್ ಕಾಲೇಜು, ಆಸ್ಪತ್ರೆ, ಸುತ್ತೂರು ಶ್ರೀಗಳ ಮಾರ್ಗದರ್ಶನದಲ್ಲಿ ಜಿಲ್ಲೆಯ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಅನುಷ್ಠಾನ ಸೇರಿದಂತೆ ತಾಲೂಕಿನ ಇತರ ಕೆರೆಗಳಿಗೂ ನೀರು ತುಂಬಿಸುವ 400 ಕೋಟಿ ರೂ. ವೆಚ್ಚದ ಯೋಜನೆಯ ಡಿಪಿಆರ್ ಸಿದ್ಧಪಡಿಸಲಾಗಿದೆ. ಹಿಂದುಳಿದ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಗುಂಡ್ಲುಪೇಟೆ–ಊಟಿ ಹೆದ್ದಾರಿಯಲ್ಲಿ ಹೆಚ್ಚುತ್ತಿರುವ ಅಪಘಾತ ನಿಯಂತ್ರಿಸಲು ನಂಜನಗೂಡಿನಿಂದ ಪಟ್ಟಣದವರೆಗೆ ದ್ವಿಪಥ ರಸ್ತೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಲಂಚ ಪಡೆಯುತ್ತಿದ್ದ ಆರೋಗ್ಯ ಇಲಾಖೆ ಎಫ್‌ಡಿಎ ಎಸಿಬಿ ಬಲೆಗೆ

ಚಾಮರಾಜನಗರ, ಜು.26–ಪ್ರಯೋಗಾಲಯ ತಾಂತ್ರಿಕ ಅಧಿಕಾರಿಗೆ ಕಾರ್ಯಾದೇಶ (ವರ್ಕ್ ಆರ್ಡರ್) ಹಾಗೂ ವೇತನ



ಪಾವತಿ ಬಿಲ್ (ಸ್ಯಾಲರಿ ಕ್ರೆಡಿಟ್ ಬಿಲ್) ನೀಡಲು ಲಂಚ ಪಡೆಯುತ್ತಿದ್ದ ಆರೋಗ್ಯ ಇಲಾಖೆಯ ಪ್ರಥಮ ದರ್ಜೆ ಸಹಾಯಕನೋರ್ವ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ದ ಪೊಲೀಸರ ಬಲೆಗೆ ಮಂಗಳವಾರ ಬಿದ್ದಿದ್ದಾರೆ.

ಚಾ.ನಗರದ ಜಿಲ್ಲಾಡಳಿತ ಭವನದಲ್ಲಿರುವ ಆರೋಗ್ಯ ಇಲಾಖೆ ಕಚೇರಿಯ ಕೇಸ್ ವರ್ಕರ್ ಮಹೇಶ್ ಎಸಿಬಿ ಬಲೆಗೆ ಬಿದ್ದಿರುವ ಎಫ್‌ಡಿಎ. ಕೊಳ್ಳೇಗಾಲ ತಾಲೂಕು ಹಂಪಾಪುರ ಗ್ರಾಮದ ವ್ಯಕ್ತಿಯೊಬ್ಬರು(ದೂರುದಾರ) ಉಡುಪಿಯ ಸಾಯಿ ಸೆಕ್ಯೂರಿಟಿಸ್ ಸಂಸ್ಥೆಯ ಮೂಲಕ ಹನೂರು ತಾಲೂಕು ಪಿ.ಜಿ.ಪಾಳ್ಯ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಪ್ರಯೋಗಾಲಯ ತಾಂತ್ರಿಕ ಅಧಿಕಾರಿಯಾಗಿ ನೇಮಕಗೊಂಡಿದ್ದರು. ಸಂಸ್ಥೆಯು ನೇಮಕ ಮಾಡಿಕೊಂಡಿರುವ ಬಗ್ಗೆ ಕಾರ್ಯಾದೇಶ ಹಾಗೂ ವೇತನ ಪಾವತಿ ಬಿಲ್‌ಗಳನ್ನು ಪಿ.ಜಿ.ಪಾಳ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಳುಹಿಸಿಕೊಡಲು ಅವರು ಜು. 19ರಂದು ಮಹೇಶ್ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದರು. ಈ ಕೆಲಸ ಆಗದ ಕಾರಣ ಜು.21ರಂದು ಮಹೇಶ್‌ಗೆ ಕರೆ ಮಾಡಿ ವಿಚಾರಿಸಿದಾಗ, ಮಹೇಶ್ 5 ಸಾವಿರ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು.

ಈ ಬಗ್ಗೆ ಬೇಸರಗೊಂಡ ವ್ಯಕ್ತಿ ಸೋಮವಾರ(ಜು.25) ಆರೋಗ್ಯ ಇಲಾಖೆ ಕಚೇರಿಯಲ್ಲಿ ಮಹೇಶ್ ಅವರನ್ನು ಸಂಪರ್ಕಿಸಿದ್ದರು. ಈ ವೇಳೆ ಮಹೇಶ್ 3 ಸಾವಿರ ರೂ. ನೀಡುವಂತೆ ಒತ್ತಾಯ ಮಾಡಿದರು ಎನ್ನಲಾಗಿದೆ. ಈ ಸಂಬಂಧ ಆ ವ್ಯಕ್ತಿ ಮಂಗಳವಾರ ಎಸಿಬಿ ಪೊಲೀಸರಿಗೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡ ಎಸಿಬಿ ಪೊಲೀಸರು ಕಾರ್ಯಾಚರಣೆಗಿಳಿದರು. ಮಂಗಳವಾರ ಮಧ್ಯಾಹ್ನ ತಮ್ಮ ಕಚೇರಿಯಲ್ಲಿ ಮಹೇಶ್ ಅವರು ದೂರುದಾರರಿಂದ 3 ಸಾವಿರ ಲಂಚ ಪಡೆಯುತ್ತಿದ್ದಾಗ ಖೆಡ್ಡಕ್ಕೆ ಕೆಡವಿದರು. ಅವರನ್ನು ಬಂಧಿಸಿ ನಗದು ಹಣವನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ಎಸಿಬಿ ಪೊಲೀಸರು ತಿಳಿಸಿದ್ದಾರೆ.

ಹಡಪದ ಅಪ್ಪಣ್ಣ ವಚನ ಚಳವಳಿಯ ಶಕ್ತಿ

ಎಡಿಸಿ ಎಸ್.ಕಾತ್ಯಾಯಿನಿದೇವಿ ಅಭಿಮತ



ಕಾರ್ಯದರ್ಶಿ ಗುಡೂರು ಭೀಮಸೇನ, 12ನೇ ಶತಮಾನದಲ್ಲಿನ ತಾರತಮ್ಯ, ಮೌಢ್ಯಗಳನ್ನು ತೊಡೆಯಲು ತಮ್ಮ ಜೀವನವನ್ನೇ ಅಪ್ಪಣ್ಣನವರು ಮುಡಿಪಾಗಿಟ್ಟಿದ್ದರು ಎಂದು ಸ್ಮರಿಸಿದರು.

ಮುಖ್ಯ ಭಾಷಣ ಮಾಡಿದ ಅರಕಲವಾಡಿ ನಾಗೇಂದ್ರ, ದೇಶದ ಚರಿತ್ರೆಯಲ್ಲಿ ವಚನ ಚಳವಳಿ ಕ್ರಾಂತಿಕಾರಕ ಬದಲಾವಣೆ ತರುವಲ್ಲಿ ಯಶಸ್ವಿಯಾಗಿದೆ. ಸಮಯಪ್ರಜ್ಞೆ, ನಂಬಿಕೆ, ನಿಷ್ಠೆಗೆ ಇನ್ನೊಂದು ಹೆಸರೇ ಹಡಪದ ಅಪ್ಪಣ್ಣನವರು. ತಳಸಮುದಾಯದವರ ಮುಖದರ್ಶನ ಅಪಶಕುನವೆಂದು ತಿಳಿದಿದ್ದ ಅಂದಿನ ದಿನಗಳಲ್ಲಿ ಬಸವಣ್ಣನವರು ಬೆಳಗ್ಗೆ ಎದ್ದ ಕೂಡಲೇ ಹಡಪದ ಅಪ್ಪಣ್ಣನವರ ಮುಖ ನೋಡುವ ಮೂಲಕ ಮೌಢ್ಯತೆ, ಕಂದಾಚಾರಗಳಿಗೆ ಸೆಡ್ಡು ಹೊಡೆದಿದ್ದರು ಎಂದು ತಿಳಿಸಿದರು.

ಚಾಮರಾಜನಗರ, ಜು.26–ವಚನಗಳ ಮೂಲಕ ತಳ ಸಮುದಾಯದ ಕ್ರಾಂತಿಕಾರಕ ಬದಲಾವಣೆಗೆ ಶ್ರಮಿಸಿದ ಹಡಪದ ಅಪ್ಪಣ್ಣನವರು ವಚನ ಚಳವಳಿಗೆ ಶಕ್ತಿ ತುಂಬಿದರು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ ಅಭಿಪ್ರಾಯಪಟ್ಟರು.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಹಡಪದ ಅಪ್ಪಣ್ಣನವರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಹಡಪದ ಅಪ್ಪಣ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಹಡಪದ ಅಪ್ಪಣ್ಣ ಅವರು ಅನುಭವ ಮಂಟಪದ ಶಿವಶರಣರಲ್ಲಿ ಪ್ರಮುಖರಾಗಿದ್ದರು. ಜಗಜ್ಯೋತಿ ಬಸವಣ್ಣನವರ ಆಪ್ತ ಕಾರ್ಯದರ್ಶಿಯಾಗಿದ್ದ ಹಡಪದ ಅಪ್ಪಣ್ಣ ಅವರು 200 ವಚನಗಳನ್ನು ರಚಿಸುವ ಮೂಲಕ ತಳ ಸಮುದಾಯವನ್ನು ಬಡಿದೆಚ್ಚರಿಸುವ ಕೆಲಸ ಮಾಡಿದ್ದಾರೆ ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚೆನ್ನಬಸವ ಸ್ವಾಮೀಜಿ ಆಶೀರ್ವಚನ ನೀಡಿ, 12ನೇ ಶತಮಾನ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಕಾಲಘಟ್ಟ, ಶಿವಶರಣರು ವಚನ ಸಾಹಿತ್ಯದ ಮೂಲಕ ಜಗತ್ತಿಗೆ ಬೆಳಕು ಚೆಲ್ಲಿ ಜನರನ್ನು ಕತ್ತಲಿನಿಂದ ಬೆಳಕಿನೆಡೆಗೆ ನಡೆಸಿದ ಕಾಲ. ಇಂದಿಗೂ ಸಹ ವಚನಗಳ ತತ್ವ ಆದರ್ಶಗಳು ಜನಮಾನಸದಲ್ಲಿ ಅಚ್ಚಳಿಯದ ಸ್ಥಾನ ಪಡೆದಿವೆ. ವಚನಗಳ ಸಾರವನ್ನು ಎಲ್ಲರೂ ಅರಿಯಬೇಕು. ಸದೃಢ ಸಮಾಜ ನಿರ್ಮಿಸಲು ಎಲ್ಲರೂ ದುಶ್ಚಟಗಳಿಂದ ದೂರವಿರಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಪಂ ಉಪ

ಕಾರ್ಯಕ್ರಮದಲ್ಲಿ ಸಮಾಜದ ಜಿಲ್ಲಾ ಅಧ್ಯಕ್ಷ ಚಿನ್ನಸ್ವಾಮಿ, ತಾಲೂಕು ಅಧ್ಯಕ್ಷರಾದ ಸೋಮಣ್ಣ, ಕೃಷ್ಣಪ್ಪ, ಶ್ರೀಕಂಠಸ್ವಾಮಿ, ಮಹದೇವು, ಬಸವಣ್ಣ, ಇತರೆ ಮುಖಂಡರು ಸಮುದಾಯದ ಬೇಡಿಕೆಗಳ ಮನವಿ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಿದರು.

ಪಟ್ಟಣ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ತಿಮ್ಮರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವಿನೋದ, ಜಿಪಂ ಯೋಜನಾ ಅಧಿಕಾರಿ ದೀಪ, ಮುಖಂಡರಾದ ಜಿ.ಎಂ. ಗಾಡ್ಕರ್, ಇತರರು ಕಾರ್ಯಕ್ರಮದಲ್ಲಿದ್ದರು.

ಸೇವಾ ಕಾರ್ಯದಲ್ಲಿ ಗುರುತಿಸಿಕೊಂಡಿದ್ದ ನಿಜಗುಣರಾಜುಗೆ ಒಲಿದ ಕಾಡಾ ಅಧ್ಯಕ್ಷ ಪಟ್ಟ



ಚಾಮರಾಜನಗರ, ಜು.26–ಜಿಲ್ಲೆಯ ಬಿಜೆಪಿ ಹಿರಿಯ ಮುಖಂಡ, ಹಾಸನ ಜಿಲ್ಲಾ ಪ್ರಭಾರಿ ಜಿ.ನಿಜಗುಣರಾಜು ಅವರನ್ನು ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ(ಕಾಡಾ) ಅಧ್ಯಕ್ಷರನ್ನಾಗಿ ಸರ್ಕಾರ ನೇಮಕ ಮಾಡಿ ಆದೇಶ ಹೊರಡಿಸಿದೆ.

ಜಿ.ನಿಜಗುಣರಾಜು ಅವರು ಬಿಜೆಪಿಯ ಹಿರಿಯ ಮುಖಂಡರಾಗಿದ್ದು, ಹಲವು ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ತೊಡಗಿದ್ದರು. ಚಾ.ನಗರ ವಿಧಾನಸಭಾ ಕ್ಷೇತ್ರದಿಂದ ಪಕ್ಷದ ಟಿಕೆಟ್ ಬಯಸಿದ್ದ ಅವರು, ನಮೋ ಜನ ಚೇತನ ಟ್ರಸ್ಟ್ ಸ್ಥಾಪಿಸಿಕೊಂಡು ಅನೇಕ ಜನಪರ ಹಾಗೂ ಸೇವಾ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರ ಸ್ವಚ್ಛ ಭಾರತ ಅಭಿಯಾನಕ್ಕೆ ಪೂರಕವಾಗಿ ಅನೇಕ ಸೇವಾ ಕಾರ್ಯಗಳಲ್ಲಿ ರಾಜು ತೊಡಗಿದ್ದರು.

ಶೌಚಾಲಯ ನಿರ್ಮಿಸಿಕೊಳ್ಳಲು ಬಡವರಿಗೆ ವಿವಿಧ ಬಗೆಯ ಉಪಕರಣಗಳು ಹಾಗೂ ಬಡ ಮಹಿಳೆಯರಿಗೆ ಅನುಕೂಲ ಕಲ್ಪಿಸಲು ನೂರಾರು ಹೊಲಿಗೆ ಯಂತ್ರ ವಿತರಿಸಿದ್ದರು. ಇತ್ತೀಚೆಗಷ್ಟೇ ಸಾರ್ವಜನಿಕರಿಗೆ ಅನುಕೂಲವಾಗಲೆಂದು ಸೇವಾ ಸಿಂಧು ಯೋಜನೆಗೆ ಸಂಚಾರಿ ವ್ಯಾನ್ ಹಾಗೂ ಶುದ್ಧ ಕುಡಿಯುವ ನೀರಿ ಟ್ಯಾಂಕರ್‌ಗಳನ್ನು ಹಳ್ಳಿಗಳಲ್ಲಿ ಸಂಚರಿಸುವಂತೆ ಮಾಡಿ ಉಚಿತವಾಗಿ ಸೇವೆ ಆರಂಭಿಸಿದ್ದರು. ನಿಜಗುಣರಾಜು ಅವರ ಅನೇಕ ಸೇವಾ ಕಾರ್ಯಗಳನ್ನು ಗುರುತಿಸಿ ಸರ್ಕಾರ ಅವರಿಗೆ ನಿಗಮ ಮಂಡಳಿಯಲ್ಲಿ ಸ್ಥಾನ–ಮಾನ ಕಲ್ಪಿಸಿದೆ. ರಾಜು ಅವರನ್ನು ಅನೇಕರು ಭೇಟಿಯಾಗಿ ಅಭಿನಂದಿಸಿದರು.

ನೇಮಕ



ಚಾಮರಾಜನಗರ, ಜು.26–ಚಾಮುಲ್ ಮಾಜಿ ನಿರ್ದೇಶಕ ಕಿಲಗೆರೆ ಬಸವರಾಜು ಅವರನ್ನು ಬಿಜೆಪಿ ಪ್ರಕೋಷ್ಠ ಸಂಕುಲಗಳ ಜಿಲ್ಲಾ ಸಂಯೋಜಕರಾಗಿ ನೇಮಕ ಮಾಡಿ ಪಕ್ಷದ ಜಿಲ್ಲಾ ಅಧ್ಯಕ್ಷ ಆರ್.ಸುಂದರ್ ಆದೇಶಿಸಿದ್ದಾರೆ.

ಒಂದನೇ ಪುಟದಿಂದ

ಜನಪರ ಯೋಜನೆಗಳ ಘೋಷಣೆ

ಸಾವಿರಾರು ಕೋಟಿ ರೂ. ವೆಚ್ಚ ಮಾಡುವ ಹೊಸ ಯೋಜನೆಗಳನ್ನು ಘೋಷಿಸಿದರೆ ಅದು ಜನರ ನೆನಪಿನಲ್ಲಿರುತ್ತದೆ ಎಂಬುದು ಮುಖ್ಯಮಂತ್ರಿಗಳ ಲೆಕ್ಕಾಚಾರ ಎಂದು ಸಮೀಪವರ್ತಿ ಮೂಲಗಳು ಹೇಳಿವೆ. ಈ ಹಿನ್ನೆಲೆಯಲ್ಲಿ ಇದು ಬಜೆಟ್ ಅಲ್ಲವಾದರೂ ತಾಂತ್ರಿಕವಾಗಿ ಬಜೆಟ್ ಸ್ವರೂಪವನ್ನು ಹೊಂದಿರಲಿದ್ದು,ಈ ಹಿನ್ನೆಲೆಯಲ್ಲಿ ಇದನ್ನು ಮಿನಿ ಬಜೆಟ್ ಎಂದು ಬಣ್ಣಿಸಲಾಗುತ್ತಿದೆ. ಯೋಜನೆ ಪ್ರಕಟಿಸಿದ ನಂತರ ಬಿಜೆಪಿ ಸರ್ಕಾರಕ್ಕೆ ಮೂರು ವರ್ಷ, ತಮ್ಮ ಸರ್ಕಾರ ಒಂದು ವರ್ಷ ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ ಸರ್ವರ ವಿಕಾಸಕ್ಕೆ ಸಮೃದ್ಧ ಕರ್ನಾಟಕ ಘೋಷಣೆ ಉದ್ದೇಶಿಸಿದ್ದು, ಬಿಜೆಪಿ ವತಿಯಿಂದ ದೊಡ್ಡಬಳ್ಳಾಪುರದಲ್ಲಿ ಬೃಹತ್ ಜನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮುಹೂರ್ತ ಫಿಕ್ಸ್

ಸಭೆಯಲ್ಲಿ ಸಿ.ಎಲ್.ಆನಂದ್, ಜಿಲ್ಲಾಧಿಕಾರಿಗಳ ಕಚೇರಿ ಪಕ್ಕದಲ್ಲಿರುವ ಮೈದಾನದಲ್ಲಿ ಸ್ಮಾರಕ ನಿರ್ಮಾಣ ನಕ್ಷೆಯನ್ನು ಮಂಡಿಸಿದ್ದರು. ಇದಕ್ಕೆ ಯುದ್ಧಸ್ಮಾರಕ ಸಮಿತಿ ಒಪ್ಪಿಗೆ ಸೂಚಿಸಿದ್ದರಿಂದ ಜಿಲ್ಲಾಡಳಿತ ಉಪವಿಭಾಗಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಅಂದಿನ ಸರ್ಕಾರ ಯುದ್ಧ ಸ್ಮಾರಕ ನಿರ್ಮಾಣಕ್ಕೆ 1.41 ಕೋಟಿ ರೂ. ಅನುದಾನ ಬಿಡುಗಡೆ ಮಾಡಲು ಸಮ್ಮತಿಸಿ, ಮುಂಗಡವಾಗಿ 50 ಲಕ್ಷ ರೂ. ಬಿಡುಗಡೆ ಮಾಡಿತ್ತು.

1.50 ಕೋಟಿ ರೂ. ಮೌಲ್ಯದ ಕಲ್ಲು ಕೊಡುಗೆ: ಸ್ಮಾರಕ ನಿರ್ಮಾಣಕ್ಕಾಗಿ ಚಾಮರಾಜನಗರ ಜಿಲ್ಲೆಯ ಕ್ವಾರಿಯಿಂದ 33 ಕ್ಯೂಬಿಕ್ ಮೀಟರ್ ಉತ್ಕೃಷ್ಟ ಕಲ್ಲುಗಳ ಸ್ಲಾಬ್ ಮೈಸೂರಿಗೆ ತರಲಾಗಿದೆ. ಸ್ಮಾರಕವನ್ನು ಕಾಂಕ್ರೀಟ್ ಕಟ್ಟಡಕ್ಕೆ ಸೀಮಿತಗೊಳಿಸದೆ ಕಲ್ಲಿನ ಸ್ಲಾಬ್ ಬಳಸಿ ಪಾರಂಪರಿಕ ಶೈಲಿಯಲ್ಲಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಇದಕ್ಕಾಗಿ ಚಾಮರಾಜನಗರ ಎಡಿಸಿಯಾಗಿದ್ದ ಸಿ.ಎಲ್.ಆನಂದ್, ಜಿಲ್ಲೆಯ ಅಮಚವಾಡಿ ನಿವಾಸಿ ಕ್ವಾರಿ ಮಾಲೀಕ ಹೆಚ್.ಎಂ.ಪುಟ್ಟಮಾದಯ್ಯ ಬಿನ್ ಪಟೇಲ್ ಮಾದಪ್ಪ ಎಂಬುವವರಿಂದ 33 ಕ್ಯೂಬಿಕ್ ಮೀಟರ್ ಕಪ್ಪು ಶಿಲೆ(ಉತ್ಕೃಷ್ಟ ಕಲ್ಲು)ಯನ್ನು ಸರ್ಕಾರಕ್ಕೆ ರಾಜಧನ ಹಾಗೂ ವಿವಿಧ ಶುಲ್ಕ ತಾವೇ ಪಾವತಿಸಿ ಸ್ಮಾರಕ ನಿರ್ಮಾಣಕ್ಕೆ ಕೊಡುಗೆ ನೀಡಿದ್ದರು. ಕ್ವಾರಿಯಿಂದ 300 ಟನ್ ತೂಕದ ಕಚ್ಚಾಶಿಲೆಯನ್ನು ಚಾಮರಾಜನಗರದ ಎಸ್‌ವಿಜಿ ಗ್ರಾನೈಟ್ಸ್ ಮಾಲೀಕ ಎ.ಶ್ರೀನಾಥ್ ಬಿನ್ ಶಿವಶಂಕರ್‌ರೆಡ್ಡಿ ಯಾವುದೇ ಹಣ ಪಡೆಯದೇ ಸ್ಮಾರಕ ನಿರ್ಮಾಣಕ್ಕೆ ಅನುಗುಣವಾಗಿ ಬೇಕಾದ ಆಕಾರದಲ್ಲಿ ಕತ್ತರಿಸಿಕೊಟ್ಟಿದ್ದರು. ಕಲ್ಲು ಕತ್ತರಿಸಲು ನೀಡಬೇಕಾಗಿದ್ದ ಶುಲ್ಕ ಸೇರಿದಂತೆ ಸುಮಾರು ಒಂದೂವರೆ ಕೋಟಿ ರೂ. ವೆಚ್ಚದ 300 ಟನ್ ತೂಕದ ಕಲ್ಲನ್ನು ಸ್ಮಾರಕ ನಿರ್ಮಾಣದ ಸ್ಥಳಕ್ಕೆ ಕಳೆದ 8 ತಿಂಗಳ ಹಿಂದೆಯೇ ತರಲಾಗಿದೆ.

48 ಅಡಿ ಎತ್ತರ: ಸ್ಮಾರಕ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ಬಳಿಕ 48 ಅಡಿ ಎತ್ತರ ಬರಲಿದೆ. 33 ಕ್ಯೂಬಿಕ್ ಮೀಟರ್ ಎತ್ತರ ಕಲ್ಲನ್ನು ಕೂರಿಸಿದರೆ 33 ಅಡಿ ಎತ್ತರ ಆಗಲಿದೆ. ಅದಕ್ಕೂ ಮುನ್ನ 10 ಅಡಿ ಫೌಂಡೇಷನ್ ಇರುತ್ತದೆ. ಕಲ್ಲಿನ ಮೇಲೆ 5 ಅಡಿ ಎತ್ತರ ಅಶೋಕ ಲಾಂಛನ ಅಳವಡಿಸಲಾಗುತ್ತದೆ. ದೆಹಲಿಯ ನ್ಯಾಷನಲ್ ಮ್ಯೂಸಿಯಂನಲ್ಲಿರುವ ಸಾರನಾಥ ಅಶೋಕ್ ಎಂಬ್ಲಂ ಅನ್ನು ಮೈಸೂರಿನ ಯುದ್ಧ ಸ್ಮಾರಕದಲ್ಲಿ ಅಳವಡಿಸಲಾಗುತ್ತದೆ. ಸ್ಮಾರಕಕ್ಕೆ ಬಳಸುವ ಕಲ್ಲಿಗೆ ಪಾಲಿಶ್ ಮಾಡಿದ ನಂತರ ಅಮೇರಿಕನ್ ವೈಟ್ ಪೇಯಿಂಟ್‌ನಿಂದ ಅಕ್ಷರ ಬರೆಯುವುದರಿಂದ ಲೈಫ್ ಲಾಂಗ್ ಅಕ್ಷರ ಮಾಸುವುದಿಲ್ಲ. ಪಾಲಿಶ್ ಮಾಡಿದ ನಂತರ ಜೆಟ್ ಬ್ಲಾಕ್ ಕಲರ್ ಆಗುತ್ತದೆ.

ಸ್ಮಾರಕದಲ್ಲಿ: ಪಾರಂಪರಿಕ ಶೈಲಿಯಲ್ಲಿಯೇ ಸ್ಮಾರಕ ನಿರ್ಮಾಣವಾಗಲಿದ್ದು, ಚೌಕಾಕಾರದಲ್ಲಿ ನಿರ್ಮಿಸಲಾಗುತ್ತದೆ. ಒಂದು ಭಾಗದಲ್ಲಿ ಮೂರು ವಿಧದ ಸೈನ್ಯದ ಸಂಕೇತದೊಂದಿಗೆ ದ್ವಾರ ನಿರ್ಮಿಸಲಾಗುತ್ತದೆ. ನಂತರ ಉಳಿದ ಮೂರು ಬದಿಯಲ್ಲಿ ಭೂ ಸೇನೆ, ವಾಯು ಸೇನೆ, ನೌಕಾದಳದ ಮಹತ್ವ ಸಾರುವ ಯುದ್ಧ ಟ್ಯಾಂಕರ್‌ಗಳು, ಯುದ್ಧ ವಿಮಾನಗಳು, ನೌಕೆ, ಗನ್ ಸೇರಿದಂತೆ ಯುದ್ಧದಲ್ಲಿ ಬಳಸುವ ಪರಿಕರಗಳನ್ನು ಪ್ರದರ್ಶನಕ್ಕಿಡಲು ನಿರ್ಧರಿಸಲಾಗಿದ್ದು, ಇದಕ್ಕಾಗಿ ಸರ್ಕಾರದಿಂದ ರಕ್ಷಣಾ ಇಲಾಖೆಗೆ ಪತ್ರ ಬರೆದು ಟ್ಯಾಂಕರ್, ಗನ್ ಸೇರಿದಂತೆ ಇನ್ನಿತರ ಪರಿಕರಗಳನ್ನು ತರಲು ಪ್ರಯತ್ನಿಸಲು ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಅಮಾಯಕ ಗ್ರಾಪಂ ಸದಸ್ಯ ಬಲಿ

ಆತಂಕಕಾರಿ ಸಂಗತಿ. ಗ್ರಾಪಂ ಅಧ್ಯಕ್ಷ ಸ್ಥಾನಕ್ಕಾಗಿ ಹತ್ತಾರು ಸದಸ್ಯರನ್ನು ಸುದೀರ್ಘ ಪ್ರವಾಸಕ್ಕೆ ಕರೆದುಕೊಂಡು ಹೋಗುತ್ತಾರೆ ಎನ್ನುವ ವಿಚಾರವನ್ನು ಅತ್ಯಂತ ಗಂಭೀರವಾಗಿ ಪರಿಣಿಸಬೇಕು. ಚುನಾವಣೆಯಲ್ಲಿ ಗೆದ್ದು ತಮ್ಮ ಪ್ರತಿಷ್ಠೆ ಉಳಿಸಿಕೊಳ್ಳುವುದಕ್ಕೆ ಹೀಗೆ ಅಮಾಯಕರಿಗೆ ಆಮಿಷ ತೋರಿ ಅವರನ್ನೇ ಬಲಿಪಶು ಮಾಡುವುದು ಅತ್ಯಂತ ಹೇಯ. ಕೆಟ್ಟ ರೆಸಾರ್ಟ್ ರಾಜಕಾರಣದಿಂದ ಒಬ್ಬ ಅಮಾಯಕ ಸದಸ್ಯ ಪ್ರಾಣ ಕಳೆದುಕೊಂಡಿದ್ದು ಪ್ರಜಾಪ್ರಭುತ್ವ ವ್ಯವಸ್ಥೆಯೇ ತಲೆತಗ್ಗಿಸುವಂತಾಗಿದೆ. 20 ದಿನಗಳ ಪ್ರವಾಸಕ್ಕೆ ಕರೆದೊಯ್ದಿರುವುದೇ ಅತ್ಯಂತ ಅಪಾಯಕಾರಿ. ಸಹಜ ಜೀವನ ಪದ್ಧತಿಗೆ ಭಿನ್ನವಾದ ವ್ಯವಸ್ಥೆಗೆ ಎಲ್ಲರೂ ಒಗ್ಗುವುದು ಕಷ್ಟ, ವಾತಾವರಣ ಬದಲಾವಣೆಯಿಂದ ಆರೋಗ್ಯ ಹದಗೆಡುವುದು ಸಹಜ. ಆಗ ಸೂಕ್ತ ಚಿಕಿತ್ಸೆ ಹಾಗೂ ಆರೈಕೆ ಲಭ್ಯವಾಗದಿದ್ದರೆ ಸಮಸ್ಯೆ ಬಿಗಡಾಯಿಸಬಹುದು. ಸತೀಶ್ ಅವರ ಹತ್ಯೆಯಾಗಿದೆಯೋ? ಅಥವಾ ಅನಾರೋಗ್ಯ, ಆಘಾತದಿಂದ ಸಾವನ್ನಪ್ಪಿದ್ದಾರೋ? ಪೊಲೀಸರ ತನಿಖೆಯಲ್ಲಿ ತಿಳಿಯಬೇಕಿದೆ. ಆದರೆ ಕೇವಲ ಅಧಿಕಾರಕ್ಕಾಗಿ ಚುನಾಯಿತ ಸದಸ್ಯರ ಜೀವ ಪಣಕ್ಕಿಟ್ಟು ದಾಳ ಬೀಸುವ ಕೆಟ್ಟ ಚಾಳಿಗೆ ಇತಿಶ್ರೀ ಹಾಕದಿದ್ದರೆ ಅದೆಷ್ಟೋ ಕುಟುಂಬಗಳು ಶೋಕಸಾಗರದಲ್ಲಿ ಮುಳುಗುತ್ತವೆ.

'ಟ್ರಯಲ್ ಬ್ಲಾಸ್ಟ್' ವಿರುದ್ಧ ಪ್ರತಿಭಟನೆ

ಈ ನಡುವೆ ಟ್ರಯಲ್ ಬ್ಲಾಸ್ಟ್‌ಗೆ ಜಿಲ್ಲಾಡಳಿತ ಅವಕಾಶ ಕಲ್ಪಿಸಿರುವುದು ಸರಿಯಲ್ಲ. ಒತ್ತಡಕ್ಕೆ ಮಣಿದು ಟ್ರಯಲ್ ಬ್ಲಾಸ್ಟ್ ಪ್ರಕ್ರಿಯೆ ನಡೆಸಲು ಮುಂದಾಗಿರುವ ಅನುಮಾನ ಎದ್ದು ಕಾಣುತ್ತಿದೆ. ಟ್ರಯಲ್ ಬ್ಲಾಸ್ಟ್ ಪ್ರಕ್ರಿಯೆ ಕೈಬಿಟ್ಟು, ಅಣೆಕಟ್ಟೆ ಸುತ್ತಮುತ್ತಲು ಸುಮಾರು 20 ಕಿ.ಮೀ. ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿಷೇಧಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಕೆಆರ್‌ಎಸ್ ಸುತ್ತಮುತ್ತ ಗಣಿಗಾರಿಕೆ ನಿಷೇಧಿಸುವಂತೆ 2007ರಿಂದಲೂ ಹೋರಾಟ ಮಾಡಲಾಗುತ್ತಿದೆ. ಹೋರಾಟದ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ಗಣಿಗಾರಿಕೆ ನಿಷೇಧಿಸ ಲಾಗಿದೆ. ಈ ನಿಷೇಧ ಶಾಶ್ವತವಾಗಿ ಮುಂದುವರೆಯ ಬೇಕು. ಈ ಸಂಬಂಧ ಸರ್ಕಾರ ಮತ್ತು ಜಿಲ್ಲಾಡಳಿತ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಇಂದು ನಡೆಯಬೇಕಿದ್ದ ಟ್ರಯಲ್ ಬ್ಲಾಸ್ಟ್ ಮುಂದೂಡಿರುವ ಬಗ್ಗೆ ಪ್ರತಿಕ್ರಿಯಿಸಿ, ನಮಗೆ ಬಂದ ಮಾಹಿತಿ ಪ್ರಕಾರ ಇಂದು ಬೆಳಗ್ಗೆಯೂ ಬ್ಲಾಸ್ಟ್ ಪ್ರಕ್ರಿಯೆ ನಡೆಸುವ ಪ್ರಯತ್ನ ನಡೆದಿದೆ. ಇದು ಅಧಿಕಾರಿ ವರ್ಗದ ತಂತ್ರಗಾರಿಕೆ. ಮಂಡ್ಯ ಜಿಲ್ಲಾಡಳಿತ ಹೇಳುವ ಪ್ರಕಾರ ಕೆಆರ್‌ಎಸ್ ಬಳಿಯ 1,600 ಎಕರೆ ಪ್ರದೇಶವು ಅಮೃತ ಕಾವಲು ಭೂಮಿ ಯಾಗಿದೆ. ಇದು ಅರಣ್ಯ ಇಲಾಖೆ, ಕಂದಾಯ ಇಲಾಖೆ ಅಥವಾ ಮೈಸೂರು ರಾಜವಂಶಸ್ಥರಿಗೆ ಸೇರಬೇಕಾ? ಎಂಬ ವಿಚಾರ ಕೋರ್ಟ್ ಮುಂದೆ ಇದೆ. ಇನ್ನೂ ಯಾರಿಗೆ ಸೇರಬೇಕು ಎಂದು ತೀರ್ಮಾನವಾಗಿಲ್ಲ. ಹೀಗಿದ್ದರೂ ಕಾನೂನುಬಾಹಿರ ವಾಗಿ ಅಲ್ಲಿ ಬ್ಲಾಸ್ಟ್‌ಗೆ ಅನುಮತಿ ನೀಡಲಾಗಿದೆ. ಇದು ಖಂಡನೀಯ ಎಂದು ಕಿಡಿಕಾರಿದರು. ಸಂಘಟನೆಗಳ ಮುಖಂಡರಾದ ಅಶ್ವತ್ಥ್ ನಾರಾ ಯಣ ರಾಜೇ ಅರಸ್, ಪಿ.ಮರಂಕಯ್ಯ, ಆನಂದೂರು ಪ್ರಭಾಕರ್, ಶಿರಮಳ್ಳಿ ಸಿದ್ದಪ್ಪ, ಅತ್ತಳ್ಳಿ ಶಿವನಂಜು, ಮಂಡಕಳ್ಳಿ ಮಹೇಶ್, ಹೆಜ್ಜಿಗೆ ಪ್ರಕಾಶ್, ನಾಗನಹಳ್ಳಿ ವಿಜೇಂದ್ರ, ಬಸಪ್ಪನಾಯಕ, ಕನ್ನಡಪರ ಹೋರಾಟ ಗಾರರಾದ ಮೋಹನ್‌ಕುಮಾರ್‌ಗೌಡ, ಬಾಲಕೃಷ್ಣ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

1,623 ಎಕರೆ ಪ್ರದೇಶ ನಮ್ಮ ಆಸ್ತಿ

ರಾಜಮನೆತನಕ್ಕೆ ಒಂದಷ್ಟು ಖಾಸಗಿ ಆಸ್ತಿಗಳನ್ನು ಪಟ್ಟಿ ಮಾಡಿ ಉಳಿದಿದ್ದನ್ನು ದೇಶದೊಂದಿಗೆ ವಿಲೀನ ಮಾಡಿದ್ದಾರೆ. ಅದರ ಮುಂದುವರಿದ ಭಾಗವಾಗಿ 1951ರಲ್ಲಿ ಖಾಸಗಿ ಆಸ್ತಿಗಳ ಪಟ್ಟಿಯನ್ನು, ಸರ್ಕಾರಿ ಆಸ್ತಿಗಳ ಪಟ್ಟಿಯನ್ನು, ಸರ್ಕಾರಿ ಆದೇಶದ ಮೂಲಕ ಖಚಿತಪಡಿಸಲಾಗಿದೆ ಎಂದ ಪ್ರಮೋದಾದೇವಿ ಒಡೆಯರ್, ಯಾವುದು ನಮ್ಮ ಆಸ್ತಿ, ಯಾವುದು ಸರ್ಕಾರಿ ಆಸ್ತಿ ಎಂಬುದು ಅಲ್ಲಿಂದ ಇಲ್ಲಿವರೆಗೆ ಅಧಿಕಾರ ನಡೆಸುವ ಎಲ್ಲರಿಗೂ ಗೊತ್ತಿದೆ ಎಂದು ಮಾರ್ಮಿಕವಾಗಿ ನುಡಿದರು.

ಬೇಬಿ ಬೆಟ್ಟದ ಸುತ್ತಲಿನ 1,623 ಎಕರೆ ನಮ್ಮ ಆಸ್ತಿಯಾಗಿದ್ದು, ಅಲ್ಲಿರುವ ಹಳೇ ಈಶ್ವರ ದೇವಸ್ಥಾನದಲ್ಲಿ ಪ್ರತೀ ವರ್ಷ ನಾವು ಗ್ರಾಮಸ್ಥರೊಡಗೂಡಿ ವಿಶೇಷ ಪೂಜೆ ಸಲ್ಲಿಸಿ ಹಬ್ಬ ಮಾಡುತ್ತೇವೆ. ಅಧಿಕಾರಿಗಳು ಅದನ್ನು 'ಬಿ' ಖರಾಬು ಎಂದು ಘೋಷಿಸಿದ್ದಾರೆ. ಅದರ ಪರಿಣಾಮ ಅಲ್ಲಿ ಗಣಿಗಾರಿಕೆ ಚಟುವಟಿಕೆಗಳು ನಡೆಯುತ್ತಿದ್ದವು. ಈಗ ಅದೇ ಜಾಗದಲ್ಲಿ ಟ್ರಯಲ್ ಬ್ಲಾಸ್ಟ್ ಮಾಡಲು ಹೊರಟಿದ್ದಾರೆ. ನಮ್ಮ ಜಾಗದಲ್ಲಿ ಟ್ರಯಲ್ ಬ್ಲಾಸ್ಟ್ ಮಾಡುವಾಗ ಕನಿಷ್ಠ ನಮ್ಮ ಅನುಮತಿ ಪಡೆಯಬೇಕಿತ್ತು. ಎಲ್ಲಾ ಗೊತ್ತಿದ್ದೂ ಉದ್ದೇಶಪೂರ್ವಕವಾಗಿ ಗೊಂದಲ ಸೃಷ್ಟಿ ಸುತ್ತಿದ್ದಾರೆ ಎಂದು ನುಡಿದರು.

ಎಲ್ಲಿ ಬ್ಲಾಸ್ಟ್ ಮಾಡಿದರೆ ಎಷ್ಟು ದೂರದವರೆಗೆ ಅದರ ಪರಿಣಾಮ ಉಂಟಾಗುತ್ತದೆ ಎಂಬುದು ವಿಜ್ಞಾನಿಗಳಿಗೆ ಗೊತ್ತಿರುತ್ತದೆ. ಒಂದು ವೇಳೆ ಪ್ರಯೋಗ ಮಾಡಲೇ ಬೇಕೆಂದಾದರೆ ಬೇರೆ ಸರ್ಕಾರಿ ಜಾಗದಲ್ಲಿ ಮಾಡಿ ಎಂದು ಮಂಡ್ಯ ಜಿಲ್ಲಾಧಿಕಾರಿಗಳಿಗೆ ಪತ್ರ ಮುಖೇನ ತಿಳಿಸಿದ್ದೇನೆ ಎಂದು ತಿಳಿಸಿದರು. ಬೇಬಿ ಬೆಟ್ಟದಲ್ಲೇ ಟ್ರಯಲ್ ಬ್ಲಾಸ್ಟ್ ಮಾಡಬೇಕೆಂದೇನೂ ಇಲ್ಲ. ವಿಜ್ಞಾನ ಎಲ್ಲಾ ಕಡೆಗೂ ಒಂದೇ. ಆದ್ದರಿಂದ ಬೇರೆ ಪ್ರದೇಶದಲ್ಲೂ ಪ್ರಯೋಗ ನಡೆಸಬಹುದು. ನಾನು ಪರ ಅಥವಾ ವಿರೋಧ ಎಂದು ಹೇಳುತ್ತಿಲ್ಲ. ಬೇಬಿ ಬೆಟ್ಟ ನಮ್ಮ ಖಾಸಗಿ ಆಸ್ತಿ ಎಂಬುದಷ್ಟೇ ನಮ್ಮ ವಾದ ಎಂದ ಅವರು, ಮುಂದೆ ಅದನ್ನು ನಮ್ಮ ಹೆಸ ರಿಗೆ ಖಾತೆ ಮಾಡಿಕೊಟ್ಟರೆ ಗಣಿಗಾರಿಕೆ ನಡೆಯುವ ಪ್ರಶ್ನೆಯೇ ಬರುವುದಿಲ್ಲ. ಗಣಿಗಾರಿಕೆ ಮಾಡಲು ಅಲ್ಲಿ ಈಗ ಏನೂ ಉಳಿದಿಲ್ಲ ಎಂದು ನುಡಿದರು. ಟ್ರಯಲ್ ಬ್ಲಾಸ್ಟ್‌ಗೆ ಹಲವರು ವಿರೋ ಧಿಸುತ್ತಿದ್ದಾರೆ. ಪ್ರತಿಭಟನಾ ಸ್ಥಳಕ್ಕೆ ನಾನು ಹೋಗುವುದಿಲ್ಲ. ನಾನು ಮಧ್ಯಕ್ಕೆ ಹೋಗು ವುದರಿಂದ ಏನೇನೋ ಆಗ ಬಹುದು. ಅದ್ಯಾವುದೂ ನನಗೆ ಬೇಕಾ ಗಿಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸಬೇಕು ಎಂದು ರಾಜವಂಶಸ್ಥೆ ಪ್ರಮೋದಾ ಒಡೆಯರ್ ನುಡಿದರು.

ಕನ್ನಡ ಸಾಹಿತ್ಯ ಓದಿದ ಅದೆಷ್ಟೋ ಜನರ ಬದುಕು ಹಸನಾಗಿದೆ

ಮುಡಾ ಕಾರ್ಯದರ್ಶಿ ಡಾ. ವೆಂಕಟರಾಜು ಕಿವಿಮಾತು

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ವಿಯಾದವರಲ್ಲಿ ಸಿಂಹಪಾಲು ಸಾಹಿತ್ಯ ಓದಿದವರು



ಮೈಸೂರು,ಜು.26(ಎಂಟಿವೈ)– ಬದುಕನ್ನು ಕಟ್ಟಿಕೊಡುವ ಶಕ್ತಿ ಕನ್ನಡ ಭಾಷೆಗೆ ಇದೆ. ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳು ಕೀಳರಿಮೆಯನ್ನು ಬಿಟ್ಟು ಸಾಧನೆ ಮಾಡುವತ್ತ ಗಮನ ಹರಿಸುವಂತೆ ಮುಡಾ ಕಾರ್ಯದರ್ಶಿ ಡಾ.ಎನ್.ಸಿ.ವೆಂಕಟರಾಜು ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ ಕನ್ನಡ ವಿಭಾಗ ಹಾಗೂ ಕಾಲೇಜಿನ ಕನ್ನಡ ಸಂಘದ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಜಯಲಕ್ಷ್ಮಮ್ಮಣ್ಣಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ 'ಪಂಪನ ಕಾವ್ಯಗಳ ವಿಶ್ಲೇಷಣೆ', ನಾಗರಾಜ್ ತಲಕಾಡು ವಿರಚಿತ 'ಬುದ್ಧ ಭಾರತ ಕಾವ್ಯ' ಕೃತಿಯ ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಓದುವ ವಿದ್ಯಾರ್ಥಿಗಳು ಎಂದಿಗೂ ವಿಫಲರಾಗಿಲ್ಲ. ಕನ್ನಡ ಸಾಹಿತ್ಯ ಓದಿದ ವಿದ್ಯಾರ್ಥಿಗಳು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡಿದ್ದಾರೆ. ಯಶಸ್ಸಿನ ಹಾದಿಯಲ್ಲಿ ಸಾಗಿದ್ದಾರೆ. ಯಾರದೋ ಮಾತುಗಳನ್ನು ಕೇಳಿ, ಉಡಾಫೆಯಿಂದ ಓದಿರುವ ವಿದ್ಯಾರ್ಥಿಗಳು ಮಾತ್ರ ವೈಫಲ್ಯ ಅನುಭವಿಸಿದ್ದಾರೆ. ಅದನ್ನು ಹೊರತುಪಡಿಸಿದರೆ ಯಶಸ್ಸಿನ ಹಾದಿಯಲ್ಲಿ ಸಾಗಿದ ಬಹುತೇಕ ವಿದ್ಯಾರ್ಥಿಗಳಲ್ಲಿ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿದ್ದಾರೆ. ಸಾಹಿತ್ಯವನ್ನು ಓದಿರುವ ವಿದ್ಯಾರ್ಥಿಗಳು ಇತರರಿಗಿಂತ ವಿಭಿನ್ನವಾಗಿ ಸಾಧನೆ ಮಾಡುತ್ತೇವೆ. ವಿಭಿನ್ನವಾಗಿ ಜೀವನ ನಡೆಸುತ್ತೇವೆ ಎಂದು ತೋರಿಸುವಂತೆ ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆಯಾದವರಲ್ಲಿ ಕನ್ನಡ ಸಾಹಿತ್ಯ ಓದಿರುವವರ ಸಂಖ್ಯೆಯೇ ಹೆಚ್ಚಾಗಿದೆ. 200 ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ, ಅವರಲ್ಲಿ 100 ಮಂದಿ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿರುವುದು ವಿಶೇಷ. ನಾನು 2004ರ ಬ್ಯಾಚ್ ಅಧಿಕಾರಿ. ಆ ವೇಳೆ ಮೂರು ಬ್ಯಾಚ್‌ನಲ್ಲಿ ತೇರ್ಗಡೆಯಾದವರನ್ನು ಒಟ್ಟಿಗೆ ನೇಮಕ ಮಾಡಿ, ಹುದ್ದೆಗೆ ನಿಯೋಜಿಸಲಾಯಿತು. ಈ ವೇಳೆ ನಮಗೆ ಆಡಳಿತ ತರಬೇತಿ ಸಂಸ್ಥೆಯಲ್ಲಿ ತರಬೇತಿ ನೀಡಲಾಯಿತು. ಅಲ್ಲಿ ಕೆಎಎಸ್ ಪಾಸ್ ಮಾಡಿಕೊಂಡಿದ್ದ ವೈದ್ಯರು, ಎಂಜಿನಿಯರ್‌ಗಳು ಸೇರಿದಂತೆ ಇನ್ನಿತರರು ಪಂಪ ಭಾರತ, ಕವಿರಾಜಮಾರ್ಗ, ಶಬ್ದಮಣಿ ದರ್ಪಣ ಕೃತಿಗಳನ್ನು ಕಂಠಪಾಠ ಮಾಡಿಕೊಂಡು ನಿರರ್ಗಳವಾಗಿ ಓದಿ, ಒಪ್ಪಿಸುತ್ತಿದ್ದರು. ಹಳೆಗನ್ನಡದ ಕೃತಿಗಳು ಕಷ್ಟಕರವೆಂದು ಕನ್ನಡ ಸಾಹಿತ್ಯ ಓದದ ಅಭ್ಯರ್ಥಿಗಳು ಇಲ್ಲಿ ಸುಲಲಿತವಾಗಿ ಓದುತ್ತಿದ್ದದ್ದು ಆಶ್ಚರ್ಯವನ್ನುಂಟುಮಾಡಿತ್ತು. ಕನ್ನಡ ಭಾಷೆಗೆ ಆ ಶಕ್ತಿ ಇದೆ. ಹಾಗಾಗಿ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳು ಅಳುಕಿಲ್ಲದೇ ಅಧ್ಯಯನದಲ್ಲಿ ತೊಡಗಿಸಿಕೊಳ್ಳುವಂತೆ ತಿಳಿಸಿದರು.

ಆದಿಕವಿ ಪಂಪನನ್ನು ಸಾಹಿತ್ಯದ ವಿದ್ಯಾರ್ಥಿಗಳು ಓದಲೇಬೇಕು. ಪಂಪನನ್ನು 50 ವರ್ಷ ಬಿಟ್ಟು ಓದಿದರೂ ಹಾಗೆ ಇರುತ್ತದೆ. ಪಂಪನನ್ನು ಮೀರಿಸುವ ಶಕ್ತಿ ಯಾರಿಗೂ ಇಲ್ಲ. ಪಂಪ ನಡೆದದ್ದೇ ದಾರಿ. ಸಾಹಿತ್ಯ ಕ್ಷೇತ್ರದಲ್ಲಿ ಅವರು ಹಾಕಿಕೊಟ್ಟ ಮಾರ್ಗ ಇಂದು ಹೆದ್ದಾರಿಯಾಗಿದೆ. ಆ ಮಾರ್ಗದಲ್ಲೇ ಇತರೆ ಕವಿಗಳು ಸಾಗುತ್ತಿದ್ದಾರೆ. ಪಂಪನನ್ನು ಓದದಿದ್ದರೆ ಕನ್ನಡ ಸಾಹಿತ್ಯದಲ್ಲಿ ನಿರರ್ಥಕ ಎಂಬ ವಾತಾವರಣಕ್ಕೆ ಗುರಿಯಾಗುವಿರಿ. ಹಾಗಾಗಿ ಪಂಪನನ್ನು ಓದುವ ಅವಶ್ಯಕತೆ ಇದೆ ಎಂದರು.

'ಬುದ್ಧ ಭಾರತ ಕಾವ್ಯ' ಕೃತಿಯನ್ನು ಬಿಡುಗಡೆ ಮಾಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ಮಾತನಾಡಿ, ಕೃತಿಕಾರರು ದ್ವೇಷವಿಲ್ಲದ, ಯುದ್ಧವಿಲ್ಲದ ವಿಶ್ವವನ್ನು ಬುದ್ಧನ ಮೂಲಕ ಕಟ್ಟಿಕೊಟ್ಟಿದ್ದಾರೆ. ಈ ಕೃತಿಯಲ್ಲಿ ಯಾರೂ ಯಾರನ್ನೂ ವಿಮರ್ಶೆ ಮಾಡಿಲ್ಲ. ಅವರಿಗೆ ಅವರೇ ವಿಮರ್ಶೆ ಮಾಡಿಕೊಂಡು ಅವರಿಗೆ ಅವರೇ ಪರಿವರ್ತನೆಯಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ.ಕೃಷ್ಣಮೂರ್ತಿ ಮೈಸೂರು ಅವರು ಪಂಪನ ಕಾವ್ಯಗಳ ವಿಶ್ಲೇಷಣೆ ಮಾಡಿದರು. ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲ ಪ್ರೊ.ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು. ಲೇಖಕ ನಾಗರಾಜ್ ತಲಕಾಡು, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ವಿಜಯಲಕ್ಷ್ಮಿ, ಸ್ನಾತಕೋತ್ತರ ಕನ್ನಡ ವಿಭಾಗದ ಸಂಯೋಜಕರಾದ ಡಾ.ಎಚ್.ಎಂ.ಕಲಾಶ್ರೀ, ಕನ್ನಡ ಸಂಘದ ಕಾರ್ಯದರ್ಶಿ ಪ್ರೊ.ಎಂ.ನಂಜುಂಡಯ್ಯ, ಖಜಾಂಚಿ ಡಾ.ಎಂ.ದೇವಮ್ಮಣ್ಣಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಂಗಭೂಮಿಯಲ್ಲಿ ವಸತಿ ಶಿಕ್ಷಣ ಪದ್ಧತಿ ಜಾರಿಗೆ ಸಂಗೀತ ವಿವಿ ಕುಲಪತಿ ನಾಗೇಶ್ ಬೆಟ್ಟಕೋಟೆ ಸಲಹೆ

ರಂಗಾಯಣ ಭಾರತೀಯ ರಂಗ ವಿದ್ಯಾಲಯದ ಆರಂಭೋತ್ಸವ



ಮೈಸೂರು, ಜು.26(ಆರ್‌ಕೆಬಿ)– ರಂಗಭೂಮಿಯಲ್ಲಿ ವಸತಿ ಶಿಕ್ಷಣ ಪದ್ಧತಿ ಬರಬೇಕು. ಜೊತೆಗೆ ಶಿಕ್ಷಣದಲ್ಲಿ ವೃತ್ತಿಪರತೆ ಇರಬೇಕು ಎಂದು ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ನಾಗೇಶ್ ವಿ.ಬೆಟ್ಟಕೋಟೆ ಅಭಿಪ್ರಾಯಪಟ್ಟರು.

ಮೈಸೂರಿನ ರಂಗಾಯಣದಲ್ಲಿ ಮಂಗಳವಾರ ಭಾರತೀಯ ರಂಗ ವಿದ್ಯಾಲಯದ ಈ ಸಾಲಿನ ಶಿಕ್ಷಣ ಪ್ರಾರಂಭೋತ್ಸವದಲ್ಲಿ ಆಯ್ಕೆಯಾದ ಶಿಬಿರಾರ್ಥಿಗಳಿಗೆ ಗುರುತಿನ ಚೀಟಿಗಳನ್ನು ವಿತರಿಸಿ, ಅವರು ಮಾತನಾಡಿದರು. ಈ ರಂಗ ಶಿಕ್ಷಣದಲ್ಲಿ ಮಾನವೀಯತೆಯೊಂದಿಗೆ ಉತ್ತಮ ಪ್ರಜೆಯಾಗಬಹುದು. ಇಲ್ಲಿ ತರಬೇತಿ ಪಡೆದವರು ರಂಗಭೂಮಿ, ಸಿನಿಮಾ ಕ್ಷೇತ್ರಗಳಲ್ಲಿ ರಂಗ ಶಿಕ್ಷಕ, ನಟ, ನಿರ್ದೇಶನ, ಸಂಗೀತ, ತಂತ್ರಜ್ಞ ಹೀಗೆ ನಾನಾ ವಿಭಾಗದಲ್ಲಿ ಕೆಲಸ ಮಾಡಲು ಅವಕಾಶವಿದೆ ಎಂದರು.

ಕೇಂದ್ರ ಸರ್ಕಾರ ಜಾರಿಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಮಾತನಾಡಿದ ಅವರು, ಆಧುನಿಕ ಶಿಕ್ಷಣ, ನಮ್ಮ ಪರಂಪರೆ ಮತ್ತು ಸಂಸ್ಕೃತಿಯನ್ನು ಇಲ್ಲಿ ಬಳಕೆ ಮಾಡಿಕೊಂಡು ಭಾರತ ವಿಶ್ವಗುರುವಾಗಬೇಕೆಂಬ ಉದ್ದೇಶ ಹೊಂದಿದೆ ಎಂದು ಹೇಳಿದರು.

ಜೀವನ ರೂಪಿಸಿಕೊಳ್ಳುವುದು ನಮ್ಮ ಕೈಯ್ಯಲ್ಲಿದೆ ಎಂದು ವಿವೇಕಾನಂದರ ಹೇಳಿಕೆಯನ್ನು ಪ್ರಸ್ತಾಪಿಸಿದ ಅವರು, ರಂಗಭೂಮಿ ಹಿಂದಿನ ದಿನಗಳಲ್ಲಿ ಮನರಂಜನೆಗೋಸ್ಕರ ಹಳ್ಳಿಗಳಲ್ಲಿ ನಾನಾ ನಾಟಕ ಕಂಪನಿಗಳು, ವೃತ್ತಿ ರಂಗಭೂಮಿಗಳು ಅದರ ಮಹತ್ವ ಅರಿತು ಅಲ್ಲಿನ ಜನರಿಗೆ ತಕ್ಕಂತೆ ಮನರಂಜನೆ ನೀಡಿ ಬದುಕುವ ಕಾಯಕ ನಡೆಸುತ್ತಿವೆ. ಕಾಲಕ್ಕೆ ತಕ್ಕಂತೆ ರಂಗಭೂಮಿಯೂ ಬದಲಾವಣೆಯತ್ತ ಹೊರಳುತ್ತಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮಾತನಾಡಿ, ರಂಗ ನಿರ್ದೇಶಕ ಪ್ರಸನ್ನ ಅವರಿಂದ ಆರಂಭವಾದ ರಂಗ ತರಬೇತಿ ಇಂದು ನೂರಾರು ಮಂದಿ ಕಲಾವಿದರನ್ನು ರಂಗಭೂಮಿಗೆ ನೀಡಿದೆ. ತರಬೇತಿಗೆ ಆಯ್ಕೆಯಾಗಿರುವ ವಿದ್ಯಾರ್ಥಿಗಳಲ್ಲಿ ಮೊದಲು ಇರಬೇಕಾದುದೆಂದರೆ ಬದ್ಧತೆ, ಶಿಸ್ತು, ಪ್ರಾಮಾಣಿಕತೆ. ಈ ಮೂರನ್ನು ರೂಢಿಸಿಕೊಳ್ಳಬೇಕು. ಕಲಿಯುವ ಆಸಕ್ತಿ ಹೆಚ್ಚಾಗಿದ್ದರೆ ಇದರಿಂದ ಉತ್ತಮ ಕಲಾವಿದರಾಗಿ ಹೊರಹೊಮ್ಮಲು ಸಾಧ್ಯವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ಶಿಕ್ಷಕರಾದ ಅಮಿತ್‌ರೆಡ್ಡಿ, ನಂದಕುಮಾರ್, ಜಗದೀಶ್ ಮನವಾರ್ತೆ, ಅಂಜುಸಿಂಗ್, ರಾಮನಾಥ್ ಇನ್ನಿತರರು ಉಪಸ್ಥಿತರಿದ್ದರು.

ಟೈಲರ್ಸ್ ಕ್ಷೇಮನಿಧಿ ಮಂಡಳಿ ಸ್ಥಾಪಿಸಲು ಆಗ್ರಹಿಸಿ ಟೈಲರ್‌ಗಳ ಪ್ರತಿಭಟನೆ



ಮೈಸೂರು,ಜು.26(ಪಿಎಂ)– ಟೈಲರ್ಸ್ ಕ್ಷೇಮನಿಧಿ ಮಂಡಳಿ ಸ್ಥಾಪಿಸುವ ಜೊತೆಗೆ ಭವಿಷ್ಯನಿಧಿ ಮತ್ತು ಮಾಸಿಕ ಪಿಂಚಣಿ ಯೋಜನೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಸ್ಟೇಟ್ ಟೈಲರ್ ಅಸೋಸಿಯೇಷನ್ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯಾದ್ಯಂತ 10 ಲಕ್ಷಕ್ಕೂ ಹೆಚ್ಚು ಸ್ತ್ರೀ ಮತ್ತು ಪುರುಷರು ಹೊಲಿಗೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇವೆ. ನಮ್ಮ ಜೀವನ ಭದ್ರತೆಗಾಗಿ ಟೈಲರ್ಸ್ ಕ್ಷೇಮನಿಧಿ ಮಂಡಳಿ ಸ್ಥಾಪನೆ ಮಾಡಬೇಕು. ಈ ಬೇಡಿಕೆ ಈಡೇರಿಸುವಂತೆ ಕಳೆದ 23 ವರ್ಷಗಳಿಂದ ಹೋರಾಟ ನಡೆಸುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಂಡಳಿ ಸ್ಥಾಪಿಸುವ ಜೊತೆಗೆ ಭವಿಷ್ಯನಿಧಿ ಕಲ್ಪಿಸಬೇಕು. ಅಲ್ಲದೆ, ಆರೋಗ್ಯ ವಿಮೆ ಸೌಲಭ್ಯ ಕಲ್ಪಿಸಬೇಕು. ಈವರೆಗೆ ಹಣ ಸಂದಾಯ ಮಾಡಿದ 60 ವರ್ಷ ತುಂಬಿದ ಎಲ್ಲಾ ಎನ್‌ಪಿಎಸ್ ಲೈಟ್ ಫಲಾನುಭವಿಗಳ (ಸ್ವಯಂ ಉದ್ಯೋಗಿಗಳ ಪಿಂಚಣಿಗಾಗಿ ಕೇಂದ್ರ ಸರ್ಕಾರದ ಯೋಜನೆ) ನಿವೃತ್ತಿ ವೇತನ ಘೋಷಣೆ ಮಾಡಿ, ಮಾಸಿಕ 3 ಸಾವಿರ ರೂ. ನಿವೃತ್ತಿ ವೇತನ ನೀಡಬೇಕು. ಟೈಲರ್ ಕುಟುಂಬದ ಹೆಣ್ಣು ಮಕ್ಕಳಿಗೆ ವಿವಾಹ ಧನ ನೀಡಬೇಕು ಎಂದು ಒತ್ತಾಯಿಸಿದರು.

ಮಹಿಳಾ ಟೈಲರ್‌ಗಳಿಗೆ ವಿವಾಹ ಧನ ಮತ್ತು ಹೆರಿಗೆ ಭತ್ಯೆ ಸೌಲಭ್ಯ ನೀಡಬೇಕು. ಮನೆ ನಿರ್ಮಾಣ ಅಥವಾ ಖರೀದಿ, ಮನೆ ಪುನರ್ ನಿರ್ಮಾಣ, ದುರಸ್ತಿಗಾಗಿ ಟೈಲರ್‌ಗಳಿಗೆ ಸಹಾಯಧನ ನೀಡಬೇಕು. ಜೊತೆಗೆ ಇದಕ್ಕಾಗಿ ಕಡಿಮೆ ಬಡ್ಡಿದರದ ಸಾಲಸೌಲಭ್ಯ ಯೋಜನೆಯನ್ನೂ ತರಬೇಕು. ಅಲ್ಲದೆ, ನಮ್ಮ ಕುಟುಂಬದ ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಲು ವಿದ್ಯಾರ್ಥಿ ವೇತನ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಅಸೋಸಿಯೇಷನ್ ಅಧ್ಯಕ್ಷ ಚನ್ನನಾಯಕ, ಉಪಾಧ್ಯಕ್ಷರಾದ ಜನಾರ್ಧನ್, ತಾರಾ, ಪ್ರಧಾನ ಕಾರ್ಯದರ್ಶಿ ಆರ್.ಬಸವರಾಜು, ಸಂಘಟನಾ ಕಾರ್ಯದರ್ಶಿಗಳಾದ ಮರಿಸ್ವಾಮಿ, ಹೆಚ್.ಕೆ. ಪ್ರದೀಪ್, ಸ್ನೇಹಜೀವಿ ಟೈಲರ್‌ಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದೇಗೌಡ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳ ನೂರಾರು ಟೈಲರ್‌ಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ 50ನೇ ವಾರ್ಡ್‌ನಲ್ಲಿ ತಿಂಗಳಿಂದ ಕುಡಿಯುವ ನೀರು ಹಾಗೂ ಬೀದಿದೀಪಗಳ ಸಮಸ್ಯೆ ಬಿಗಡಾಯಿಸಿದ್ದು, ಶೀಘ್ರ ಪರಿಹಾರ ಕ್ರಮ ವಹಿಸುವಂತೆ ಪಾಲಿಕೆ ಸದಸ್ಯ ಲೋಕೇಶ್ ಪಿಯಾ ನೇತೃತ್ವದಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸಿದರು. ನಿರ್ಲಕ್ಷಿಸಿದರೆ ಪಾಲಿಕೆ ಆಯುಕ್ತರ ಕಚೇರಿ ಮುಂಭಾಗ ಧರಣಿ ನಡೆಸುವುದಾಗಿ ಎಚ್ಚರಿಸಿದರು.

ಗ್ರೂಪ್–ಡಿ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮೈಸೂರು, ಜು.26– ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಚೇರಿಯಲ್ಲಿ ದಲಾಯತ್ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆ.3ರೊಳಗಾಗಿ ಅರ್ಜಿ ಸಲ್ಲಿಸಲು ತಿಳಿಸಿದೆ.

ಅರ್ಜಿ ಸಲ್ಲಿಸುವ ಆಸಕ್ತರು ನಿವೃತ್ತ ಸರ್ಕಾರಿ ಗ್ರೂಪ್–ಡಿ ನೌಕರರು ಅಥವಾ ಎಸ್‌ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು. ಮಾಸಿಕ ಸಂಚಿತ ವೇತನ 11,388 ರೂಗಳು ನೀಡಲಾಗುವುದು. ಆಸಕ್ತ ನಿವೃತ್ತ ಸರ್ಕಾರಿ ನೌಕರರು ಅಥವಾ ಅರ್ಹ ಅಭ್ಯರ್ಥಿಗಳು ತಮ್ಮ ವೈಯಕ್ತಿಕ ವಿವರಗಳೊಂದಿಗೆ ಸ್ವ ಅಕ್ಷರದಿಂದ ಭರ್ತಿ ಮಾಡಿದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,ಎ.ಡಿ.ಆರ್.ಸೆಂಟರ್, ಮಳಲವಾಡಿ, ಜಯನಗರ 5ನೇ ಕ್ರಾಸ್, ಮೈಸೂರು ಇಲ್ಲಿಗೆ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ದೇವರಾಜ್ ಭೂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರ ಸಮಸ್ಯೆಗಳಿಗೆ ಪರಿಣಾಮಕಾರಿ ಪರಿಹಾರ: ಡಾ. ಅಶ್ವತ್ಥನಾರಾಯಣ ಸಲಹೆ



ಬೆಂಗಳೂರು, ಜು.26(ಕೆಎಂಶಿ)– ನಮ್ಮ ನಗರ ಪ್ರದೇಶಗಳಲ್ಲಿ ಸಂಕೀರ್ಣ ಸಮಸ್ಯೆ ಮತ್ತು ಸವಾಲುಗಳಿವೆ. ಇವುಗಳ ಬಗ್ಗೆ ಸುಮ್ಮನೆ ಚರ್ಚಿಸುವುದಕ್ಕಿಂತ ಸಮರ್ಥ ಪರಿಹಾರ ಕಂಡು ಹಿಡಿಯುವುದು ಮುಖ್ಯ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅಭಿಪ್ರಾಯ ಪಟ್ಟಿದ್ದಾರೆ.

ಭಾರತೀಯ ಮಾನವ ವಸಾಹತುಗಳ ಸಂಸ್ಥೆಯು ಮಂಗಳವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಅತಿಥಿಯಾಗಿ ಮಾತನಾಡಿದರು. ನಗರ ಪ್ರದೇಶಗಳ ಅಭಿವೃದ್ಧಿ ಒಮ್ಮುಖವಾಗ ಬಾರದು. ಇಲ್ಲಿ ಪ್ರಗತಿಯ ಜತೆಗೆ ಸುಸ್ಥಿರತೆಯನ್ನು ಸಾಧಿಸಬೇಕಾದ ಅಗತ್ಯವೂ ಇದೆ ಎಂದು ಅವರು ಹೇಳಿದರು.

ನಗರ ಪ್ರದೇಶಗಳಲ್ಲಿ ಕೃಷಿ ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿ ಇದೆ. ಆದ್ದರಿಂದ ಈ ನಿಟ್ಟಿನಲ್ಲಿ ಕೃಷಿ ಸಂಸ್ಕೃತಿಯ ಹೊಸ ರೂಪ ಮತ್ತು ವಿಧಾನಗಳನ್ನು ಕಂಡುಹಿಡಿಯಬೇಕಾಗಿದೆ ಎಂದು ಅವರು ನುಡಿದರು.

ನಗರಗಳು ಕೇವಲ ಉದ್ಯೋಗ ಸೃಷ್ಟಿಯ ಅಗತ್ಯ ಪೂರೈಸಿದರೆ ಸಾಲದು. ಇವು ಬದುಕಲು ಉತ್ತಮ ತಾಣಗಳಾಗಿಯೂ ಇರಬೇಕು. ಆದ್ದರಿಂದ ನಮ್ಮ ನಗರಗಳು ಸುಧಾರಣೆ ಕಾಣಬೇಕಾದ ತುರ್ತಿದೆ ಎಂದು ಅವರು ಪ್ರತಿಪಾದಿಸಿದರು.

ರಾಜ್ಯದಲ್ಲಿ ಶಾಲಾ ಹಂತದಲ್ಲೇ ಮಕ್ಕಳಿಗೆ ಹಣ್ಣು ಮತ್ತು ತರಕಾರಿ ಬೆಳೆಯುವುದನ್ನು ಕಲಿಸಲಾಗುತ್ತದೆ. ಹಾಗೆಯೇ ಸಮಾಜದಲ್ಲೂ ಅತ್ಯುತ್ತಮ ಪರಿಸರ ನಿರ್ಮಾಣಕ್ಕೆ ಸಾಮೂಹಿಕ ಜವಾಬ್ದಾರಿಯ ಪ್ರಜ್ಞೆ ಮತ್ತು ವೈಜ್ಞಾನಿಕ ವಿಧಾನಗಳು ಬರಬೇಕು ಎಂದು ಸಚಿವರು ಆಶಿಸಿದರು.

ಮಾಧ್ಯಮಗಳು ಪ್ರಭಾವ, ಪ್ರಾಮಾಣಿಕ ಪತ್ರಿಕೋದ್ಯಮಕ್ಕೆ ಸೀಮಿತವಾಗಬೇಕು: ಸಿಜೆಐ ಎನ್.ವಿ. ರಮಣ



ನವದೆಹಲಿ: ಮತ್ತೆ ದೇಶದ ಮಾಧ್ಯಮಗಳ ಕಿವಿ ಹಿಂಡಿರುವ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್ ವಿ ರಮಣ ಅವರು, ಮಾಧ್ಯಮಗಳು ತನ್ನ ಪ್ರಭಾವ ಮತ್ತು ವ್ಯಾಪಾರ ಹಿತಾಸಕ್ತಿಗಳನ್ನು ವಿಸ್ತರಿಸುವ ಸಾಧನವಾಗಿ ಬಳಸದೆ ಪ್ರಾಮಾಣಿಕ ಪತ್ರಿಕೋದ್ಯಮಕ್ಕೆ ಸೀಮಿತವಾಗಬೇಕು ಎಂದು ಹೇಳಿದ್ದಾರೆ.

ಗುಲಾಬ್ ಚಂದ್ ಕೊಠಾರಿ ಅವರು ಬರೆದ "ಗೀತಾ ವಿಜ್ಞಾನ ಉಪನಿಷದ್" ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಜೆಐ ಎನ್.ವಿ.ರಮಣ ಅವರು, ಸ್ವತಂತ್ರ ಪತ್ರಿಕೋದ್ಯಮ ಪ್ರಜಾಪ್ರಭುತ್ವದ ಬೆನ್ನೆಲುಬು ಮತ್ತು ಪತ್ರಕರ್ತರು ಜನರ ಕಣ್ಣು ಮತ್ತು ಕಿವಿಗಳಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದ್ದಾರೆ.

'ವಿಶೇಷವಾಗಿ ಭಾರತೀಯ ಸಾಮಾಜಿಕ ಸನ್ನಿವೇಶದಲ್ಲಿ ಸತ್ಯಗಳನ್ನು ಪ್ರಸ್ತುತಪಡಿಸುವುದು ಮಾಧ್ಯಮ ಸಂಸ್ಥೆಗಳ ಜವಾಬ್ದಾರಿಯಾಗಿದೆ. ಈಗಲೂ ಜನರು ಏನನ್ನು ಮುದ್ರಿಸಿದರೂ ಅದನ್ನು ಸತ್ಯ ಎಂದು ನಂಬಿದ್ದಾರೆ. ಮಾಧ್ಯಮಗಳು ತನ್ನ ಪ್ರಭಾವ ಮತ್ತು ವ್ಯಾಪಾರ ಹಿತಾಸಕ್ತಿಗಳನ್ನು ವಿಸ್ತರಿಸುವ ಸಾಧನವಾಗಿ ಬಳಸದೆ ಪ್ರಾಮಾಣಿಕ ಪತ್ರಿಕೋದ್ಯಮಕ್ಕೆ ಸೀಮಿತಗೊಳಿಸಬೇಕು ಎಂದು ಸಿಜೆಐ ರಮಣ ಹೇಳಿದರು.

ಅಂತೆಯೇ "ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ವ್ಯಾಪಾರದ ಸಾಮಾನುಗಳಿಲ್ಲದ ಮಾಧ್ಯಮ ಸಂಸ್ಥೆಗಳು ಮಾತ್ರ ಪ್ರಜಾಪ್ರಭುತ್ವಕ್ಕಾಗಿ ಹೋರಾಡಲು ಸಾಧ್ಯವಾಯಿತು. ಮಾಧ್ಯಮ ಸಂಸ್ಥೆಗಳ ನೈಜ ಸ್ವರೂಪವನ್ನು ಖಂಡಿತವಾಗಿಯೂ ಕಾಲಕಾಲಕ್ಕೆ ನಿರ್ಣಯಿಸಲಾಗುತ್ತದೆ ಮತ್ತು ಪರೀಕ್ಷಾ ಸಮಯದಲ್ಲಿ ಅವರ ನಡವಳಿಕೆಯಿಂದ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುತ್ತದೆ. ಮಾಧ್ಯಮ ಸಂಸ್ಥೆಯು ಇತರ ವ್ಯಾಪಾರ ಹಿತಾಸಕ್ತಿಗಳನ್ನು ಹೊಂದಿರುವಾಗ, ಅದು "ಬಾಹ್ಯ ಒತ್ತಡಗಳಿಗೆ" ಗುರಿಯಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

"ಸಾಮಾನ್ಯವಾಗಿ, ಸ್ವತಂತ್ರ ಪತ್ರಿಕೋದ್ಯಮದ ಉತ್ಸಾಹಕ್ಕಿಂತ ವ್ಯಾಪಾರ ಹಿತಾಸಕ್ತಿಗಳು ಮೇಲುಗೈ ಸಾಧಿಸುತ್ತಿವೆ. ಪರಿಣಾಮವಾಗಿ, ಪ್ರಜಾಪ್ರಭುತ್ವವು ಕೂಡ ರಾಜಿಯಾಗುತ್ತದೆ. ಸ್ವತಂತ್ರ ಪತ್ರಿಕೋದ್ಯಮ ಪ್ರಜಾಪ್ರಭುತ್ವದ ಬೆನ್ನೆಲುಬು. ಪತ್ರಕರ್ತರು ಜನರ ಕಣ್ಣು ಮತ್ತು ಕಿವಿಗಳು. ವಿಶೇಷವಾಗಿ ಭಾರತೀಯ ಸಾಮಾಜಿಕ ಸನ್ನಿವೇಶದಲ್ಲಿ ಸತ್ಯಗಳನ್ನು ಪ್ರಸ್ತುತಪಡಿಸುವುದು ಮಾಧ್ಯಮ ಸಂಸ್ಥೆಗಳ ಜವಾಬ್ದಾರಿಯಾಗಿದೆ ಎಂದು ರಮಣ ಹೇಳಿದರು.

ಸದ್ದಿಲ್ಲದೆ ವ್ಯಾಪಕಗೊಳ್ಳುತ್ತಿದೆ ಕೊರೊನಾ ಸೋಂಕು

ಮಂಗಳವಾರ ರಾಜ್ಯದಲ್ಲಿ 1425 ಪ್ರಕರಣ ವರದಿ, ಮೈಸೂರಲ್ಲಿ 53 ಜನರಿಗೆ ಕೋವಿಡ್

ಮೈಸೂರು, ಜು.26(ಎಂಕೆ)– ಮೈಸೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಕೊರೊನಾ ಸೋಂಕು ಮತ್ತೆ ಹೆಚ್ಚಾಗುತ್ತಿದ್ದರೂ ಅನುಭವಿಸಿದ ಸಂಕಷ್ಟ ಮರೆತು ಸಾರ್ವಜನಿಕರು ವರ್ತಿಸುತ್ತಿದ್ದಾರೆ.



ರಾಜ್ಯದಲ್ಲಿಂದು 1,425 ಮಂದಿಗೆ ಕೊರೊನಾ ಸೋಂಕು ತಗುಲಿದ್ದು, 39,98,142 ಕ್ಕೆ ಏರಿಕೆಯಾಗಿದೆ. ದಿನದಿಂದ ದಿನಕ್ಕೆ ಸೋಂಕಿತರ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ಇದರ ನಡುವೆ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಮರೆತಿರುವ ಸಾರ್ವಜನಿಕರು ಕೊರೊನಾ ಹೆಚ್ಚಳಕ್ಕೆ ನೇರವಾಗಿ ಕಾರಣರಾಗುತ್ತಿದ್ದಾರೆ.

ಬೆಂಗಳೂರು ನಂತರ ಮೈಸೂರು: ಬಾಗಲಕೋಟೆ 2, ಬಳ್ಳಾರಿ 15, ಬೆಳಗಾವಿ 12, ಬೆಂಗಳೂರು ಗ್ರಾಮಾಂತರ 19, ಬೆಂಗಳೂರು ನಗರ 1,198, ಬೀದರ್ 4, ಚಾಮರಾಜನಗರ 5, ಚಿಕ್ಕಬಳ್ಳಾಪುರ 4, ದಕ್ಷಿಣಕನ್ನಡ 12, ದಾವಣಗೆರೆ 4, ಧಾರವಾಡ 17, ಗದಗ ಕಲಬುರಗಿ 7, ಕೊಡಗು 7, ಕೋಲಾರ 8, ಮಂಡ್ಯ 5, ಮೈಸೂರು 53, ರಾಯಚೂರು 3, ಶಿವಮೊಗ್ಗ 9, ತುಮಕೂರು 18, ಉಡುಪಿ 3, ಉತ್ತರಕನ್ನಡ 7, ವಿಜಯಪುರ 12, ಯಾದಗಿರಿ 1 ಸೇರಿ ಒಂದೇ ದಿನ 1,425 ಮಂದಿಗೆ ಸೋಂಕು ತಗುಳಿದ್ದು, ಬೆಂಗಳೂರು ನಂತರ ಮೈಸೂರಿನಲ್ಲಿ ಸೋಂಕು ಹರಡುವಿಕೆ ಪ್ರಮಾಣ ಹೆಚ್ಚಾಗುತ್ತಿದೆ.

ಇದುವರೆಗೂ ರಾಜ್ಯದಲ್ಲಿ 39,49,147 ಮಂದಿ ಗುಣಮುಖರಾಗಿ ಡಿಸ್ಚಾರ್ಜ್ ಆಗಿದ್ದರೆ, ಸೋಂಕಿನಿಂದ ದಿನಕ್ಕೆ ಒಂದೆರಡು ಮಂದಿಯಂತೆ ಈವರೆಗೆ 40,092 ಜನರು ಸಾವನ್ನಪ್ಪಿದ್ದಾರೆ. ಇನ್ನೂ 8,861 ಸಕ್ರೀಯ ಪ್ರಕರಣಗಳಿದ್ದು, ಅಗತ್ಯ ಮುಂಜಾಗ್ರತಾ ಕ್ರಮಕೈಗೊಳ್ಳದಿದ್ದರೆ ಪುನಃ ಲಾಕ್‌ಡೌನ್‌ನಂತಹ ಸಂಕಷ್ಟದ ದಿನಗಳನ್ನು ಎದುರಿಸಬೇಕಾಗುತ್ತದೆ ಎಂದು ಕೆಲ ಪ್ರಜ್ಞಾವಂತ ನಾಗರಿಕರು ಎಚ್ಚರಿಸಿದ್ದಾರೆ.

ಮೈಸೂರು: ಮೈಸೂರಿನಲ್ಲಿಯೂ ಕೊರೊನಾ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ಮಂಗಳವಾರ 53 ಮಂದಿಗೆ ಸೋಂಕು ತಗುಲಿದ್ದು, ಪ್ರಕರಣಗಳ ಸಂಖ್ಯೆ 2,30,235ಕ್ಕೆ ಏರಿಕೆಯಾಗಿದೆ. ಈ ವರೆಗೆ 2,560 ಮಂದಿ ಮೃತಪಟ್ಟಿದ್ದು, 169 ಸಕ್ರೀಯ ಪ್ರಕರಣಗಳಿವೆ.

ಮಲ ಹೊರುವ ಪದ್ಧತಿ ನಿಷೇಧಕ್ಕೆ 50 ವರ್ಷ ಹಿನ್ನೆಲೆ

ಪೌರಕಾರ್ಮಿಕರಿಗೆ ಶಾಶ್ವತ ಸೂರು ಕಲ್ಪಿಸಿದ ಹರ್ಷವರ್ಧನ್

ತಾತ ಬಿ.ಬಸವಲಿಂಗಪ್ಪ ಹೆಸರಿನಲ್ಲಿ ಬಡಾವಣೆ ನಿರ್ಮಾಣ, ಪೌರಕಾರ್ಮಿಕರಿಗೆ ನಿವೇಶನ ಹಕ್ಕುಪತ್ರ ವಿತರಣೆ

ನಂಜನಗೂಡು, ಜು.26– ಕ್ಷೇತ್ರಕ್ಕೆ ನೂರಾರು ಕೋಟಿ ಅನುದಾನ ತಂದರೂ, ನನಗೆ ಆತ್ಮತೃಪ್ತಿ ಕೊಟ್ಟಿರಲಿಲ್ಲ. ಆದರೆ 40 ವರ್ಷಗಳಿಂದ ಸ್ವಂತ ಮನೆಯಿಲ್ಲದೆ ಪರಿತಪಿಸುತ್ತಿದ್ದ 27 ಪೌರಕಾರ್ಮಿಕ ಕುಟುಂಬಗಳಿಗೆ ಶಾಶ್ವತ ಸೂರು ಕಲ್ಪಿಸಿರುವುದು ನನಗೆ ಹೆಮ್ಮೆ ಹಾಗೂ ಆತ್ಮತೃಪ್ತಿ ಕೊಟ್ಟಿದೆ ಎಂದು ಶಾಸಕ ಬಿ.ಹರ್ಷವರ್ಧನ್ ಭಾವುಕರಾದರು.

ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಮಂಗಳವಾರ ಬಿ.ಬಸವಲಿಂಗಪ್ಪ ಬಡಾವಣೆ ಅನಾವರಣ, ಆರೋಗ್ಯ ತಪಾಸಣಾ ಶಿಬಿರ ಹಾಗೂ ಪೌರಕಾರ್ಮಿಕ ಕುಟುಂಬಗಳಿಗೆ ನಿವೇಶನ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು.

ಕಪಿಲಾ ನದಿ ಪ್ರವಾಹ ಸಂದರ್ಭ ಹುಲ್ಲಹಳ್ಳಿ ಪೌರಕಾರ್ಮಿಕರ ಬವಣೆಯನ್ನು ಕಣ್ಣಾರೆ ಕಂಡು ಅವಕ್ಕಾಗಿದ್ದೆ. 40 ವರ್ಷಗಳಿಂದ ಶೋಚನೀಯ ಸ್ಥಿತಿಯಲ್ಲಿ ಪೌರಕಾರ್ಮಿಕ ಕುಟುಂಬಗಳು ಜೀವನ ದೂಡುತ್ತಿರುವುದನ್ನು ಕಂಡು ಇವರಿಗೆ ಶಾಶ್ವತ ಸೂರು ಒದಗಿಸಬೇಕೆಂಬ ಸಂಕಲ್ಪ ಮಾಡಿದೆ. 1.1 ಎಕರೆ ಜಾಗ ಮಂಜೂರಾತಿ, ಹಕ್ಕುಪತ್ರ ವಿತರಣೆಗೆ ಸರ್ಕಾರದಿಂದ ಮಂಜೂರಾತಿ ಕೊಡಿಸುವಲ್ಲಿ ನಾನು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಸಮಾಜದ ಕಟ್ಟಕಡೆ ವ್ಯಕ್ತಿಗೂ ಸಮಾನ ಗೌರವ ಹಾಗೂ ಸ್ಥಾನಮಾನ ಸಿಗಬೇಕೆಂಬುದು ನನ್ನ ತಾತ ಬಿ.ಬಸವಲಿಂಗಪ್ಪ ಅವರ ಆಶಯವಾಗಿತ್ತು. ಬಿ.ಬಸವಲಿಂಗಪ್ಪನವರು 1972ರಲ್ಲಿ ತಲೆ ಮೇಲೆ ಮಲ ಹೊರುವ ಪದ್ಧತಿ ನಿಷೇಧಿಸಿ ಇಂದಿಗೆ 50 ವರ್ಷ. ಈ ಸುವರ್ಣ ದಿನ ಪೌರಕಾರ್ಮಿಕರಿಗಾಗಿ ಬಡಾವಣೆ ಅನಾವರಣ ಹಾಗೂ ಹಕ್ಕುಪತ್ರ ವಿತರಣೆ ಮಾಡಿರುವುದು ನನಗೆ ಆತ್ಮತೃಪ್ತಿ ಕೊಟ್ಟ ಅಮೃತ ಘಳಿಗೆ ಎಂದು ಭಾವುಕರಾದರು.

ತಾಪಂ ಇಓ ಶ್ರೀನಿವಾಸ್ ಮಾತನಾಡಿ, ಪೌರಕಾರ್ಮಿಕ ಎಂಬ ಹೆಸರು ಕೊಟ್ಟ ಕೀರ್ತಿ ಬಿ.ಬಸವಲಿಂಗಪ್ಪ ಅವರಿಗೆ ಸಲ್ಲುತ್ತದೆ. ತಲೆ ಮೇಲೆ ಮಲ ಹೊರುವ ಪದ್ಧತಿ ನಿಷೇಧಿಸಿ ಕರ್ನಾಟಕದ ಉಕ್ಕಿನ ಮನುಷ್ಯ ಎನಿಸಿದ್ದಾರೆ ಎಂದರು.

ರಾಜ್ಯ ಸಂಪನ್ಮೂಲ ವ್ಯಕ್ತಿ ಡಾ.ಕೆ.ಶಂಕರೇಗೌಡರು ಬಿ.ಬಸವಲಿಂಗಪ್ಪ ಅವರ ಜೀವನಯಾನ ಕುರಿತು ಉಪನ್ಯಾಸ ನೀಡಿದರು. ತಹಸೀಲ್ದಾರ್ ಎಂ.ಶಿವಮೂರ್ತಿ, ಗ್ರಾಪಂ ಅಧ್ಯಕ್ಷ ಮಹೇಶ್, ಉಪಾಧ್ಯಕ್ಷೆ ಜ್ಯೋತಿ, ಸದಸ್ಯರಾದ ನಾಗೇಂದ್ರ, ಮಲ್ಲಿಕಾರ್ಜುನ, ಲೋಕೇಶ್, ಶಿವಣ್ಣ, ಅನ್ವರ್ ಅಹಮದ್, ಸಲ್ಮಾ, ರತ್ನಮ್ಮ, ಕುಮಾರ, ಸುಧಾ, ಸುರೇಶ್, ಬಿಜೆಪಿ ಅಧ್ಯಕ್ಷ ಪಿ.ಮಹೇಶ್ ಹೊರಳವಾಡಿ, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಬಿ.ಎಸ್.ರಾಮು ಸೇರಿದಂತೆ ಇತರರಿದ್ದರು.



ಹುಲ್ಲಹಳ್ಳಿ ಗ್ರಾಮದಲ್ಲಿ ಪೌರಕಾರ್ಮಿಕರಿಗೆ ಶಾಸಕ ಬಿ.ಹರ್ಷವರ್ಧನ್ ನಿವೇಶನ ಹಕ್ಕುಪತ್ರ ವಿತರಿಸಿ, ಗೌರವಿಸಿದರು.

> ತಾಲೂಕಿನ ಮಹದೇವನಗರದಲ್ಲೂ ಪೌರಕಾರ್ಮಿಕರಿಗೆ ಮತ್ತೊಂದು ಬಡಾವಣೆ ನಿರ್ಮಾಣ ಮಾಡಬೇಕೆಂಬ ಇರಾದೆ ಹೊಂದಿದ್ದೇನೆ. ಹೇಳಿದ್ದನ್ನು ಮಾಡುವುದು ನನ್ನ ಸ್ವಭಾವ. ನನ್ನ ಅಧಿಕಾರಾವಧಿಯಲ್ಲಿ ಮಾಡಿದ ಸಾಧನೆಯ ಶ್ವೇತಪತ್ರ ಹೊರಡಿಸಿಯೇ ಚುನಾವಣೆಗೆ ಹೋಗುತ್ತೇನೆ.
> -ಬಿ.ಹರ್ಷವರ್ಧನ್, ಶಾಸಕ

ಸರಗೂರಲ್ಲಿ ಶಾಲಾ ಮಕ್ಕಳಿಗೆ ಮೊಟ್ಟೆ ವಿತರಣೆ



ಸರಗೂರು, ಜು.26– ಸರ್ಕಾರ ಮಧ್ಯಾಹ್ನದ ಬಿಸಿಯೂಟದೊಂದಿಗೆ 1ರಿಂದ 8ನೇ ತರಗತಿ ಮಕ್ಕಳಿಗೆ ಮೊಟ್ಟೆ ವಿತರಿಸುತ್ತಿರುವುದು ಶ್ಲಾಘನೀಯ ಎಂದು ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ತಿಳಿಸಿದರು. ಪಟ್ಟಣದ ಸರ್ಕಾರಿ ಹಿರಿಯ ಬಾಲಕಿಯರ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದೊಂದಿಗೆ ಮೊಟ್ಟೆ ವಿತರಿಸಿ ಅವರು ಮಾತನಾಡಿದರು. ಸರ್ಕಾರ ಶಾಲಾ ಮಕ್ಕಳಿಗೆ ಬಿಸಿಯೂಟ ಯೋಜನೆ ಜಾರಿಗೊಳಿಸಿದೆ. ಅಲ್ಲದೆ ಕ್ಷೀರಭಾಗ್ಯವನ್ನು ಒದಗಿಸಿದೆ. ಅದೇ ರೀತಿ ಇದೀಗ ಮೊಟ್ಟೆ ವಿತರಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಬಿ.ಆರ್.ಸಿ.ಕೃಷ್ಣಯ್ಯ, ಅಕ್ಷರ ದಾಸೋಹ ನಿರ್ದೇಶಕ ಸಿದ್ದರಾಜು, ಪಪಂ ಸದಸ್ಯ ವಿರೇಶ್, ಸಿಆರ್‌ಪಿಗಳಾದ ಲೋಕೇಶ್, ಮಂಜುನಾಥ್, ಜೆಎಸ್‌ಎಸ್ ಮುಖ್ಯ ಶಿಕ್ಷಕರಾದ ಮಹಮದ್ ಅಂಜುಮ್ ಪಾಷ, ಗಂಗಾಧರಯ್ಯ, ಜೆಡಿಎಸ್ ಯುವ ಮುಖಂಡರಾದ ಎಂ.ನಾಗರಾಜು, ಶಾಲಾ ಮುಖ್ಯ ಶಿಕ್ಷಕಿ ರಾಜಮ್ಮ, ಸಹ ಶಿಕ್ಷಕರಾದ ಕೃಷ್ಣವೇಣಿ, ರೇಖಾ, ಸುನೀತಾ, ಮಂಜುಳ ವರ್ಷಿಣಿ, ಎಸ್‌ಡಿಎಂಸಿ ಅಧ್ಯಕ್ಷ ಶ್ರೀನಿವಾಸ್, ಸದಸ್ಯರಾದ ಕೆಂಡಗಣ್ಣಮ್ಮ, ಸುಜಾತ, ಶಾಲಾ ಸಿಬ್ಬಂದಿ ಹಾಜರಿದ್ದರು.

ಇಂದು ಕೋಟೆಯಲ್ಲಿ ಪತ್ರಿಕಾ ದಿನಾಚರಣೆ

ಹೆಚ್.ಡಿ.ಕೋಟೆ, ಜು.26– ಕೋಟೆ–ಸರಗೂರು ತಾಲೂಕು ಪತ್ರಕರ್ತರ ಸಂಘದಿಂದ ಪಟ್ಟಣದ ಜೈನ್ ಭವನದಲ್ಲಿ ನಾಳೆ (ಜು.27) ಬೆಳಗ್ಗೆ 11 ಗಂಟೆಗೆ ಪತ್ರಿಕಾ ದಿನಾಚರಣೆ ಆಯೋಜಿಸಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಎಸ್.ಆರ್.ನಾಗರಾಮ ತಿಳಿಸಿದ್ದಾರೆ.

ಶಾಸಕ ಅನಿಲ್ ಚಿಕ್ಕಮಾದು ಕಾರ್ಯಕ್ರಮ ಉದ್ಘಾಟಿಸಲಿದ್ದು, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಜಿಲ್ಲಾ ನಿರ್ದೇಶಕ ಎಂ.ಎಲ್.ರವಿಕುಮಾರ್ ಭಾಗವಹಿಸಲಿದ್ದಾರೆ. ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಹಿರಿಯ ಪತ್ರಕರ್ತರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದ್ದಾರೆ.

5 ಲಕ್ಷ ರೂ. ಕಳವು: ಇಬ್ಬರು ಖದೀಮರ ಬಂಧನ

ತಿ.ನರಸೀಪುರ, ಜು.26– ಪಟ್ಟಣದಲ್ಲಿ ನಡೆದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಖದೀಮರನ್ನು ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಬಂಧಿಸುವಲ್ಲಿ ಪಟ್ಟಣ ಪೊಲೀಸರು ಯಶಸ್ವಿಯಾಗಿದ್ದಾರೆ.



ತ್ರಿವೇಣಿ ನಗರದ ಚಡ್ಡಿವಠಾರದ ನಿವಾಸಿ ಪ್ರವೀಣ್, ತಮ್ಮ ಮನೆಯಲ್ಲಿದ್ದ 5 ಲಕ್ಷ ರೂ. ಕಳುವಾಗಿರುವ ಬಗ್ಗೆ ಜು.24 ರಂದು ತಿ.ನರಸೀಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆರೋಪಿಗಳ ಪತ್ತೆಗಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ, ನಂಜನಗೂಡು ಡಿವೈಎಸ್ಪಿ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ಬಿ.ಕೆ.ಮಹೇಶ್ ಕುಮಾರ್ ನೇತೃತ್ವ ತನಿಖಾ ತಂಡ ರಚಿಸಲಾಗಿತ್ತು. ಮನೆ ಮಾಲೀಕರಿಂದ ಸ್ಪಷ್ಟ ಮಾಹಿತಿ ಪಡೆದು ತನಿಖೆ ಚುರುಕುಗೊಳಿಸಿದ ಪೊಲೀಸರು, ಪ್ರಕರಣ ನಡೆದ ಕೆಲವೇ ಗಂಟೆಗಳಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಿ, 5 ಲಕ್ಷ ರೂ. ವಶಪಡಿಸಿಕೊಂಡಿದ್ದಾರೆ. ವಿಚಾರಣೆ ವೇಳೆ ಪ್ರವೀಣ್ ಸ್ನೇಹಿತರೇ ಆರೋಪಿಗಳು ಎಂದು ತಿಳಿದು ಬಂದಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಸ್ಪಿ ಡಾ.ಬಿ.ಎನ್.ನಂದಿನಿ, ಶೀಘ್ರ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದ ಇನ್ಸ್‌ಪೆಕ್ಟರ್ ಮಹೇಶ್ ಕುಮಾರ್ ಮತ್ತು ಸಿಬ್ಬಂದಿಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರಶಂಸಿಸಿ, ನಗದು ಬಹುಮಾನ ಘೋಷಿಸಿದ್ದಾರೆ ಎಂದರು. ಸಾರ್ವಜನಿಕರು ಆಭರಣ ಮತ್ತು ನಗದನ್ನು ಜೊತೆಯಲ್ಲಿ ಕೊಂಡೊಯ್ಯುವಾಗ ಹೆಚ್ಚು ಜಾಗ್ರತೆಯಿಂದ ಇರಬೇಕು. ಸಂಶಯಾಸ್ಪದವಾಗಿ ಓಡಾಡುವ ವ್ಯಕ್ತಿಗಳ ಬಗ್ಗೆ ಹೆಚ್ಚು ನಿಗಾ ವಹಿಸಬೇಕು. ಅಪರಾಧ ಪ್ರಕರಣಗಳನ್ನು ಭೇದಿಸಲು ಪೊಲೀಸರಿಗೆ ಸಾರ್ವಜನಿಕ ಸಹಕಾರ ಅಗತ್ಯ ಎಂದರು.

ಈ ವೇಳೆ ನಂಜನಗೂಡು ಡಿವೈಎಸ್ಪಿ ಪಿ.ಗೋವಿಂದರಾಜು, ಸಿಪಿಐ ಕೃಷ್ಣಪ್ಪ, ಇನ್ಸ್‌ಪೆಕ್ಟರ್ ಮಹೇಶ್ ಕುಮಾರ್.ಬಿ.ಕೆ, ಸಿಬ್ಬಂದಿಗಳಾದ ಗೋವಿಂದರಾಜು, ಮಾದೇಶ್, ಭಾಸ್ಕರ್, ಮಲಗೌಡ ಕೆಂಪಿ, ಪರಶುರಾಮ್ ನಾಟಿಕಾರ್, ರಂಗಸ್ವಾಮಿ ಇತರರಿದ್ದರು.

ಪಿಡಿಓಗಳು ನಿಗದಿತ ಸಮಯಕ್ಕೆ ಕಚೇರಿಗೆ ಹಾಜರಾಗಿ

ಜಿಪಂ ಸಿಇಓ ಪೂರ್ಣಿಮಾ ಸೂಚನೆ

ತಿ.ನರಸೀಪುರ, ಜು.26– ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನಿಗದಿತ ಸಮಯಕ್ಕೆ ಕಚೇರಿಗೆ ಹಾಜರಾಗುವಂತೆ ಜಿಪಂ ಸಿಇಓ ಪೂರ್ಣಿಮಾ ಸೂಚಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ನರೇಗಾ ಪ್ರಗತಿ ಕುರಿತು ಆಯೋಜಿಸಿದ್ದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಪಿಡಿಓಗಳು ಸಕಾಲಕ್ಕೆ ಕಚೇರಿಗೆ ಆಗಮಿಸದಿರುವುದರಿಂದ ಪ್ರಗತಿಯಲ್ಲಿ ಭಾರೀ ಇಳಿಕೆ ಕಂಡಿದೆ. ಹಾಗಾಗಿ ತಾಪಂ ಇಓ ಪ್ರತಿ ಪಂಚಾಯಿತಿ ಅಧಿಕಾರಿಗಳ ಹಾಜರಾತಿಯನ್ನು ಪ್ರತಿದಿನ ಪರಿಶೀಲಿಸಬೇಕು ಎಂದರು. ಅಧಿಕಾರಿಗಳ ಗೈರಿನಿಂದ ಕೆಲಸ ಮಂದಗತಿಯಲ್ಲಿ ನಡೆಯುತ್ತಿರುವ ಬಗ್ಗೆ ಹಲವು ದೂರುಗಳು ಬಂದಿದ್ದು, ಅಧಿಕಾರಿಗಳು ಸಕಾಲಕ್ಕೆ ಕಚೇರಿಗೆ ಆಗಮಿಸಿ ಸಾರ್ವಜನಿಕ ಕೆಲಸದ ಬಗ್ಗೆ ಹೆಚ್ಚು ಗಮನ ಹರಿಸುವಂತೆ ಸಲಹೆ ನೀಡಿದರು.



ಅನುದಾನ ಬಳಕೆಗೆ ತಾಕೀತು: ನರೇಗಾ ಯೋಜನೆ ಅನುದಾನ ಬಳಕೆ ಕುಸಿತ ಕಂಡಿದ್ದು, ಇದರಿಂದ ಮೈಸೂರು ಜಿಲ್ಲೆಯು ಪ್ರಗತಿಯಲ್ಲಿ ಹಿಂದುಳಿದಿದೆ. ಪಿಡಿಓಗಳು ಕೆರೆಕಟ್ಟೆ ಹೂಳೆತ್ತಿಸುವುದು, ಮುಜರಾಯಿ ಮತ್ತು ಪುರಾತತ್ವ ಇಲಾಖೆಯ ದೇವಾಲಯಗಳ ಅಭಿವೃದ್ಧಿ ಸೇರಿದಂತೆ ಸಮುದಾಯದ ಕೆಲಸಗಳಿಗೆ ನರೇಗಾ ನಿಧಿ ಬಳಸುವ ಮೂಲಕ ನಿಗದಿತ ಗುರಿ ಮುಟ್ಟಲು ಹೆಚ್ಚು ಶ್ರಮವಹಿಸಿ ಎಂದರು.

ಸಹಕಾರ ಮುಖ್ಯ: ನರೇಗಾ ಯೋಜನೆ ರೇಷ್ಮೆ, ತೋಟಗಾರಿಕೆ, ಕೃಷಿ, ಅರಣ್ಯ ಮತ್ತು ಇತರ ಇಲಾಖೆಗಳಲ್ಲೂ ಕಾರ್ಯ ವ್ಯಾಪಿಸಿರುವುದರಿಂದ ಹಲವು ಇಲಾಖೆ ಅಧಿಕಾರಿಗಳ ಜೊತೆ ಪಂಚಾಯಿತಿ ಅಧಿಕಾರಿಗಳು ಸಂವಹನ ನಡೆಸಿ ಅವರ ಸಹಕಾರದೊಂದಿಗೆ ನರೇಗಾ ಪ್ರಗತಿ ಸಾಧಿಸುವಂತೆ ಸಭೆಯಲ್ಲಿ ಪಿಡಿಓಗಳಿಗೆ ಸಲಹೆ ನೀಡಿದರು.

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಪ್ರಗತಿ ಸಾಧಿಸದಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದರು.

ದಾಖಲಾತಿ ಒದಗಿಸಿ: ಗ್ರಾಪಂಗಳ ಸಾಮಾಜಿಕ ಲೆಕ್ಕ ಪರಿಶೋಧನೆಗೆ ನಿಗದಿತ ಸಮಯದೊಳಗೆ ದಾಖಲಾತಿ ಒದಗಿಸುವುದು ಮತ್ತು ಅಧಿಕಾರಿಗಳು ಖುದ್ದು ಹಾಜರಿರುವಂತೆ ಎಚ್ಚರಿಕೆ ನೀಡಿದರು. ಇಲ್ಲವಾದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಆಗಿರುವ ಲೋಪದ ನಷ್ಟ ತುಂಬುವಂತೆ ಅಧಿಕಾರಿಯನ್ನೇ ನೇರ ಹೊಣೆ ಮಾಡಲಾಗುವುದು ಎಂದರು.

ಈ ವೇಳೆ ಜಿಲ್ಲಾ ಉಪ ಕಾರ್ಯದರ್ಶಿ ಕೃಷ್ಣರಾಜು, ಜಿಲ್ಲಾ ಯೋಜನಾಧಿಕಾರಿ ಸವಿತ, ತಾಪಂ ಇಓ ಕೃಷ್ಣ, ಯೋಜನಾಧಿಕಾರಿ ಜಯಂತಿ, ನರೇಗಾ ಸಹಾಯಕ ನಿರ್ದೇಶಕ ಶಶಿಕುಮಾರ್ ಇತರರಿದ್ದರು.

ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರ

ಹುಣಸೂರು, ಜು.26– ವಿದ್ಯಾರ್ಥಿಗಳು ಮನಸ್ಸಿಗೆ ಕಡಿವಾಣ ಹಾಕಿ ಸರಿಯಾದ ಮಾರ್ಗದಲ್ಲಿ ನಡೆದರೆ ಮಾತ್ರ ಗುರಿ ತಲುಪಲು ಸಾಧ್ಯ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು. ಹುಣಸೂರಿನ ಸ್ನೇಹಜೀವಿ ಗ್ರಾಮೀಣಾಭಿವೃದ್ಧಿ ಮತ್ತು ತರಬೇತಿ ಕೇಂದ್ರದ ವತಿಯಿಂದ ನಗರದ ಅಂಬೇಡ್ಕರ್ ಭವನದಲ್ಲಿ ಪದವಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ದೇಶ ಅಭಿವೃದ್ಧಿ ವಿಚಾರದಲ್ಲಿ ಈಗಾಗಲೇ ಹಲವು ದಾಖಲೆ ಸೃಷ್ಟಿಸಿದೆ ಆದರೆ ಇತ್ತೀಚಿನ ದಿನಗಳಲ್ಲಿ ಅಧಿಕಾರ ನಡೆಸುತ್ತಿರುವ ಸರ್ಕಾರಗಳು ದುಡಿಯುವ ಯುವಕರಿಗೆ ಉದ್ಯೋಗ ಸೃಷ್ಟಿಸಲಾಗದೇ ದೇಶದ ಆರ್ಥಿಕ ಪರಿಸ್ಥಿತಿ ಅಧೋಗತಿಗೆ ತಂದಿಟ್ಟಿದ್ದಾರೆ. ಕಳೆದ 60 ವರ್ಷಗಳ ಹಿಂದಿನ ಭಾರತದ ಆಡಳಿತಕ್ಕೂ ಇಂದಿನ 8 ವರ್ಷಗಳ ಭಾರತದ ಆಡಳಿತ ವ್ಯವಸ್ಥೆಗೂ ಅಜಗಜಾಂತರ ವ್ಯತ್ಯಾಸವಿದ್ದು, ದೇಶದ ಎಲ್ಲಾ ಕ್ಷೇತ್ರಗಳನ್ನು ಖಾಸಗೀಕರಣಗೊಳಿಸುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.



ಕಾರ್ಯಾಗಾರದಲ್ಲಿ ತಾಲೂಕಿನ 8 ಸರ್ಕಾರಿ ಹಾಗೂ ಖಾಸಗಿ ಪದವಿ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ನೀಡಲಾಯಿತು.



ಮೈಸೂರು ತಾಲೂಕಿನ ಕಡಕೊಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಧಾನಮಂತ್ರಿ ರಾಷ್ಟ್ರೀಯ ಪೋಷಣಾ ಅಭಿಯಾನದ ಅಂಗವಾಗಿ ಶಾಲಾ ಮಕ್ಕಳಿಗೆ ಮೊಟ್ಟೆ ಹಾಗೂ ಬಾಳೆಹಣ್ಣು ವಿತರಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಯೂನಿಯನ್ ರೈತ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕುಮಾರಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಜೆ.ರಮೇಶ್, ಕನ್ನಡ ಗೆಳೆಯರ ಬಳಗದ ಕಾರ್ಯದರ್ಶಿ ಸ್ವಾಮಿನಾಯಕ್, ಎಸ್‌ಡಿಎಂಸಿ ಅಧ್ಯಕ್ಷ ರವಿ, ಶಾಲಾ ಮುಖ್ಯೋಪಾಧ್ಯಾಯ ದುಂಡಯ್ಯ ಹಾಗೂ ಶಿಕ್ಷಕ ವರ್ಗ ಉಪಸ್ಥಿತರಿದ್ದರು.

ಆಹಾರ ಸುರಕ್ಷತೆಯಲ್ಲಿ ಮೈಸೂರು, ಬೆಂಗಳೂರು ರೈಲ್ವೆ ನಿಲ್ದಾಣಕ್ಕೆ 5 ಸ್ಟಾರ್ ರೇಟಿಂಗ್

ಬೆಂಗಳೂರು: ಸೌತ್ ವೆಸ್ಟರ್ನ್ ರೈಲ್ವೆಯ ಮೈಸೂರು ರೈಲು ನಿಲ್ದಾಣ ಮತ್ತು ಕೆಎಸ್‌ಆರ್ ಬೆಂಗಳೂರು ರೈಲು ನಿಲ್ದಾಣವು ಆಹಾರ ಸುರಕ್ಷತೆ ಮತ್ತು ಉತ್ತಮ ಗುಣಮಟ್ಟ ಕಾಯ್ದುಕೊಂಡಿದ್ದು, 5 ಸ್ಟಾರ್ ರೇಟಿಂಗ್ ಪಡೆದುಕೊಂಡಿವೆ.

ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು ಆಹಾರ ಸುರಕ್ಷತೆ ಮಟ್ಟದಲ್ಲಿ ಸೌತ್ ವೆಸ್ಟರ್ನ್ ರೈಲ್ವೆಯ ಮೈಸೂರು ರೈಲು ನಿಲ್ದಾಣ ಮತ್ತು ಕೆಎಸ್‌ಆರ್ ಬೆಂಗಳೂರು ರೈಲು ನಿಲ್ದಾಣಕ್ಕೆ 5 ಸ್ಟಾರ್ ರೇಟಿಂಗ್ ನೀಡುವುದರ ಮೂಲಕ 'ಈಟ್ ರೈಟ್ ಸ್ಟೇಷನ್' ಎಂದು ಪ್ರಮಾಣೀಕರಿಸಿದೆ.

ಮುಂಬರುವ ಚುನಾವಣೆಯಲ್ಲಿ ಸ್ಥಳೀಯರಿಗೆ ಟಿಕೆಟ್ ನೀಡಿ

ಹೆಚ್.ಡಿ.ಕೋಟೆ ತಾಲೂಕು ನಾಯಕ ಸಮಾಜದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ ಒತ್ತಾಯ

ಹೆಚ್.ಡಿ.ಕೋಟೆ, ಜು.26– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ ಪಕ್ಷಗಳು ಹೊರಗಿನವರಿಗೆ ಆದ್ಯತೆ ನೀಡದೆ ಸ್ಥಳೀಯ ನಾಯಕರಿಗೆ ಟಿಕೆಟ್ ನೀಡಬೇಕು ಎಂದು ತಾಲೂಕು ನಾಯಕ ಸಮಾಜದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ ಒತ್ತಾಯಿಸಿದರು.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ನಾಯಕ ಸಮುದಾಯದಿಂದ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ಗೋಮಾಳವಾಗಬಾರದು. ಕ್ಷೇತ್ರಕ್ಕೆ ಯಾವುದೇ ಕೊಡುಗೆ ನೀಡದಿದ್ದರೂ, ಕೆಲವರು ಚುನಾವಣೆ ವೇಳೆ ಕ್ಷೇತ್ರಕ್ಕಾಗಮಿಸಿ ಜನರ ಓಲೈಕೆಗೆ ಮುಂದಾಗಿರುವುದು ವಿಪರ್ಯಾಸ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಹಾಗೂ ಪ್ರಾದೇಶಿಕ ಪಕ್ಷವಾದ ಜೆಡಿಎಸ್ ವರಿಷ್ಠರು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ ಸ್ಥಳೀಯ ನಾಯಕರಿಗೆ ಮಣೆ ಹಾಕಬೇಕು ಎಂದರು.



ಮೈಸೂರು, ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ನಾಯಕ ಸಮುದಾಯ ಅತೀ ಹೆಚ್ಚಿನ ಸಂಖ್ಯೆಯಲ್ಲಿದ್ದು, ನಮ್ಮ ಜನಾಂಗದ ಪ್ರಮುಖ ಉಪಪಂಗಡಗಳಾದ ತಳವಾರ, ಪರಿವಾರ ಇವುಗಳನ್ನು ಪರಿಶಿಷ್ಟ ಪಂಗಡ ಮೀಸಲಾತಿ ವ್ಯಾಪ್ತಿಗೆ ತರಲು ಶ್ರಮಿಸಿದ ನಾಯಕರನ್ನು ಹೊರತುಪಡಿಸಿ ಇತರರಿಗೆ ಆದ್ಯತೆ ನೀಡಬಾರದು ಎಂದರು.

ತಾಲೂಕಿನ ಅಭಿವೃದ್ಧಿಗಾಗಿ ಮಾಜಿ ಶಾಸಕ ದಿ.ಚಿಕ್ಕಮಾದು, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಜಿಪಂ ಮಾಜಿ ಸದಸ್ಯ ಚಿಕ್ಕವೀರನಾಯ್ಕ ಸೇರಿದಂತೆ ಇತರ ಮುಖಂಡರು ಶ್ರಮಿಸಿದ್ದಾರೆ. ಅಂತಹವರನ್ನು ಹೊರತುಪಡಿಸಿ ಹೊರಗಿನಿಂದ ಬಂದವರಿಗೆ ಆದ್ಯತೆ ನೀಡಬಾರದು ಎಂದು.

ಕ್ಷೇತ್ರ ವ್ಯಾಪ್ತಿಯಲ್ಲಿ ಸಾಕಷ್ಟು ನಾಯಕರು ಮುಂಬರುವ ವಿಧಾನಸಭೆ ಚುನಾವಣೆ ಎದುರಿಸಲು ಸಜ್ಜಾಗಿದ್ದು, ಅವರಿಗೆ ಮಾತ್ರ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದ ಅವರು, ಈ ಸಭೆಯ ನಿರ್ಣಯವನ್ನು ಎಲ್ಲಾ ಪಕ್ಷಗಳಿಗೂ ಕಳುಹಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಸಿಪಿಎಂ ಶಿವಣ್ಣ, ಮಿಲ್ ನಾಗರಾಜು, ಜಿಯಾರ ನಾಗನಾಯಕ, ನಿಂಗನಾಯಕ, ಸ್ವಾಮಿ, ಸೂರಿ, ಕೃಷ್ಣ ಅಮಾಸೆನಾಯ್ಕ, ರಾಜೇಂದ್ರ, ಮರಳೂರುನಾಯ್ಕ, ಭೈರನಾಯಕ, ಶೇಖರ, ಸಿದ್ದು ಶಿವು, ಚಿಕ್ಕತಿಮ್ಮನಾಯಕ, ಜವರನಾಯಕ, ಆನಂದ, ಬಸವರಾಜು, ಚೆನ್ನಪ್ಪ, ಸ್ವಾಮಿ ಅನಿಲ್, ರವಿ, ಸೋಮಣ್ಣ, ಸಿದ್ದನಾಯ್ಕ, ರಾಮನಾಯ್ಕ, ಬೆಟ್ಟನಾಯ್ಕ, ಕೆಂಪನಾಯಕ, ಬಸವನಾಯಕ, ನಂಜನಾಯಕ, ಅಂಕಪ್ಪ ಸಿದ್ದನಾಯ್ಕ, ಭೈರನಾಯಕ ಇನ್ನಿತರರಿದ್ದರು.

> “ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೋಟೆ ಕ್ಷೇತ್ರಕ್ಕೆ ಹಳೇ ಮೈಸೂರು ಭಾಗದ ಸ್ಥಳೀಯ ಮುಖಂಡರನ್ನು ಹೊರತುಪಡಿಸಿ, ಅನ್ಯ ಕ್ಷೇತ್ರದವರಿಗೆ ಮಣೆ ಹಾಕಬಾರದು. ಕಳೆದ 40 ವರ್ಷಗಳಿಂದ ನಾಯಕ ಜನಾಂಗದವರ ಮೀಸಲಾತಿ ಮತ್ತು ಅವರ ಏಳಿಗೆಗೆ ನಿರಂತರವಾಗಿ ಶ್ರಮಿಸಿದ ಮುಖಂಡರಿಗೆ ಪ್ರಮುಖ ಪಕ್ಷಗಳು ಟಿಕೆಟ್ ನೀಡಬೇಕು. ಅನ್ಯ ಜಿಲ್ಲೆಯಿಂದ ಬರುವ ಹಣವುಳ್ಳವರು, ಉದ್ಯಮಿಗಳಿಗೆ ಸಹಕಾರ ನೀಡಬಾರದು.
> -ಚಾಕಹಳ್ಳಿ ಕೃಷ್ಣ ಜೆಡಿಎಸ್ ಮುಖಂಡ

ಮೈಸೂರು ಬೇಸಿಗೆ ರೇಸುಗಳು



11ನೇ ದಿನ, ಬುಧವಾರ 27–7–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಸ್ಟಾರ್ ಸುಪ್ರೀಮ್ ಪ್ಲೇಟ್–2000 ಮೀ. ರೇಟೆಡ್ 40 ರಿಂದ 65. ಮ.1.30ಕ್ಕೆ
1. ತಿಯಾಮಾರಿಯಾ 2. ದಿ ಲಾರ್ಡ್ 3. ಸಾದೀಕ್

II. ಅಬೈಡ್ ಪ್ಲೇಟ್–1400 ಮೀ. 3 ವರ್ಷದ (ಟರ್ಮ್ಸ್). ಮ.2.00ಕ್ಕೆ
1. ಬ್ರಾಕ್ಸ್‌ಟನ್ 2. ಮೆಡೋ ಫ್ಲವರ್ 3. ಮಿಸ್ಟಿಕ್ ಡಿವೈನ್

III. ಆಕ್ಸ್‌ಫರ್ಡ್ ಬ್ಲೂ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಐಲ್ಯಾಂಡ್ ಪಾರ್ಕ್ 2. ವಂದನ್ 3. ಮಿಸ್ ಚೈನಾ

IV. ಸಿ ಬಿಸ್ ಕ್ಯೂಟ್ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಕಂಟ್ರೀಸ್ ಡಿಲೈಟ್ 2. ಮಾರಕೇಶ್ 3. ಪಾಸ್ ಬೈಂಡರ್

V. ತಪತಿ ಪ್ಲೇಟ್ ಡಿ1–1400 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಫ್ಲಾಮಿಂಗೊ ಡ್ಯಾನ್ಸರ್ 2. ಸ್ಟಾರ್ ಜ್ಯೂವೆಲ್ 3. ಗ್ಯಾಲರಿ ಕ್ವೀನ್

VI. ರೇಸಿಂಗ್ ಜರ್ನಲಿಸ್ಟ್ ಟ್ರೋಫಿ–1600 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಸೀ ಲಯನ್ 2. ಎಮೇಲ್ಡಾ 3. ಗೋಲ್ಡ್ ಫೀಲ್ಡ್


VII. ಡಯಾ ಬಾಲಿಕಲ್ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಗೋಲ್ಡ್ ಕ್ರೆಸ್ಟ್ 2. ಕ್ರಿಮ್‌ಸನ್ ಕೈರ್ 3. ಬಯೋಮೆಟ್ರಿಕ್

VIII. ತಪತಿ ಪ್ಲೇಟ್ ಡಿ2–1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಲೈಕ್ ಮೈ ಡ್ಯಾಡಿ 2. ಕಂಟ್ರೀಸ್ ಪೇಸ್ 3. ಅಚೂಕ್

ದಿನದ ಅತ್ಯುತ್ತಮ..............................	: ಸೀ ಲಯನ್
ಡಬ್ಬಲ್..............................	: ಬ್ರಾಕ್ಸ್‌ಟನ್, ಫ್ಲಾಮಿಂಗೊ ಡ್ಯಾನ್ಸರ್
ಜಾಕ್‌ಪಾಟ್..............................	: 4, 5, 6, 7 ಮತ್ತು 8
I ಟ್ರಿಬಲ್..............................	: 1, 2 ಮತ್ತು 3
II ಟ್ರಿಬಲ್..............................	: 3, 4 ಮತ್ತು 5
III ಟ್ರಿಬಲ್..............................	: 6, 7 ಮತ್ತು 8
ಎಕ್ಸ್‌ಆಕ್ಟ್..............................	: 7 ಮತ್ತು 8

ಟಿಪ್‌ಸ್ಟರ್ ಪಿಜೆಸಿ

ಚದುರಂಗ ಪಂದ್ಯಾವಳಿ



ಮೈಸೂರು,ಜು.26–ಮೈಸೂರಿನ ಗ್ರೇಟ್ ಮೈಂಡ್ಸ್ ಚೆಸ್ ಅಕಾಡೆಮಿಯಿಂದ ಜು.31ರಂದು ಜಯಲಕ್ಷ್ಮಿಪುರಂ ನಗರದ ನೇಗಿಲಯೋಗಿ ಮರುಳೇಶ್ವರ ಸಮಾಜ ಸೇವಾ ಬಳಗದ ಆವರಣದಲ್ಲಿ ಚದುರಂಗ ಪಂದ್ಯಾವಳಿ ಏರ್ಪಡಿಸಲಾಗಿದೆ. ಪಂದ್ಯಾವಳಿ ವಿವಿಧ ವಿಭಾಗಗಳಲ್ಲಿ ನಡೆಯಲಿದೆ. ಆಸಕ್ತರು ಜು.31ರಂದು ಬೆಳಗ್ಗೆ 9 ಗಂಟೆಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 9448273082, 9535466661 ಮೂಲಕ ಸಂಪರ್ಕಿಸಬಹುದು.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

2ನೇ ವರ್ಷದ ಸವಿನೆನಪು




ಲೇ॥ ಶ್ರೀ ಬಸವೇಗೌಡರು
(ಲೇ॥ ಶ್ರೀ ವೆಂಕಟೇಗೌಡರ ಮಗ)
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರಿ ಸದಾ ನಿಮ್ಮನ್ನು ಸ್ಮರಿಸುತ್ತಿರುವ
ದುಃಖತಪ್ತರು: ಪತ್ನಿ ಕೆಂಪಮ್ಮ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ, ಚೋರನಹಳ್ಳಿ, ಮೈಸೂರು

9ನೇ ವರ್ಷದ ಪುಣ್ಯಸ್ಮರಣೆ



ಸೋಮ
ಸದಾ ತಮ್ಮ ಸ್ಮರಣೆಯಲ್ಲಿ : ತಾಯಿ: ಸರಸ್ವತಮ್ಮ, ಮಹದೇವ, ಲಕ್ಷ್ಮಿ



4ನೇ ವರ್ಷದ ಪುಣ್ಯಸ್ಮರಣೆ
ನಿಮ್ಮ ಪ್ರೀತಿ ನಮ್ಮ ಹೃದಯದಲ್ಲಿ ಸದಾ ಹಸಿರು, ಸದಾ ತಮ್ಮ ಸ್ಮರಣೆಯಲ್ಲಿ : ಪತ್ನಿ, ಸೊಸೆ, ಮಗಳು, ಹಾಗೂ ಮೊಮ್ಮಕ್ಕಳು, ಮಗ: ಸೋಮಣ್ಣ ತಾಲ್ಲೂಕು ಕುರುಬರ ಸಂಘ ನಿರ್ದೇಶಕರು, ಚಾಮರಾಜನಗರ ತಾಲ್ಲೂಕು
ಶ್ರೀ ಮರೀಗೌಡರು
ಸೊತ್ತನಹುಂಡಿ

ನಂಜನಗೂಡು ಸಿವಿಲ್ ಜಡ್ಜ್ (ಹಿರಿಯ ಶ್ರೇಣಿ) ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

ಎಫ್.ಡಿ.ಪಿ.: 07 /2020

ಅರ್ಜಿದಾರರು : ಹೊಂಬಳಮ್ಮ ಮತ್ತು ಇತರರು

ವಿರುದ್ಧ

ಎದುರುದಾರರು : ಶಿವಪ್ಪ ಮತ್ತು ಇತರರು

ಎದುರುದಾರರು : 6) ಹೆಚ್.ನಾಗರತ್ನಮ್ಮ, ಪ್ರಾಪ್ತ ವಯಸ್ಕರು ಕೋಂ ಎಸ್ ಹನುಮಂತರಾವ್ ವಾಸ: ಪಂಜನಹಳ್ಳಿ ಗ್ರಾಮ, ಕಸಬಾ ಹೋಬಳಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

8) ವಿ.ಜ್ಯೋತಿಲಿಂಗವ್ ಬಿನ್ ಲೇ॥ ತವಯ್ಯಮರ್‌ಚಾರ್ ಪ್ರಾಪ್ತ ವಯಸ್ಕರು. ವಾಸ: ಶ್ರೀಕಂಠಪುರಿ ಎಕ್ಸ್‌ಟೇನ್‌ಷನ್ ನಂಜನಗೂಡು ಟೌನ್.

10) ವಿ.ಬಾಬು ಬಿನ್ ಪಿ.ವೆಂಕಟೇಶಚಾರ್, ಪ್ರಾಪ್ತ ವಯಸ್ಕರು. ಇಬ್ಬರ ವಾಸ: #5093/3, ನಾಗಮ್ಮ ಲೇಔಟ್, 4ನೇ ಕ್ರಾಸ್, ಮೇನ್ ರೋಡ್, ಲೈಫ್ಟ್ ಸೈಡ್ ಕೆ.ಹೆಚ್.ಬಿ. ಕಾಲೋನಿ, ನಂಜನಗೂಡು ಟೌನ್.

13) ಎಸ್.ವಿಜಯ ಬಿನ್ ಟಿ.ಶಿವಣ್ಣ, ಪ್ರಾಪ್ತ ವಯಸ್ಕರು, ವಾಸ: ವಕ್ಕಲಗೇರಿ, ನಂಜನಗೂಡು ಟೌನ್.

14) ಟಿ.ಆರ್.ರಂಗಸ್ವಾಮಿ ಬಿನ್ ಟಿ.ಆರ್.ರಾಮಶೆಟ್ಟಿ, ಪ್ರಾಪ್ತ ವಯಸ್ಕರು, ವಾಸ: ತಗಡೂರು ಗ್ರಾಮ, ಬಿಳಿಗೆರೆ ಹೋಬಳಿ, ನಂಜನಗೂಡು ತಾ॥.

17) ಮಹದೇವಪ್ಪ ಬಿನ್ ಲೇಟ್ ಪಿ.ಮಾದೇಗೌಡ, ವಾಸ: ಶ್ರೀಕಂಠಪುರಿ ಲೇಔಟ್, 11ನೇ ಕ್ರಾಸ್, ನಂಜನಗೂಡು ಟೌನ್, ಮೈಸೂರು ಜಿಲ್ಲೆ.

18) ಹೆಚ್.ಆರ್.ರಾಮಚಾರಯ್ಯ, ವಾಸ: #2243, ಶ್ರೀಕಂಠಪುರಿ ಲೇಔಟ್, 11ನೇ ಕ್ರಾಸ್, ನಂಜನಗೂಡು ಟೌನ್, ಮೈಸೂರು ಜಿಲ್ಲೆ.

ಪತ್ರಿಕಾ ಪ್ರಕಟಣೆ

ಅರ್ಜಿದಾರರು 1ನೇ ಎದುರುದಾರರ ವಿರುದ್ಧ ಭಾಗಾಂಶ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಮೇಲ್ಕಂಡ ವ್ಯಕ್ತಿಗಳು ಸಹ ಪ್ರತಿವಾದಿಗಳಾಗಿರುತ್ತಾರೆ. ಸದರಿ ಎದುರುದಾರರುಗಳ ವಿರುದ್ಧ ಅರ್ಜಿದಾರರು ಎದುರುದಾರರ ವಿರುದ್ಧ ಮೈಸೂರು ಜಿಲ್ಲೆ, ನಂಜನಗೂಡು ತಾ॥, ಕಸಬಾ ಹೋಬಳಿ, ನಂಜನಗೂಡು ಗ್ರಾಮಕ್ಕೆ ಸೇರಿದ ಸರ್ವೆ ನಂ. 1303/3 ಹೊಸ ಸರ್ವೆ ನಂ. 1303/3ಎ ರಲ್ಲಿ 10 ಗುಂಟೆ ಜಮೀನು, ಮತ್ತು ಡೀಟ್ಟೋ ಗ್ರಾಮಕ್ಕೆ ಸೇರಿದ ಸರ್ವೆ ನಂ. 1303/3ಬಿ ಒಟ್ಟು ವಿಸ್ತೀರ್ಣ 1 ಎಕರೆ 01 ಗುಂಟೆ ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ– ಸರ್ಕಾರಿ ಘಾರಂ, ಪಶ್ಚಿಮಕ್ಕೆ – ದೇವಮ್ಮ ರವರ ಜಮೀನು, ಉತ್ತರಕ್ಕೆ – ನೀಲಗಿರಿ ಸಿದ್ದಯ್ಯ ರವರ ಜಮೀನು, ದಕ್ಷಿಣಕ್ಕೆ – ಹೆಚ್ ಪಿ ರಾಮಣ್ಣ ರವರ ಜಮೀನು, ಸದರಿ ಜಮೀನಿಗೆ ಸಂಬಂಧಪಟ್ಟಂತೆ ಭಾಗಾಂಶ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯುಲ್ಲಿ ಮೇಲ್ಕಂಡ ವ್ಯಕ್ತಿಗಳು ಸಹ ಪ್ರತಿವಾದಿಗಳಾಗಿರುವುದರಿಂದ ಮೇಲ್ಕಂಡ ವಿಳಾಸದಲ್ಲಿ ನ್ಯಾಯಾಲಯದ ಸಮನ್ಸ್ ಮತ್ತು ಅಂಚೆ ಮೂಲಕ ನ್ಯಾಯಾಲಯದಿಂದ ಸಮನ್ಸ್ ನೀಡಿದ್ದರೂ ಸಹ ವಿಳಾಸದಲ್ಲಿ ಇರುವುದಿಲ್ಲ ಎಂದು ನ್ಯಾಯಾಲಯಕ್ಕೆ ಸಮನ್ಸ್‌ನಲ್ಲಿ ಷರಾ ನೀಡಲಾಗಿದೆ. ಆ ಕಾರಣ ದಾವಾ ಷೆಡ್ಯೂಲ್ ಆಸ್ತಿಯ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆ ಇದ್ದಲ್ಲಿ ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ದಿನಾಂಕ: 07/09/2022 ರಂದು ಬೆಳಿಗ್ಗೆ 11:00 ಘಂಟೆಗೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ನ್ಯಾಯಾಲಯದ ಅಪ್ಪಣೆಮೇರೆಗೆ
ಸಹಿ/–ಶಿರಸ್ತೇದಾರರು,
ನಂಜನಗೂಡು ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ

ಸಹಿ/– (ಕೆ.ಎಸ್.ಕರಿಯಪ್ಪ)
ಅರ್ಜಿದಾರರ ಪರ ವಕೀಲರು
ದಿನಾಂಕ: 21/07/2022
ಸ್ಥಳ: ನಂಜನಗೂಡು.

AFFIDAVIT

I, **Greeshma Nagaraj Murdeshwar**, D/o. **Nagaraj Murdeshwar**, residing at Plot 2B, Pinewood Park Apartment, Ambedkar Road, RTO Circle, Lakshmipuram, Mysuru-570004, Karnataka, citizen of India swear that, my name is **Greeshma Nagaraj Murdeshwar**, but in my passport my name is mentioned as **Greeshma Murdeshwar & in my Aadhar card** my name is mentioned as **Greeshma Nagaraj Murdeshwar.** Hence I affirm on oath that **Greeshma Nagaraj Murdeshwar & Greeshma Murdeshwar** belongs to me only and are one and the same person, vide affidavit sworn before **Krishnamurthy**, Notary, Mysore on 21st July 2022.

Sd/- Greeshma Nagaraj Murdeshwar

ಸಾರ್ವಜನಿಕ ತಿಳುವಳಿಕೆ ಪತ್ರ

ಈ ಮೂಲಕ ಸಮಸ್ತ ಸಾರ್ವಜನಿಕರ ಗಮನಕ್ಕೆ / ತಿಳುವಳಿಕೆಗೆ ಪ್ರಚರ ಪಡುಸುತ್ತಿರುವುದೇನೆಂದರೆ ನನ್ನ ಕಕ್ಷಿದಾರಾರು, ಈ ಕೆಳಗಿನ ಅನುಸೂಚಿಯಲ್ಲಿ ನಮೂದಿಸಿರುವ ಜಮೀನನ್ನು ಅದರ ಸಹ ಮಾಲೀಕರುಗಳಾದ ಅಂದರೆ ಬೆಂಗಳೂರು – 560043, ಹೊರಮಾವು, ಕಲ್ಕೆರೆ, ಎನ್.ಆರ್.ಐ ಲೇಔಟ್, ಸುಂದರ ಆಂಜನೇಯ ದೇವಸ್ಥಾನದ ಹತ್ತಿರ, 3ನೇ ಕ್ರಾಸ್, 11ನೇ ಮೇನ್, 'ಅನುರಾಜ್', ಮನೆ ನಂ. 22 ರಲ್ಲಿ ವಾಸವಾಗಿರುವ ಲೇಟ್ ಬಿ. ಎಸ್. ಮೇಘರಾಜುರವರ ಧರ್ಮಪತ್ನಿಯಾದ ಶ್ರೀಮತಿ ಅನ್ನಪೂರ್ಣ ಎಲ್, ಲೇಟ್ ಬಿ. ಎಸ್. ಮೇಘರಾಜುರವರ ಮಕ್ಕಳಾದ ಶ್ರೀ ಬಿ. ಎಸ್. ಕಿರಣ್ ಕುಮಾರ್ ಮತ್ತು ಶ್ರೀ. ಬಿ. ಎಸ್. ಅರುಣ್ ಕುಮಾರ್ (ಇನ್ನು ಮುಂದೆ "ಮಾಲೀಕರು" ಎಂದು ಕರೆಯಲಾಗುವುದು) ರವರುಗಳಿಂದ ಸೂಕ್ತ ಮೌಲ್ಯಯುತವಾದ ಪ್ರತಿಫಲಕ್ಕೆ ಖರೀದಿಸುವ ಇರಾದೆಯನ್ನು ಹೊಂದಿರುವುದು ಸರಿಯಷ್ಟೆ. ಮೇಲೆ ತಿಳಿಸಿರುವ ಮಾಲೀಕರುಗಳು ಮಾತ್ರ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಅವರ ಸ್ವಾಧೀನದಲಿದ್ದು ಅವರುಗಳು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವಂತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೇ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವಾ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ (ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಆಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್, ಸಿವಿಲ್, ರವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್‌ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ದಿಷ್ಟ ಪರಿಹಾರ ಸಾಲ ಬಾಕಿ, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 7 (ಏಳು) ದಿನಗಳ ಒಳಗೆ ಸೂಕ್ತ ದಾಖಲೆಗಳೊಂದಿಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಜಮೀನಿನ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸೌಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಇರುವುದಿಲ್ಲಾ ಎಂದು ಪರಿಗಣಿಸಿ, ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತು / ಜಮೀನಿನ ಸಂಬಂಧ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆತಕರಾರುಗಳ ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮುಳ್ಳೂರು ಗ್ರಾಮದ ಸರ್ವೆ ನಂ. 131/2, ವಿಸ್ತೀರ್ಣ 1 ಎಕರೆ 05 ಗುಂಟೆ ವಸತಿ ಉದ್ದೇಶಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ರವರ ಅಧಿಕೃತ ಜ್ಞಾಪಕ ಅರ್ಜಿ ಸಂಖ್ಯೆ 352701, ದಿನಾಂಕ 15–07–2022 ರಂತೆ ಅನ್ಯಕ್ರಾಂತವಾಗಿ – ಅಭಿವೃದ್ಧಿಪಡಿಸದಿರುವ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ – ಸರ್ವೆ ನಂ. 130 ರ ಜಮೀನು ಪಶ್ಚಿಮಕ್ಕೆ – ಸರ್ವೆ ನಂ. 131/1 ರ ಜಮೀನು ಉತ್ತರಕ್ಕೆ – ಸರ್ಕಾರಿ ರಸ್ತೆ ದಕ್ಷಿಣಕ್ಕೆ – ಸರ್ವೆ ನಂ. 139 ರ ಜಮೀನು

ದಿನಾಂಕ : 25/07/2022 ಸ್ಥಳ : ಮೈಸೂರು

ವಿ. ವಿ. ಮನುಕುಮಾರ್
ವಕೀಲರು
ನಂ. 66/1 – ಬಿ1, 1ನೇ ಮಹಡಿ, 3ನೇ ಮುಖ್ಯ ರಸ್ತೆ, 5ನೇ ಕ್ರಾಸ್ ರಸ್ತೆ, ಆರ್. ಕೆ. ಮೆಡಿಕಲ್ಸ್ ಎದುರು, ಸರಸ್ವತಿಪುರಂ, ಮೈಸೂರು – 570009
ಮೊಬೈಲ್ ನಂ. 94482 22306

GSSS INSTITUTE OF ENGINEERING AND TECHNOLOGY FOR WOMEN

GEETHA SHISHU SHIKSHANA SANGHA (R)
KRS Road, Metagalli, Mysuru - 570016

APPOINTMENT NOTIFICATION

Sl. No.	Position	Department	Qualification
1.	Instructor / Asst. Instructor	CSE, ISE, CSE (AI & ML)	Diploma / BE / BCA / B.Sc in CS
2.	Instructor / Asst. Instructor	EEE	Diploma / BE in EEE
3.	Instructor / Asst. Instructor	Chemistry	B.Sc.
4.	SDA	Purchase & Store	Any degree with computer Knowledge

- Salary: Based on credentials & experience.
- Apply with color photo and copy of all certificates to Hon. Secretary before 08-08-2022.

Dr. M. Jagannatha Shenoi, President
Smt. Vanaja B. Pandit, Hon. Secretary
www.geethashishu.in

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ

ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಟೆಂಪ್ರ:ಸಇಂ–02:2022–23 ದಿನಾಂಕ:22.07.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:05/2022–23

ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರಿಂದ, ವಿವಿಧ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಯಾಗಿರುವ ಈ ವಿಭಾಗ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಗಳಿಗೆ/ಇಂಡೆಂಟ್ ಸಂಖ್ಯೆಯ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್/ಮರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ : 01. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಕೆ.ಆರ್.ಪೇಟೆ ತಾ: ಕಿಕ್ಕೇರಿ ಗ್ರಾಮದ ಕೆ.ಪಿ.ಎಸ್ (ಪ್ರೌ.ಶಾ.ವಿ) ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಗಾರಿ.** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **30.50.**
ಕ್ರ ಸಂ : 02. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಕೆ.ಆರ್.ಪೇಟೆ ತಾ: ಜಕ್ಕನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ನಿರ್ಮಾಣ ಕಾಮಗಾರಿ.** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **9.50.**
ಕ್ರ ಸಂ : 03. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಕೆ.ಆರ್.ಪೇಟೆ ತಾ: ಕುಂದೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ನಿರ್ಮಾಣ ಕಾಮಗಾರಿ.** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **9.50.**
ಕ್ರ ಸಂ : 04. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಕೆ.ಆರ್.ಪೇಟೆ ತಾ: ಲೊಕನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ನಿರ್ಮಾಣ ಕಾಮಗಾರಿ.** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **9.50.**
ಕ್ರ ಸಂ : 05. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಕೆ.ಆರ್.ಪೇಟೆ ತಾ: ರಂಗನಾಥಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ನಿರ್ಮಾಣ ಕಾಮಗಾರಿ.** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **9.50.**
ಕ್ರ ಸಂ : 06. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಕೆ.ಆರ್.ಪೇಟೆ ತಾ: ಕೆ.ಆರ್.ಪೇಟೆ ಟೌನ್ ಬಾಲಕರ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ (ಕೆ.ಪಿ.ಎಸ್ ವಿಲೀನ) ಕಾಮಗಾರಿ.** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **12.00.** ಕ್ರ ಸಂ : 07. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಮಳವಳ್ಳಿ ತಾಲ್ಲೂಕು ಕಿರುಗಾವಲು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌ.ಶಾ.ವಿ) ಹೆಚ್ಚುವರಿ ಕೊಠಡಿ ನಿರ್ಮಾಣ ಕಾಮಗಾರಿ.** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **27.00.** ಕ್ರ ಸಂ : 08. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಮಳವಳ್ಳಿ ತಾ. ಅಂತರಹಳ್ಳಿ ಗ್ರಾಮ ಪರಿಮಿತಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ.** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **18.00.**
ಕ್ರ ಸಂ : 09. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಪ್ಯಾಕೇಜ್ ಸಂಖ್ಯೆ:MDY-MVL03:(3 WORKS) ಮಳವಳ್ಳಿ ತಾ. ಗ್ರಾಮದೇವತೆ ಪುರ, ಗೊಲ್ಲರಹಳ್ಳಿ & ನರೀಪುರ ಗ್ರಾಮಗಳ ಪರಿಮಿತಿಯಲ್ಲಿ ರಸ್ತೆ & ಚರಂಡಿ ಅಭಿವೃದ್ಧಿ (INDENT No:89359/CALL-2).** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **50.00.**
ಕ್ರ ಸಂ : 10. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಮಳವಳ್ಳಿ ತಾ. ಕಾಳಕೆಂಪನದೊಡ್ಡಿ ಕುರುಬರ ಬೀದಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ (INDENT No:69896/CALL-5).** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **8.80.**
ಕ್ರ ಸಂ : 11. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಮಳವಳ್ಳಿ ತಾ. ಮಾದಹಳ್ಳಿ ಗ್ರಾಮದ ಮಹೇಶ ಮನೆ ಹಾಗೂ ಮಾರಿಗುಡಿವರೆಗೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿ (INDENT No:69898/CALL-5).** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **8.80.** ಕ್ರ ಸಂ : 12. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಮಳವಳ್ಳಿ ತಾ. ಹುಲ್ಲಹಳ್ಳಿ ಗ್ರಾಮದ ಪಟೇಲರ ಮನೆ ಬೀದಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ (INDENT No:69882/CALL-5).** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **8.80.** ಕ್ರ ಸಂ : 13. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಮಳವಳ್ಳಿ ತಾ. ಬಾಣಗಹಳ್ಳಿ ಗ್ರಾಮದ ಮುಖ್ಯ ರಸ್ತೆಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ (INDENT No:69888/CALL-5).** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **9.70.** ಕ್ರ ಸಂ : 14. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಮಳವಳ್ಳಿ ತಾ. ಹೊಸಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ನಿರ್ಮಾಣ (INDENT No:89362/CALL-2).** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **9.50.** ಕ್ರ ಸಂ : 15. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಕೆ.ಆರ್.ಪೇಟೆ ತಾ: ಕೆ.ಆರ್.ಪೇಟೆ ಟೌನ್ (ದಕ್ಷಿಣ) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ನಿರ್ಮಾಣ (INDENT No:89383/CALL-2).** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **9.50.**
ಕ್ರ ಸಂ : 16. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಕೆ.ಆರ್.ಪೇಟೆ ತಾ: ಕೆ.ಆರ್.ಪೇಟೆ ಟೌನ್ (ಬಾಲಕರು) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ನಿರ್ಮಾಣ (INDENT No:89384/CALL-2).** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **9.50.** ಕ್ರ ಸಂ : 17. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಕೆ.ಆರ್.ಪೇಟೆ ತಾ: ಹೊಸಹೊಳಲು (ಬಾಲಕಿಯರು) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ನಿರ್ಮಾಣ (INDENT No:89386/CALL-2).** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **9.50.** ಕ್ರ ಸಂ : 18. ಕಾಮಗಾರಿಯ ಇಂಡೆಂಟ್ ಸಂಖ್ಯೆ : **ಮಳವಳ್ಳಿ ಟೌನ್ ಸರ್.ಎಂ.ವಿಶ್ವೇಶ್ವರಯ್ಯ ಯುವಕರ ಸಂಘ(ನೋಂ) ಒಕ್ಕಲಿಗರ ಬೀದಿ ಪೇಟೆ ಮಳವಳ್ಳಿ ಟೌನ್ ಶ್ರೀ.ವಿಘ್ನೇಶ್ವರ ದೇವಾಲಯದ ಕಟ್ಟಡ ಕಾಮಗಾರಿ. (INDENT No:88784/CALL-3).** ಟೆಂಡರಿಗೆ ಇಡಲಾದ ಮೊತ್ತ (ರೂ. ಲಕ್ಷಗಳಲ್ಲಿ) : **5.00.**

ಕಾಲಮಿತಿ ಕ್ರ.ಸಂ. 8 ರಿಂದ ಕ್ರ.ಸಂ 13ರ ಕಾಮಗಾರಿಗಳಿಗೆ 2 ತಿಂಗಳು. ಉಳಿದ ಕಾಮಗಾರಿಗಳಿಗೆ **4 ತಿಂಗಳು,** ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ **ದಿನಾಂಕ : 04.08.2022 ಸಂಜೆ 4.00 ಗಂಟೆವರೆಗೆ,** ಟೆಂಡರ್ ದಾಖಲಾತಿಗಳನ್ನು **https://eproc.karnataka.gov.in** ಆನ್‌ಲೈನ್‌ನಲ್ಲಿ **ದಿನಾಂಕ:26.07.2022ರಿಂದ** ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ **e-procurement portal** ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/232/2022–23 **ಸಹಿ/–ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ**